ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 21 ಸಂಚಿಕೆ 44 ಅಕ್ಟೋಬರ್ 26-ನವಂಬರ್ 1, 1998 ರೂ. 4.00



ಬಿ.ಜೆ.ಪಿ. ಸರಕಾರಕ್ಕೆ ಮತ್ತೊಂದು ಮುಖಭಂಗ

ಶಿಕ್ಷಣ ರಂಗದಲ್ಲಿ ಬಚ್ಚಿಟ್ಟ ಅಜೆಂಡಾ ಹೇರುವ ಪ್ರಯತ್ನಕ್ಕೆ ಬಲವಾದ ಪ್ರತಿರೋಧ

ಜನಗಳು ವಿಪರೀತ ಬೆಲೆಯೇರಿಕೆಯಿಂದ ತತ್ತರಿಸುತ್ತಿದ್ದರೂ ಏನೂ ಮಾಡದೆ ಹೇಗಾದರೂ ಅಧಿಕಾರ ಉಳಿಸಿಕೊಳ್ಳುವ ಕಸರತ್ತುಗಳ ನಡುವೆಯೂ ವಾಜಪೇಯಿ ಸರಕಾರ ಬಚ್ಚಿಟ್ಟ ಬಿ.ಜೆ.ಪಿ. ಅಜೆಂಡಾವನ್ನು ಹೇರಲು ಮಾಡುತ್ತಿರುವ ನಗ್ನ ಪ್ರಯತ್ನಗಳಿಗೆ ಅಕ್ಟೋಬರ್ 22 ರಂದು ಒಂದು ಬಲವಾದ ಏಟು ಬಿದ್ದಿದೆ. ಅಂದು ಆರಂಭವಾದ ಶಿಕ್ಷಣ ಮಂತ್ರಿಗಳ ಸಮ್ಮೇಳನದಲ್ಲಿ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಕೂಟಕ್ಕೆ ಸೇರದ ಒಂಭತ್ತು ರಾಜ್ಯಗಳಾದ ಪಶ್ಚಿಮ ಬಂಗಾಳ, ಕೇರಳ, ತ್ರಿಪುರಾ, ಕರ್ನಾಟಕ, ತಮಿಳುನಾಡು, ಪಾಂಡಿಚೇರಿ, ಬಿಹಾರ, ಮಧ್ಯಪ್ರದೇಶ ಮತ್ತು ಒರಿಸ್ಸಾ ಮಾತ್ರವಲ್ಲ, ಬಿ.ಜೆ.ಪಿ.ಯ ಮಿತ್ರ ಪಕ್ಷಗಳಾದ ತೆಲುಗು ದೇಶಂ ಹಾಗೂ ಅಕಾಲಿ ಪಕ್ಷಗಳು ಅಧಿಕಾರ ನಡೆಸುತ್ತಿರುವ ಆಂಧ್ರಪ್ರದೇಶ ಮತ್ತು ಪಂಜಾಬ್‌ಗಳಿಂದಲೂ ಬಲವಾದ ಪ್ರತಿಭಟನೆಯನ್ನು ಕಂಡು ಈ ಸಮ್ಮೇಳನದ ಅಜೆಂಡಾವನ್ನು ಬದಲಿಸಬೇಕಾಗಿ ಬಂದಿದೆ.

ಬಿ.ಜೆ.ಪಿ. ಸರಕಾರ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಆರ್.ಎಸ್.ಎಸ್. ಪ್ರೇರಿತ ಹಿಂದುತ್ವ ಅಜೆಂಡಾವನ್ನು ತೂರಿಸುವ ನೇರ ಪ್ರಯತ್ನ ಮಾಡುತ್ತಿದ್ದು ಇದನ್ನು ದೇಶದ ಎಲ್ಲಾ ಜಾತ್ಯಾತೀತ ಶಕ್ತಿಗಳು ಬಯಲಿಗೆಳೆದು ಪ್ರತಿರೋಧಿಸಬೇಕು, ವಿರೋಧಿಸಬೇಕೆಂದು ಈ ಸಮ್ಮೇಳನ ನಡೆಯುವ ಹಿಂದಿನ ದಿನವೇ ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಷನ್ ಸಿಂಗ್ ಸುರ್ಜಿತ್‌ರವರು ಪತ್ರಿಕಾ ಸಮ್ಮೇಳನವೊಂದರಲ್ಲಿ ಬಲವಾಗಿ ಪ್ರತಿಪಾದಿಸಿದ್ದರು. ಈ ಪತ್ರಿಕಾ ಸಮ್ಮೇಳನದಲ್ಲಿ ಸುರ್ಜಿತ್ ಶಿಕ್ಷಣ ಮಂತ್ರಿಗಳ ಸಮ್ಮೇಳನದಲ್ಲಿ ಆರ್.ಎಸ್.ಎಸ್. ಹೇಗೆ ತನ್ನ ಅಜೆಂಡಾವನ್ನು ಹೇರಲು ಸನ್ನಾಹ ನಡೆಸುತ್ತಿದೆ ಎಂಬುದರ ವಿವರಗಳನ್ನು ನೀಡಿದ್ದರು.

ಆರ್.ಎಸ್.ಎಸ್.ನ ಈ ಆಟವನ್ನು ಮೊದಲಿಗೆ ಅರಿತವರಲ್ಲಿ ಪಶ್ಚಿಮ ಬಂಗಾಳದ ಶಿಕ್ಷಣ ಮಂತ್ರಿ ಕಾಂತಿ ಬಿಸ್ವಾಸ್ ಒಬ್ಬರು. ಶಿಕ್ಷಣ ಮಂತ್ರಿಗಳಿಗೆ ಮೊದಲೇ ನೀಡಿದ ಈ ಅಜೆಂಡಾ ಟಿಪ್ಪಣಿಗಳನ್ನು ಕಂಡ ಅವರು ಈ ಆರ್.ಎಸ್.ಎಸ್. ಯೋಜನೆಯನ್ನು ಪ್ರತಿರೋಧಿಸಲು ಜಂಟಿ ಪ್ರಯತ್ನ ನಡೆಯಬೇಕು ಎಂದು ಎಲ್ಲಾ ಬಿ.ಜೆ.ಪಿ.ಯೇತರ ರಾಜ್ಯ ಸರಕಾರಗಳ ಶಿಕ್ಷಣ ಮಂತ್ರಿಗಳಿಗೆ ಪತ್ರ ಬರೆದರು. ಮಧ್ಯ ಪ್ರದೇಶದ, ಆಂಧ್ರಪ್ರದೇಶಗಳಿಂದಲೂ ವಿರೋಧ ಕಂಡು ಬಂತು.

ಶಿಕ್ಷಣ ಮಂತ್ರಿಗಳ ಈ ಎರಡು ದಿನಗಳ ಸಮ್ಮೇಳನದಲ್ಲಿ ಒಬ್ಬ ಅನಾಮಧೇಯ "ವಿಶೇಷಜ್ಞ" ಪ್ರಬಂಧ ಮಂಡಿಸುವರು ಎಂದು ಹೇಳಲಾಗಿತ್ತು. ಒಂದು ಅಧಿಕೃತ ಸಮ್ಮೇಳನದಲ್ಲಿ ಇಂತಹ ಮಂಡನೆಗೆ ಹಿಂದೆಂದೂ ಅವಕಾಶವಿರಲಿಲ್ಲ. ಈ ವಿಶೇಷಜ್ಞ ಪಿ.ಡಿ. ಚಿತ್ಲಾಂಗಿಯಾ ಒಬ್ಬ ಬಿ.ಜೆ.ಪಿ. ಬೆಂಬಲಿತ ಕೈಗಾರಿಕೋದ್ಯಮಿ. ಆರ್.ಎಸ್.ಎಸ್.ನ ಶಿಕ್ಷಣ ಸಂಸ್ಥೆಗಳಾದ 'ವಿದ್ಯಾಭಾರತಿ'ಯಲ್ಲಿ ಸಕ್ರಿಯವಾಗಿರುವುದೇ ಈ ಕೈಗಾರಿಕೋದ್ಯಮಿಯ ಶಿಕ್ಷಣ ವಿಶೇಷಜ್ಞತೆ.

ಕೇಂದ್ರ ಮಾನವ ಸಂಪನ್ಮೂಲ ಮಂತ್ರಾಲಯ ನೀಡಿದ ಅಜೆಂಡಾ ಪೇಪರುಗಳಲ್ಲಿ ಒಂದು 13 ಪುಟದ 'ವಿಶೇಷಜ್ಞರ ಗುಂಪಿನ ಶಿಫಾರಸುಗಳು' ಎಂಬ ದಸ್ತಾವೇಜು ಇತ್ತು. ಈ ವಿಶೇಷಜ್ಞರು ಯಾರು ಎಂದು ತಿಳಿಸಿರಲಿಲ್ಲ, ಆದರೆ ಅವರ ಶಿಫಾರಸುಗಳನ್ನು ನೋಡಿದರೆ ಅವರು ಆರ್.ಎಸ್.ಎಸ್.ನ 'ವಿದ್ಯಾಭಾರತಿ'ಯವರು ಎಂಬುದರಲ್ಲಿ ಸಂದೇಹವೇ ಉಳಿಯುವುದಿಲ್ಲ. ಏಕೆಂದರೆ ಆಗಸ್ಟ್‌ನಲ್ಲಿ ನಡೆದ ಈ ಸಂಘಟನೆಯ ಸಮ್ಮೇಳನದ ವಿಚಾರಗಳೇ ಇಲ್ಲಿದ್ದವು.

ಪತ್ರಿಕಾ ಸಮ್ಮೇಳನದಲ್ಲಿ ಸುರ್ಜಿತ್ 'ಹಿಂದುತ್ವ'ದ ಶಿಫಾರಸುಗಳನ್ನು ಓದಿ ಹೇಳಿದರು.

- ಪ್ರಾಥಮಿಕ ಶಿಕ್ಷಣದಿಂದ ಉಚ್ಚ ಶಿಕ್ಷಣದವರೆಗೂ ಪಠ್ಯವನ್ನು 'ಭಾರತೀಕರಣ' ಗೊಳಿಸಬೇಕು, 'ರಾಷ್ಟ್ರೀಕರಣ' ಗೊಳಿಸಿಬೇಕು, 'ಆಧ್ಯಾತ್ಮೀಕರಣ' ಗೊಳಿಸಬೇಕು - ಎಲ್ಲಾ ಶಿಕ್ಷಣ ಮಟ್ಟಗಳಲ್ಲಿ, ಕೋರ್ಸುಗಳಲ್ಲಿ, ವೃತ್ತಿ ಶಿಕ್ಷಣದಲ್ಲೂ ಶೇ. 10 ರಿಂದ 25 ರವರೆಗೆ 'ಭಾರತೀಯ ಸಂಸ್ಕೃತಿ'ಯ ಸಾರಾಂಶವಿರಬೇಕು.
- ದೇಶದ 'ಸಾಂಸ್ಕೃತಿಕ ಐಕ್ಯತೆ'ಯ ಪ್ರಾಚೀನ 'ಬುದ್ಧಿಮತ್ತೆ'ಯ ಪ್ರತೀಕವಾದ ಸಂಸ್ಕೃತ ಭಾಷೆಯನ್ನು ಮೂರನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕಡ್ಡಾಯ ಮಾಡಬೇಕು!
- ಎಲ್ಲಾ ಶಾಲೆಗಳಲ್ಲಿ, ಕಾಲೇಜುಗಳಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಎಲ್ಲಾ ಹಂತಗಳಲ್ಲಿ 'ನೈತಿಕ' ಮತ್ತು 'ಆಧ್ಯಾತ್ಮಿಕ' ಶಿಕ್ಷಣ ಆರಂಭಿಸಬೇಕು!
- ಅಲ್ಪ ಸಂಖ್ಯಾತರಿಗೆ ತಮ್ಮದೇ ಶಿಕ್ಷಣ ಸಂಸ್ಥೆಗಳನ್ನು ಹೊಂದುವ ಹಕ್ಕು ನೀಡುವ ಸಂವಿಧಾನದ 30ನೇ ಕಲಮನ್ನು ತಿದ್ದುಪಡಿ ಮಾಡಬೇಕು!
- 'ಹಿಂದುತ್ವ ಒಂದು ಜೀವನ ಪದ್ಧತಿ' ಎಂದು ಸುಪ್ರೀಂ ಕೋರ್ಟ್ ಹೇಳಿರುವುದರಿಂದ ವೇದ, ಉಪನಿಷತ್ತುಗಳು ಪ್ರಾಥಮಿಕ ಹಂತದಿಂದ ಹಿಡಿದು ಉನ್ನತ ವ್ಯಾಸಂಗದವರೆಗೆ, ವೃತ್ತಿ ಶಿಕ್ಷಣದಲ್ಲೂ ಸ್ಥಾನ ಪಡೆಯಬೇಕು.

ಶಿಕ್ಷಣ ರಂಗವನ್ನು ತನ್ನ ಕೈವಶ ಮಾಡಿಕೊಳ್ಳುವ ಆರ್.ಎಸ್.ಎಸ್.ನ ಈ ಯೋಜನೆಯನ್ನು ತೀಕ್ಷ್ಣವಾಗಿ ಟೀಕಿಸಿದ ಸುರ್ಜಿತ್ "ಸುಪ್ರೀಂ ಕೋರ್ಟ್ ಜಾತ್ಯಾತೀತತೆ ಭಾರತೀಯ ಸಂವಿಧಾನದ ಮೂಲಭೂತ ಅಂಶ ಎಂದಿದೆ - ಇದು ನಮ್ಮ ರಾಷ್ಟ್ರೀಯ ಐಕ್ಯತೆಯ ಅಡಿಗಲ್ಲು. ಆದರೆ ಈ ಅಜೆಂಡಾದಲ್ಲಿ ಅದರ ಪ್ರಸ್ತಾಪವೇ ಇಲ್ಲ" ಎಂದರು. ಜಾತ್ಯಾತೀತತೆ ಎಂದರೆ ಧರ್ಮ ಮತ್ತು ರಾಜಕೀಯವನ್ನು ಪ್ರತ್ಯೇಕಿಸುವುದು ಎಂದು ಅದೇ ಸುಪ್ರೀಂ ಕೋರ್ಟ್ ನಿರ್ವಚಿಸಿರುವುದನ್ನು ಈ ಅಜೆಂಡಾ ಸಂಪೂರ್ಣವಾಗಿ ನಿರ್ಲಕ್ಷಿಸಿರುವುದೇಕೆ?

ಆರ್.ಎಸ್.ಎಸ್.ನ ಒಟ್ಟು ಗುರಿಯೆಂದರೆ ಶಿಕ್ಷಣ ವ್ಯವಸ್ಥೆಯನ್ನು ವಿಷಯುಕ್ತಗೊಳಿಸುವುದು ಹಾಗೂ ವಿದ್ಯಾರ್ಥಿಗಳಲ್ಲಿ ಕೋಮುವಾದಿ ದೃಷ್ಟಿಕೋನವನ್ನು ಬೆಳೆಸುವುದು ಎಂದ ಸುರ್ಜಿತ್ 'ಭಾರತೀಯ ಸಂಸ್ಕೃತಿ'ಯ ಹೆಸರಿನಲ್ಲಿ, 'ಆಧ್ಯಾತ್ಮಿಕತೆ'ಯ ಹೆಸರಿನಲ್ಲಿ ಭಾರತ ಒಂದು ಹಿಂದೂ ದೇಶ ಎಂದು ಬಿಂಬಿಸುವುದು ಅವರ ಉದ್ದೇಶ. "ನೀವು ಭಾರತೀಯ ಸಂಸ್ಕೃತಿಯ ಬಹುರೂಪತೆ ಯನ್ನು ನಿರ್ಲಕ್ಷಿಸಲು ಸಾಧ್ಯವೇ? ತಮಿಳು ಸಂಸ್ಕೃತಿ, ತೆಲುಗು ಸಂಸ್ಕೃತಿ, ಕನ್ನಡ ಸಂಸ್ಕೃತಿಯ ಗತಿಯೇನು?" ಎಂದು ಪ್ರಶ್ನಿಸಿದ ಸುರ್ಜಿತ್ ಭಾರತ ಹಲವು ಭಾಷೆಗಳು, ಇತಿಹಾಸಗಳು, ಸಂಸ್ಕೃತಿಗಳ ಬಹುರೂಪತೆಯ ಶ್ರೀಮಂತ ಪರಂಪರೆ ಹೊಂದಿದೆ. ಈ ಪರಂಪರೆಗೆ ಇದುವರೆಗೆ ಒಂದು ಐಕ್ಯ ಕಣ್ಣೋಟವನ್ನು, ಸಮಿಶ್ರ ಸಂಸ್ಕೃತಿಯನ್ನು ನೀಡಿರುವುದು ಜಾತ್ಯಾತೀತತೆಯ ವಿಚಾರ. ಇದನ್ನು ಆರ್.ಎಸ್.ಎಸ್. ಮತ್ತು ಬಿ.ಜೆ.ಪಿ. ನಿರಾಕರಿಸ ಬಯಸುತ್ತಿದೆ. ಆರ್.ಎಸ್.ಎಸ್.ನ ಈ ಅಜೆಂಡಾವನ್ನು ದೇಶದ ಜಾತ್ಯಾತೀತ ಶಕ್ತಿಗಳ ಐಕ್ಯ ಆಂದೋಲನ ಪ್ರತಿರೋಧಿಸಬೇಕಾದ್ದು ಇಂದಿನ ಅವಶ್ಯಕತೆ ಎಂದು ಸುರ್ಜಿತ್ ಹೇಳಿದರು.

ವ್ಯಾಪಕ ವಿರೋಧ

ಮರುದಿನ ಅಂದರೆ ಅಕ್ಟೋಬರ್ 22 ರಂದು ಶಿಕ್ಷಣ ಮಂತ್ರಿಗಳ ಸಮ್ಮೇಳನದ ಆರಂಭದಲ್ಲೇ ಈ ಪ್ರತಿರೋಧ ಭುಗಿಲೆದ್ದಿತು. 'ಸರಸ್ವತೀ ವಂದನಾ'ದೊಂದಿಗೆ ಸಮ್ಮೇಳನ ಆರಂಭವಾಗುವುದಕ್ಕೆ ಬಲವಾದ ವಿರೋಧ ತೆಲುಗು ದೇಶಂನ ಶಿಕ್ಷಣ ಮಂತ್ರಿಗಳಿಂದಲೇ ಬಂತು. ಅಕಾಲಿ ದಳದ ಶಿಕ್ಷಣ ಮಂತ್ರಿಗಳೂ ವಿರೋಧಿಸಿದರು. ಒಂದು ಮತದ ಈ ಪ್ರಾರ್ಥನೆಯನ್ನು ಸೇರಿಸಿದಂತೆ, ದೇಶದಲ್ಲಿನ ಇತರ ಮತ-ಧರ್ಮಗಳ ಪ್ರಾರ್ಥನೆಗಳನ್ನೂ ಸೇರಿಸಬಲ್ಲಿರಾ ಎಂದು ಖಾರವಾಗಿ ಪ್ರಶ್ನಿಸಲಾಯಿತು. ಕೇಂದ್ರ ಮಾನವ ಸಂಪನ್ಮೂಲ ಮಂತ್ರಿಗಳ ಸಮಜಾಯಿಷಿ ಕೊಡುವ ಪ್ರಯತ್ನ ಶೋಚನೀಯವಾಗಿ ವಿಫಲಗೊಂಡಿತು. ಬಿ.ಜೆ.ಪಿ.ಯೇತರ ರಾಜ್ಯ ಸರಕಾರಗಳ ಶಿಕ್ಷಣ ಮಂತ್ರಿಗಳು ಸಭಾತ್ಯಾಗ ಮಾಡಿದರು. ಉದ್ಘಾಟನೆಗೆಂದು ಬಂದ ಪ್ರಧಾನಿಗಳು ಮೂಕರಾಗಿ ನೋಡುತ್ತಿದ್ದರು.


ಸಮ್ಮೇಳನದ ಮೊದಲ ಅಧಿವೇಶನ ಆರಂಭವಾಗುತ್ತಿದಂತೆ ಮತ್ತೆ ಪ್ರತಿರೋಧ ವ್ಯಕ್ತಗೊಂಡಿತು. ಪಿ.ಡಿ. ಚಿತ್ಲಾಂಗಿಯಾರ ಪ್ರಬಂಧ ವಾಚನಕ್ಕೆ ಅವಕಾಶವೀಯಬಾರದು, 'ಪರಿಣತರ ಗುಂಪಿನ ಶಿಫಾರಸು'ಗಳನ್ನು ಕೈಬಿಡಬೇಕು ಎಂಬ ತೀವ್ರ ಒತ್ತಾಯ ಬಂತು. ಮತ್ತೆ ಸಭಾತ್ಯಾಗ ನಡೆದಾಗ ಕೇಂದ್ರ ಮಾನವ ಸಂಪನ್ಮೂಲ ಮಂತ್ರಿಗಳು ನಿರ್ವಾಹವಿಲ್ಲದೆ ಇವೆರಡೂ ಅಂಶಗಳನ್ನು ಕೈ ಬಿಡಲು ಒಪ್ಪಬೇಕಾಗಿ ಬಂತು.

ಮಹಿಳಾ ಸಂಘಟನೆಗಳ ವಿರೋಧ

ಈ 'ಪರಿಣತರ ಶಿಫಾರಸು'ಗಳಲ್ಲಿ ಮನೆವಾರ್ತೆ ನೋಡಿಕೊಳ್ಳುವ 'ಶಿಕ್ಷಣ'ವನ್ನು ಕಡ್ಡಾಯಗೊಳಿಸುವ ಮಾತೂ ಇತ್ತು. ಇದು ಮಹಿಳೆಯರನ್ನು ಎರಡನೇ ದರ್ಜೆಯ ನಾಗರೀಕರಾಗಿಸುವ ಆರ್.ಎಸ್.ಎಸ್. ಕಣ್ಣೋಟದ ಫಲ ಎಂದು ಎ.ಐ.ಡಿ. ಡಬ್ಲ್ಯೂ.ಎ., ಎನ್.ಎಫ್.ಐ. ಡಬ್ಲ್ಯೂ. ಮತ್ತಿತರ ಮಹಿಳಾ ಸಂಘಟನೆಗಳು ಬಲವಾಗಿ ವಿರೋಧಿಸಿ ಈ ಬಗ್ಗೆ ಎಲ್ಲಾ ಶಿಕ್ಷಣ ಮಂತ್ರಿಗಳಿಗೆ ಒಂದು ಜಂಟಿ ಮನವಿಯನ್ನು ಸಲ್ಲಿಸಿದರು. ಅಧ್ಯಾಪಕರ ಸಂಘಟನೆಯೊಂದು ಮಾನವ ಸಂಪನ್ಮೂಲ ಮಂತ್ರಿಗಳು ಇಂತಹ 'ಸುಧಾರಣೆ'ಗಳ ಬಗ್ಗೆ ತಲೆಕೆಡಿಸಿಕೊಳ್ಳುವ ಬದಲು ವಿಶ್ವಸಂಸ್ಥೆಯ ಯುನೆಸ್ಕೋ ನಮ್ಮಂತಹ ದೇಶಗಳಲ್ಲಿ ಶಿಕ್ಷಣದ ಪರಿಸ್ಥಿತಿಯ ಬಗ್ಗೆ ನೀಡಿರುವ ವರದಿಯನ್ನು ಗಂಭೀರವಾಗಿ ಪರಿಗಣಿಸುವುದು ಒಳ್ಳೆಯದು ಎಂದಿದೆ.

ಎಡ ಪಕ್ಷಗಳು, ಕಾಂಗ್ರೆಸ್ ಮಾತ್ರವಲ್ಲ, ಬಿ.ಜೆ.ಪಿ.ಯ ಬೆಂಬಲಕ್ಕೆ ನಿಂತ ಅಕಾಲಿ ದಳ, ತೆಲುಗುದೇಶಂ ನಂತಹ ಪಕ್ಷಗಳೂ ಆರ್.ಎಸ್.ಎಸ್.ನ ಬಚ್ಚಿಟ್ಟ ಅಜೆಂಡಾವನ್ನು ಹೇರುವ ಈ ಪ್ರಯತ್ನದ ಅಪಾಯವನ್ನು ಅರಿತು ಪ್ರತಿರೋಧದಲ್ಲಿ ಸೇರಿಕೊಂಡಿರುವುದು ದೇಶದ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ತುಸು ಸಂತಸ ಮೂಡಿಸಿದೆ. ಈ ಬಲವಾದ ಪ್ರತಿರೋಧದ ಪರಿಣಾಮವಾಗಿಯಾದರೂ ಪ್ರಧಾನ ಮಂತ್ರಿಗಳು 'ಮತಾಂಧತೆ, ಅಸಹಿಷ್ಣುತೆಗೆ ಶಿಕ್ಷಣ ರಂಗದಲ್ಲಿ ಸ್ಥಾನವಿಲ್ಲ, ಭಾರತದಂತಹ ಬಹುಭಾಷಾ, ಬಹುಧರ್ಮಗಳ ದೇಶದ ಐಕ್ಯತೆ ಇದರಿಂದ ಸಾಧ್ಯವಿಲ್ಲ" ಎಂದು ತನ್ನ ಉದ್ಘಾಟನಾ ಭಾಷಣದಲ್ಲಿ ಒಪ್ಪಿಕೊಳ್ಳಬೇಕಾಗಿ ಬಂತು. ಈಗಲಾದರೂ ಬಿ.ಜೆ.ಪಿ.ಯ ಬಗ್ಗೆ ಇಂತಹ ಪಕ್ಷಗಳಿಗೆ ಪೂರ್ಣ ಭ್ರಮನಿರಸನವಾಗಿದೆಯೇ, ಇದು ಕೇವಲ ಇನ್ನೊಂದು ರಾಜಕೀಯ ಪಕ್ಷವಲ್ಲ, ದೇಶದ, ಪ್ರಜಾಪ್ರಭುತ್ವದ ಅಡಿಗಲ್ಲನ್ನೇ ಬುಡಮೇಲೆ ಮಾಡುವ ಪಕ್ಷ ಎಂದು ಅರಿವಿಗೆ ಬರುತ್ತಿದೆಯೇ? ಇದು ಪ್ರಜಾಪ್ರಭುತ್ವವಾದಿಗಳು ಕೇಳುತ್ತಿರುವ ಒಂದು ಗಂಭೀರ ಪ್ರಶ್ನೆ.

ಪ್ರೊ॥ ಅಮರ್ತ್ಯ ಸೆನ್ ರವರಿಗೆ ನೊಬೆಲ್‌ಪ್ರಶಸ್ತಿ



ಪ್ರಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ॥ ಅಮರ್ತ್ಯ ಸೆನ್‌ರವರಿಗೆ ಈ ಬಾರಿಯ ಅರ್ಥಶಾಸ್ತ್ರದ ನೊಬೆಲ್ ಪ್ರಶಸ್ತಿ ದೊರೆತಿದೆ. ಅಭಿವೃದ್ಧಿ ಅರ್ಥಶಾಸ್ತ್ರದ ರಂಗದಲ್ಲಿ ಅವರ ಸಂಶೋಧನೆಗಳಿಂದಾಗಿ ಈ ಪ್ರಶಸ್ತಿ ನೀಡಲಾಗಿದೆ ಎಂದು ಹೇಳಲಾಗಿದೆ. ಸಮಾಜದ ಅತ್ಯಂತ ದಾರಿದ್ರ್ಯಕ್ಕೊಳಗಾದವರ ಬಗ್ಗೆ ಒಂದು ವಿಶಿಷ್ಟ ಆಸಕ್ತಿ ತೋರಿಸಿರುವ ಅವರ ಕೆಲಸಕ್ಕಾಗಿ ಈ ಪ್ರಶಸ್ತಿ ಸಂದಿದೆ ಎಂದು ಪ್ರಶಸ್ತಿಗೆ ಅವರನ್ನು ಆಯ್ಕೆ ನೀಡಿದ ಸಮಿತಿ ಹೇಳಿದೆ.

65 ವರ್ಷದ ಪ್ರೊ॥ ಸೆನ್ ನೊಬೆಲ್ ಪ್ರಶಸ್ತಿ ಪಡೆದ 6ನೇ ಭಾರತೀಯರು. ಈ ಹಿಂದೆ ರವೀಂದ್ರನಾಥ್ ಟಾಗೋರ್ (ಸಾಹಿತ್ಯ), ಪ್ರೊ॥ ಸಿ.ವಿ. ರಾಮನ್ ಹಾಗೂ ಪ್ರೊ॥ ಎಸ್. ಚಂದ್ರಶೇಖರ್(ಭೌತಶಾಸ್ತ್ರ), ಡಾ॥ ಹರ್‌ಗೋವಿಂದ್ ಖುರಾನಾ (ವೈದ್ಯಶಾಸ್ತ್ರ) ಹಾಗೂ ಭಾರತೀಯ ನಾಗರಿಕತೆ ಪಡೆದ ಮದರ್ ಥೆರೇಸಾ(ಶಾಂತಿ) ಇವರುಗಳಿಗೆ ಈ ಪ್ರಶಸ್ತಿ ದೊರೆತಿತ್ತು.

ಸುರ್ಜಿತ್ ಅಭಿನಂದನೆ

ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಷನ್ ಸಿಂಗ್ ಸುರ್ಜಿತ್‌ರವರು ಅರ್ಥಶಾಸ್ತ್ರಕ್ಕೆ ನೊಬೆಲ್ ಪ್ರಶಸ್ತಿ ಪಡೆದ ಪ್ರೊ॥ ಅಮರ್ತ್ಯ ಸೆನ್‌ರವರನ್ನು ಹಾರ್ದಿಕವಾಗಿ ಅಭಿನಂದಿಸಿದ್ದಾರೆ. ಉದಾರೀಕರಣ ಪ್ರತಿಪಾದಿಸಿದ ಚಿದಂಬರಂಗಳು, ಮನಮೋಹನ್ ಸಿಂಗರಂತಲ್ಲದೆ ಈ ಅರ್ಥಶಾಸ್ತ್ರಜ್ಞ ಭೂಸುಧಾರಣೆಗಳು, ಆರೋಗ್ಯ, ಶಿಕ್ಷಣದಂತಹ ಸಾಮಾಜಿಕ ವಲಯಗಳಲ್ಲಿ ಹೆಚ್ಚಿನ ಹಣ ಹೂಡಿಕೆ ನಡೆಸಬೇಕೆಂದು ನಿರಂತರವಾಗಿ ಪ್ರತಿಪಾದಿಸಿಕೊಂಡು ಬಂದವರು ಎಂದು ಸುರ್ಜಿತ್ ಹೇಳಿದರು. ಅವರು ಕೇರಳ ಮತ್ತು ಪಶ್ಚಿಮ ಬಂಗಾಳಕ್ಕೆ ಭೇಟಿ ನೀಡಿ ಈ ಎರಡು ರಾಜ್ಯಗಳ ಎಡ ಸರಕಾರಗಳು ತಂದ ಭೂಸುಧಾರಣೆಗಳನ್ನು ಹೊಗಳಿದ್ದರು ಎಂದು ಸುರ್ಜಿತ್ ನೆನಪಿಸಿದರು.

(ಐ.ಎನ್.ಎನ್.)

ನವೆಂಬರ್ 3 ತ್ರಿಪುರಾ ದಿನ

ತ್ರಿಪುರಾದ ಪ್ರಜಾಪ್ರಭುತ್ವವಾದಿ ಆಂದೋಲನದ ರಕ್ಷಣೆಗೆ ಹಾಗೂ ಕೇಂದ್ರ ಸರ್ಕಾರ ಉಗ್ರಗಾಮಿ ಹಿಂಸಾಚಾರವನ್ನು ತಡೆಯಲು ರಾಜ್ಯಕ್ಕೆ ಸಾಕಷ್ಟು ನೆರವು ನೀಡಬೇಕೆಂದು ಒತ್ತಾಯಿಸಿ, ನ. 3, 1998 ರಂದು ದೇಶಾದ್ಯಂತ ತ್ರಿಪುರಾ ದಿನ ಆಚರಿಸಲು ಸಿಪಿಐ(ಎಂ) ಪಾಲಿಟ್ ಬ್ಯೂರೋ ಪಕ್ಷದ ಎಲ್ಲಾ ಘಟಕಗಳಿಗೆ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಕರೆ ನೀಡಿದೆ.

ಪುಟ 6 ನೋಡಿ.





ಅತಿವೃಷ್ಟಿಯಿಂದ ದಿಕ್ಕೆಟ್ಟ ಪರಿಸ್ಥಿತಿ

ತುರ್ತುಪರಿಹಾರಕ್ಕೆ ರೈತರ, ಕೂಲಿಕಾರರ ಆಗ್ರಹ

ಕರ್ನಾಟಕ ರಾಜ್ಯಾದ್ಯಂತ ಕಳೆದ ಒಂದು ತಿಂಗಳಲ್ಲಿ ನಿರಂತರ ಮಳೆ ಸುರಿದು ಅತೀವೃಷ್ಟಿಯಾಗಿ ಮುಖ್ಯವಾಗಿ ಉತ್ತರ ಕರ್ನಾಟಕದ ಗುಲ್ಬರ್ಗ, ರಾಯಚೂರು, ಬಿಜಾಪುರ, ಬಳ್ಳಾರಿ ಜಿಲ್ಲೆಗಳು ಸೇರಿ ಹಲವು ಜಿಲ್ಲೆಗಳು ಮತ್ತು ದಕ್ಷಿಣ ಕನ್ನಡ-ಉಡುಪಿ, ಉತ್ತರ ಕನ್ನಡ, ಮಂಡ್ಯ ಜಿಲ್ಲೆಗಳು ಭಾರಿ ಪ್ರಮಾಣದಲ್ಲಿ ಹಾನಿಗೊಳಗಾಗಿವೆ. ಇದುವರೆಗೆ ಸಿಕ್ಕ ವರದಿ ಪ್ರಕಾರ ಸುಮಾರು 200 ಕ್ಕೂ ಹೆಚ್ಚು ಜನ ಪ್ರವಾಹಕ್ಕೆ ಸಿಕ್ಕಿ ಮನೆಗಳು ಬಿದ್ದು ಮರಣ ಹೊಂದಿದ್ದಾರೆ. ಅವರ ಕುಟುಂಬಗಳಿಗೆ ಹಾಗೂ ಸಂತ್ರಸ್ತರಿಗೆ ಕೂಡಲೇ ಪರಿಹಾರ ನೀಡುವಂತೆ ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ಜಂಟಿಯಾಗಿ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ಮನವಿಯನ್ನು ಇಲ್ಲಿ ಕೊಡಲಾಗಿದೆ.

ಲಕ್ಷಾಂತರ ಎಕರೆ ಪ್ರದೇಶದಲ್ಲಿ ಬೆಳೆದ ಹತ್ತಿ, ಭತ್ತ, ಜೋಳ, ಶೇಂಗಾ, ಸೂರ್ಯಕಾಂತಿ, ಸಜ್ಜೆ, ನವಣೆ, ತೊಗರಿ, ಹೆಸರು, ಉದ್ದು, ಒಣಮೆಣಸಿನಕಾಯಿ ಹಾಗೂ ಉಳ್ಳಾಗಡ್ಡಿ ಬೆಳೆಗಳು ಇಡೀಯಾಗಿ ಸರ್ವನಾಶವಾಗಿವೆ. ಈ ಬೆಳೆ ಹಾನಿಯಿಂದಾಗಿ ರೈತರು ಪ್ರತಿ ಎಕರೆಗೆ ಸರಾಸರಿ 6ರಿಂದ 10 ಸಾವಿರ ನಷ್ಟು ನಷ್ಟ ಅನುಭವಿಸಿದ್ದಾರೆ. ಒಂದು ಲಕ್ಷಕ್ಕೂ ಮೀರಿ ಮನೆಗಳು ಬಿದ್ದು ಹೋಗಿ ಸಾಮಾನ್ಯ ಜನತೆಗೆ ವಾಸದ ಸಮಸ್ಯೆ ಉದ್ಭವಿಸಿದೆ. ಬಹುತೇಕ ಮನೆಗಳಲ್ಲಿ ಹನಿ-ಹನಿ ತೊಟ್ಟಿಕ್ಕಿ ಲಕ್ಷಾಂತರ ರೂಪಾಯಿಗಳ ದಾಸ್ತಾನು ಹಾಳಾಗುತ್ತಿವೆ. ಲಕ್ಷಾಂತರ ಜಾನುವಾರುಗಳು ರೋಗಕ್ಕೆ ತುತ್ತಾಗುತ್ತಿವೆ. ಗೊರಸುಗಳ ಸಮೇತ ಹುಳು ಬಿದ್ದಿರುವುದು ಬೆಳಕಿಗೆ ಬಂದಿದೆ. ಈಗಾಗಲೇ ಈ ಪ್ರದೇಶದ ಹಲವಾರು ಜಿಲ್ಲೆಗಳಲ್ಲಿ ಮಲೇರಿಯಾ ತಾಂಡವವಾಡುತ್ತಿದ್ದು, ಅತೀವೃಷ್ಟಿಯ ಪರಿಣಾಮವಾಗಿ ವ್ಯಾಪಕವಾಗಿ ಕಾಲರಾ ರೋಗ ಕಾಣಿಸಿಕೊಳ್ಳುವ ಭೀತಿಯು ಜನತೆಯನ್ನು ಆವರಿಸಿದೆ. ಕುಡಿಯುವ ನೀರು ಹಲವು ಕಡೆ ಕುಲಷಿತಗೊಂಡಿದೆ. ರಸ್ತೆಗಳು ಮಾಯವಾಗಿವೆ.

ಬೆಳೆಗಳ ಒಟ್ಟು ಪ್ರದೇಶದ ಉತ್ಪನ್ನ ವೆಚ್ಚವೇ ಸುಮಾರು 800 ಕೋಟಿಯನ್ನೂ ದಾಟಲಿವೆ. ಬಿದ್ದ ಮನೆಗಳ ನಷ್ಟ ಹಾಗೂ ಪ್ರಾಣಹಾನಿ, ರಸ್ತೆ ರಿಪೇರಿ, ರೋಗರುಜಿನ ಸೇರಿದರೆ ಇದು 1000 ಕೋಟಿಯ್ನೂ ದಾಟಲಿದೆ.

ಬೆಳೆಗಳ ಇಳುವಳಿ ವೆಚ್ಚ ಅಂದಾಜು ಮಾಡಿ ಆಗುವ ನಷ್ಟ ಲೆಕ್ಕಿಸಿದರೆ ಸುಮಾರು 2000 ಕೋಟಿಯಾಗವುದರಲ್ಲಿ ಎಳ್ಳಷ್ಟು ಸಂಶಯ ಇಲ್ಲ.

ಮುಂಗಾರು ಬೆಳೆ ಇಡೀಯಾಗಿ ನಷ್ಟವಾಗಿದ್ದು, ಹಿಂಗಾರು ಬೆಳೆ ಬಿತ್ತನೆಗೆ ಇದುವರೆಗೆ ಅವಕಾಶ ಇಲ್ಲವಾಗಿದೆ. ಇನ್ನೂ ಮಳೆ ನಿಲ್ಲುವ ಲಕ್ಷಣ ಕಾಣಿಸುತ್ತಿಲ್ಲ. ಕೃಷಿ ಕೂಲಿಕಾರರ ಮುಂಗಾರು ಹಾಗೂ ಹಿಂಗಾರಿನ ಕೂಲಿ ಕೆಲಸ ಕಳೆದು ಹೋಗಿದೆ. ಕಳೆದ ಒಂದು ತಿಂಗಳಿಂದ ಕೂಲಿ ಇಲ್ಲದೆ ದಿಕ್ಕೆಟ್ಟ ಪರಿಸ್ಥಿತಿಯಾಗಿದೆ. ಲಕ್ಷಾಂತರ ಜನ ಕೂಲಿ ಹುಡುಕಿಕೊಂಡು ಗುಳೇ ಹೋಗುವುದು ಸಾಮಾನ್ಯವಾಗಿದೆ.

ರೈತರು ಕಳೆದ 8-10 ವರ್ಷಗಳಿಂದ ಏರಿದ ರಸಾಯನಿಕ ಗೊಬ್ಬರ, ಕ್ರಿಮೀನಾಶಕ, ಬೀಜ ಹಾಗೂ ಪೆಟ್ರೋಲ್-ಡೀಸೆಲ್ ಬೆಲೆಗಳಿಂದ ಹಾಗೂ ಹೊಸ ಆಮದು ನೀತಿಯ ಕುಸಿದ ಬೆಲೆಗಳಿಂದ ಸಾರ್ವಜನಿಕ ರಂಗವಾದ ಬ್ಯಾಂಕ್-ಸಹಕಾರಿ ರಂಗರಿಂದ ಡಿಫಾಲ್ಟರ್‌ಗಳಾಗಿ ಸಾಲ ದೊರೆಯದಿರುವುದರಿಂದ ಖಾಸಗೀ ಸಾಹುಕಾರರ ಹತಿರ ಪಡೆದ ದುಬಾರಿ ಬಡ್ಡಿ ಸಾಲಗಳಿಂದ, ಕಳಪೆ ಕ್ರಿಮೀನಾಶಕ, ಕಳಪೆ ಬೀಜಗಳ ಹಾವಳಿಯಿಂದ ನೆರೆ ಹಾಗೂ ಬರಗಾಲದಿಂದ ಈಗಾಗಲೇ ಮಾಡಿಕೊಂಡ ಸಾಲ ತೀರಿಸಲಾಗದೇ ಸಾಲಗಾರರಾಗಿ, ಸಾಲ ತೀರಿಸುವ ದಾರಿದೊರೆಯದೇ ದೇಶಾದ್ಯಂತ 500 ಕ್ಕೂ ಹೆಚ್ಚು ಜನ ಹಾಗೂ ರಾಜ್ಯದಲ್ಲಿ 50 ಕ್ಕೂ ಹೆಚ್ಚು ಆತ್ಮಹತ್ಯೆ ಮಾಡಿಕೊಂಡುದು ನಿಮಗೆ ತಿಳಿದೇ ಇದೆ. ಇದಲ್ಲದೇ ಸಾಲಗಾರರ ಬಾಧೆ ತಾಳದೆ ಕೊರಗಿ ಕೊರಗಿ ಸಾಯುವವರ ಸಂಖ್ಯೆ ಕಡಿಮೆಯೇನಿಲ್ಲ! ಹಲವು ಸಾವಿರ ಜನ ಊರು ಬಿಟ್ಟು ಕುಟುಂಬ ಬಿಟ್ಟೆ ತಲೆಮರೆಸಿಕೊಂಡಿರುವುದು ಗುಟ್ಟಿನ ವಿಷಯವೇನಲ್ಲ. ಹಾಗೇ ಸಾಲಕ್ಕಾಗಿ ಭೂಮಿ ಮಾರುತ್ತಿರುವುದು-ಹೊಸ ಬೆಳೆಗೆ ಸಾಲ ಸಿಗದೇ ಬೀಳು ಬಿಡುತ್ತಿರುವುದು ಬೆಳೆಯುತ್ತಿರುವಾಗಲೇ ಈ ವರ್ಷದ ಬಹಳ ಮುಖ್ಯ ಸೀಜನ್ ಆದ ಮುಂಗಾರು ಪೂರ್ಣವಾಗಿ ಹಾಳಾಗಿ ತಲಾ ಪ್ರತಿ ಎಕರೆಗೆ ಒಟ್ಟು 10 ಸಾವಿರಕ್ಕೂ ಹೆಚ್ಚು ಉತ್ಪನ್ನ ವೆಚ್ಚ ನಷ್ಟವಾಗಿದೆ. ಹೀಗಾಗಿ ಹಳೆಯ ಸಾಲ ಮತ್ತು ಈಗಿನ ಹೊಸ ಸಾಲವು ಸೇರಿ ಅದೆಷ್ಟು ಜನ ಇನ್ನು ಮುಂದೆ ಆತ್ಮಹತ್ಯೆ ಮಾಡಿಕೊಳ್ಳುವರೋ ಎಂಬ ಭೀತಿ ನಮ್ಮನ್ನಾವರಿಸಿದೆ. ಆದ್ದರಿಂದ :

1. ಅತೀವೃಷ್ಟಿಗೀಡಾಗಿ ತೊಂದರೆ ಅನುಭವಿಸಿದ ಎಲ್ಲಾ ಜಿಲ್ಲೆಗಳನ್ನು ಹಸಿಬರಪೀಡಿತ ಜಿಲ್ಲೆಗಳೆದು ಘೋಷಿಸಬೇಕು.

2. ಪ್ರತಿ ಎಕರೆಗೆ ಕನಿಷ್ಟ ಜೋಳಕ್ಕೆ 5000, ಹತ್ತಿಗೆ ಸಾವಿರ, ಒಣಮೆಣಸಿನಕಾಯಿಗೆ 10 ಸಾವಿರ, ಭತ್ತಕ್ಕೆ 7000, ತೊಗರಿಗೆ 5000 ಮುಂತಾಗಿ ನಿಗದಿಸಿ ನಷ್ಟ ಪರಿಹಾರ ಕೊಡುವುದು.

3. ಬಡ ರೈತರ-ಮಧ್ಯಮ ರೈತರ ಸಾಲ ಮನ್ನಾ ಮಾಡುವುದು, ಉಳಿದವರಿಗೆ ಬಡ್ಡಿಯನ್ನು ಮನ್ನಾ ಮಾಡಿ ದೀರ್ಘಾವದಿ ಸಾಲವಾಗಿ ಪರಿಗಣಿಸಬೇಕು. ಈ ವರ್ಷ ವಸೂಲಾತಿಯನ್ನು ತಡೆಯಬೇಕು, ಮುಂಬರುವ ಬೆಳೆಗೆ ಸಾಲ ನೀಡಬೇಕು.

4. ಬಡ ರೈತರಿಗೆ ಉಚಿತ ಬೀಜ, ಗೊಬ್ಬರ ವ್ಯಾಪಕವಾಗಿ ಹಂಚಬೇಕು.

5. ಕೃಷಿಕೂಲಿಕಾರರಿಗೆ ಪುನರ್‌ವಸತಿ ಕಲ್ಪಿಸಬೇಕು. ಆರೆ ಬಿದ್ದ ಮನೆಗಳಿಗೆ 10 ಸಾವಿರ ರೂಪಾಯಿನಂತೆ ಪರಿಹಾರ ಒದಗಿಸಬೇಕು.

6. ಕೃಷಿಕೂಲಿಕಾರರಿಗೆ ಬಡರೈತರಿಗೆ ಕೆಲಸವಿಲ್ಲದೇ ಬರ ಉಂಟಾಗಿರುವುದರಿಂದ ಕೂಡಲೇ ರಸ್ತೆ ರಿಪೇರಿ ಕಾಮಗಾರಿ ನಡೆಸಿ ಕೂಲಿಗಾಗಿ ಕಾಳು ಯೋಜನೆ ಜ್ಯಾರಿಗೊಳಿಸಬೇಕು.

7. ಹಲವು ರಾಜ್ಯಗಳೂ ಇದೇ ರೀತಿ ಅತೀವೃಷ್ಟಿಗೀಡಾಗಿರುವುದರಿಂದ ರಾಷ್ಟ್ರೀಯ ಹಾನಿಯೆಂದು ಕೇಂದ್ರ ಸರ್ಕಾರ ಪರಿಗಣಿಸುವಂತೆ ಒತ್ತಾಯಿಸಬೇಕು. ಹಾಗೂ ರಾಜ್ಯಕ್ಕೆ ಕನಿಷ್ಟ 1000 ಕೋಟಿ ನೀಡುವಂತೆ ಒತ್ತಾಯಿಸಬೇಕು.

8. ಜಾನುವಾರುಗಳಿಗೆ ಹಾಗೂ ನಾಗರೀಕರಿಗೆ ತಗಲುವ ರೋಗಗಳನ್ನೂ ನಿಯಂತ್ರಿಸಲು ವೈದ್ಯ ಇಲಾಖೆ ವ್ಯಾಪಕ ಕ್ರಮ ಕೈಗೊಳ್ಳುವಂತೆ ಔಷಧ ಮುಂದಾಗಿ ಇರುವಂತೆ ಆಗಬೇಕು. ಮುಂಜಾಗ್ರತೆಯಾಗಿ ರೋಗ ಹರಡದಂತೆ ತಡೆಯಲು ಸೂಕ್ತ ಕ್ರಮ ವಹಿಸಬೇಕು.

9. ಕೂಡಲೇ ಅತೀವೃಷ್ಟಿ ಪೀಡಿತ ಜಿಲ್ಲೆಗಳಿಗೆ ಸಮರೋಪಾದಿಯಲ್ಲಿ ನೆರವಾಗಲು ಕನಿಷ್ಟ 50 ಕೋಟಿ ರೂ.ಗಳಂತೆ ಪ್ರತಿ ಜಿಲ್ಲೆಗೆ ಬಿಡುಗಡೆ ಮಾಡಬೇಕು.

10. ಸತ್ತವರ ಕುಟುಂಬಕ್ಕೆ 1 ಲಕ್ಷ ರೂಪಾಯಿ ಪರಿಹಾರ ನೀಡಬೇಕು.

ವೈಫಲ್ಯಗಳ ಮೂಟೆಯಾದ ಬಿ.ಜೆ.ಪಿ. ಸರ್ಕಾರ

ಅಧಿಕಾರಕ್ಕೆ ಬಂದರೆ ಎಲ್ಲವನ್ನೂ ಸಾಧಿಸುವ ಭರವಸೆಯನ್ನು ಬಿ.ಜೆ.ಪಿ. ಭಾರತದ ಜನತೆಗೆ ನೀಡುತ್ತಲೇ ಬಂದಿತ್ತು. ಹಿಂದಿನ ಸರ್ಕಾರಗಳ ಎಲ್ಲ ಕ್ರಮಗಳನ್ನು ಟೀಕಿಸುತ್ತಲೇ ಬಂದಿತ್ತು. ಈಗ ಬಿ.ಜೆ.ಪಿ. ತನ್ನ ಮಿತ್ರ ಪಕ್ಷಗಳೊಂದಿಗೆ ಅಧಿಕಾರದ ಸೂತ್ರ ಹಿಡಿದು ಏಳು ತಿಂಗಳುಗಳಾಗಿವೆ. ಅಧಿಕಾರದ ಯಾವುದೇ ಕ್ಷೇತ್ರವನ್ನೂ ತೆಗೆದುಕೊಂಡರೂ ಕಾಣುವುದು ಬರೀ ವೈಫಲ್ಯಗಳು. ಜನರ ಮೇಲೆ ಹೆಚ್ಚಿದ ಹೊರೆ ಇನ್ನೂ ಹೆಚ್ಚುವ ಭಯ ಒಂದಾದ ಮೇಲೆ ಒಂದರಂತೆ ಬಿಕ್ಕಟ್ಟುಗಳು. ಈ ಬಿಕ್ಕಟುಗಳಿಗೆ ಅಂತ್ಯವೇ ಕಾಣದಂತಾಗಿದೆ ಬಹುಶಃ. ಬಿ.ಜೆ.ಪಿ. ಸರ್ಕಾರದ ಅಂತ್ಯದೊಂದಿಗೇ ಈ ಬಿಕ್ಕಟ್ಟುಗಳಿಗೆ ಅಂತ್ಯ ಕಾಣಲು ಸಾಧ್ಯವಾಗಬಹುದು.

ಉದಾರೀಕರಣದ ಆರ್ಥಿಕ ನೀತಿಗಳ ವಿರುದ್ಧ ಮಾತನಾಡುತ್ತಲೇ ಅಧಿಕಾರಕ್ಕೆ ಬಂದ ಬಿ.ಜೆ.ಪಿ.ಯು ಜನ ಉದಾರೀಕರಣದ ಕ್ರಮಗಳನ್ನು ಇನ್ನೂ ವೇಗಗೊಳಿಸಿದರು. ಹಣದುಬ್ಬರವನ್ನು ಶಿಖರಕ್ಕೇರಿಸುವಂತಹ ಬಜೆಟ್ ಮಂಡಿಸಿದರು. ಈಗ ಹಣಕಾಸು ಖೋತಾ ಮಿತಿಮೀರಿ ಹೋಗುತ್ತಿರುವುದನ್ನು ನೋಡುತ್ತಿದ್ದಾರೆ, ಸಾರ್ವಜನಿಕ ವಿತರಣಾ ವ್ಯವಸ್ಥೆ ಕುಸಿದು ಬಿದ್ದಿದೆ. ಬೆಲೆಗಳು ವಿಪರೀತ ಏರಿ, ಈ ಏರಿಕೆಗೆ ತಡೆಯೇ ಇಲ್ಲ. ಜೊತೆಗೆ ತೀರಾ ಸಾಮಾನ್ಯರು ದಿನ ನಿತ್ಯ ಬಳಸುವಂತಹ ಈರುಳ್ಳಿ ಮಾರುಕಟ್ಟೆಯಲ್ಲೇ ಇಲ್ಲ. ಲಭ್ಯವಿದ್ದರೂ ಅದರ ಬೆಲೆ ಗಗನದಲ್ಲಿ.

ಇಷ್ಟೆಲ್ಲ ಆಗುತ್ತಿರುವಾಗ ನಿದ್ರೆಯಿಂದ ಎಚ್ಚೆತ್ತುಕೊಂಡಂತೆ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಆರ್ಥಿಕ ಸಲಹಾ ಮಂಡಳಿಯನ್ನು ಪುನರ್ರಚಿಸಿ ಹಣಕಾಸು ಖೋತಾವನ್ನು ಕೂಡಲೇ ಕಡಿಮೆ ಮಾಡಲೇಬೇಕು ಎಂದು ಹೇಳಿದ್ದಾರೆ.

ಆರ್ಥಿಕವನ್ನು ಪುನರುಜ್ಜೀವನ ಗೊಳಿಸುವ ಮಾತನ್ನು ಅವರು ಆಡಿದ್ದಾರೆ. ಇದರರ್ಥ ಆರ್ಥಿಕ ರೋಗಗ್ರಸ್ತವಾಗಿದೆ ಮತ್ತು ಅದನ್ನು ಪುನರುಜ್ಜೀವನಗೊಳಿಸಲು ಇದುವರೆವಿಗೂ ಸೂಕ್ತ ಕ್ರಮಗಳನ್ನು ಸರ್ಕಾರ ಕೈಗೊಳ್ಳ ಹೋಗಿಲ್ಲ ಎಂದು ಒಪ್ಪಿಕೊಂಡಂತೆಯೂ ಆಗುತ್ತದೆ.

ಆರ್ಥಿಕ ಸಲಹಾ ಮಂಡಳಿಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಮಾಜಿ ಗವರ್ನರ್ ಐ.ಜಿ. ಪಟೇಲ್, ಪ್ರೊ॥ ಪಿ.ಎನ್. ಧರ್, ಯೋಜನಾ ಆಯೋಗದ ಸದಸ್ಯ ಮೊಂಟೆಕ್ ಸಿಂಗ್ ಅಹ್ಲುವಾಲಿಯಾ, ಹಣಕಾಸು ಮಂಡಳಿ ಸದಸ್ಯ ಅಮರೇಶ ಬಗಚಿ, ಶೇರು ಮಾರಾಟ ಸಮಿತಿಯ ಅಧ್ಯಕ್ಷ ಜಿ.ವಿ. ರಾಮಕೃಷ್ಣ, ಅರ್ಜುನ್ ಸೇನ್‌ಗುಪ್ತಾ, ಅಶೋಕ್ ದೇಸಾಯಿ ಮತ್ತು ಪ್ರಧಾನ ಮಂತ್ರಿಗಳ ಮುಖ್ಯ ಕಾರ್ಯದರ್ಶಿ ಬ್ರಿಜೆಶ್ ಮಿಶ್ರ ಇದ್ದಾರೆ. ಸಲಹಾ ಮಂಡಳಿ ರಚಿಸಿದರೂ ಬಿ.ಜೆ.ಪಿ. ಸರ್ಕಾರಕ್ಕೆ ಈ ವಿಷಯದಲ್ಲಿರುವ ಕಾಳಜಿಯ ಬಗ್ಗೆ ನಂಬಿಕೆ ಇರಿಸಿಕೊಳ್ಳಬೇಕಾದದ್ದೆ ಇಲ್ಲ, ಅಲ್ಲವೆ?

ಯು.ಟಿ.ಐ. ಯೋಜನೆಯ ಗೋಳು

ಯುನಿಟ್ ಟ್ರಸ್ಟ್ ಆಫ್ ಇಂಡಿಯಾ, ಅಥವಾ ಯು.ಟಿ.ಐ. ಭಾರತದ ಮುಖ್ಯ ಅಭಿವೃದ್ಧಿ ಹಣಕಾಸು ಸಂಸ್ಥೆ. ಈ ಸಂಸ್ಥೆಯದು ಯೂನಿಟ್ ಸ್ಕೀಮ್-64 ಅಥವಾ ಯುಎಸ್-64 ಎಂಬುದು ಒಂದು ಯೋಜನೆ. ಹೂಡಿಕೆದಾರರು ಈ ಯೋಜನೆಯಲ್ಲಿ ಹಣ ಹೂಡಿದರೆ ಅದರ ಮೇಲೆ ಯು.ಟಿ.ಐ. ಡಿವಿಡೆಂಟ್ ನೀಡುತ್ತದೆ. ಈ ಡಿವಿಡೆಂಟ್ ದೊಡ್ಡ ಪ್ರಮಾಣದ್ದೇ ಆಗಿದೆ ಇಲ್ಲಿಯವರೆಗೆ.

ಯು.ಟಿ.ಐ. ಬಂದ ಹಣವನ್ನು ಶೇರು ಮಾರುಕಟ್ಟೆಯಲ್ಲಿ ತೊಡಗಿಸುತ್ತದೆ. ಶೇರುಗಳ ಬೆಲೆ ಹೆಚ್ಚಾದಾಗ ಮಾರುತ್ತದೆ. ಬಂದ ಲಾಭದಲ್ಲಿ ಡಿವಿಡೆಂಡ್ ನೀಡಲಾಗುತ್ತದೆ. ಯುಟಿಐನ ಈ ಯು.ಎಸ್.-64 ಬಹಳ ಹೆಸರು ಮಾಡಿದ ಯೋಜನೆ.

ಈ ಸಾರಿ ಯು.ಟಿ.ಐ.ನ ಈ ಯೋಜನೆ ತೀವ್ರ ಧಕ್ಕೆ ಅನುಭವಿಸಿತು. ಕಾರಣ ಶೇರು ಮಾರುಕಟ್ಟೆ ತೀರ ಮಂಕಾಗಿರುವುದು. ಹೀಗಿದ್ದರೆ ಈ ಯೋಜನೆ ವಿಫಲ ವಾಗುತ್ತದೆ ಎಂಬ ಆತಂಕ ಹೂಡಿಕೆದಾರರನ್ನು ಕಾಡೆ ತೊಡಗಿತು. ಕೋಟಿಗಟ್ಟಲೆ ಹೂಡಿಕೆದಾರರಿರುವ ಈ ಯೋಜನೆ ಬಹಳ ವ್ಯಾಪ್ತಿಯುಳ್ಳದ್ದು. ಆದ್ದರಿಂದಲೇ ಈ ಆತಂಕ ಬಹಳ ದೊಡ್ಡದಾಗಿದ್ದು.

ಕೇಂದ್ರದ ಹಣಕಾಸು ಮಂತ್ರಿಗಳು ತಾವು ಈ ಯೋಜನೆ ವಿಫಲವಾಗಲು ಬಿಡುವುದಿಲ್ಲ ಎಂದು ಹೇಳಿಕೆ ನೀಡಿದರು. ಯು.ಟಿ.ಐ. ಅಧ್ಯಕ್ಷರು ಈ ಭರವಸೆ ನೀಡಿದ್ದಾರೆ. ಹಲವು ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳು ಬೆಂಬಲ ನೀಡುವ ಭರವಸೆ ನೀಡಿದ್ದಾರೆ. ಆದರೆ ಹೂಡಿಕೆದಾರರು ಕಂಗಾಲಾಗಿ ಮಾರಾಟ ಮಾಡತೊಡಗಿದರೆ ಬರುವ ಆಪತ್ತನ್ನು ತಡೆವ ತಾಕತ್ತು ಯಾರಿಗೂ ಇರಲಾರದು.

ಈ ನಡುವೆ ಶೇರು ಮಾರುಕಟ್ಟೆಯನ್ನು ಮೇಲಕ್ಕೆತ್ತುವ ಪ್ರಯತ್ನಗಳಿಗೆ ವಿದೇಶಿ ನೇರ ಹುಡಿಕೆದಾರರು ತಣ್ಣೀರೆರಚಿದ್ದಾರೆ. ಅವರ ಈ ಕ್ರಮಗಳಿಂದ ಶೇರು ಮಾರುಕಟ್ಟೆ ಅಲ್ಪ ಸ್ವಲ್ಪ ಚೇತರಿಸಿಕೊಂಡಿದ್ದರೂ ಮತ್ತೆ ಕುಸಿದಿದೆ. ಹೂಡಿಕೆದಾರರ ಆತಂಕ ಮುಂದುವರಿದೇ ಇದೆ. ಭರವಸೆಗಳ ಸುರಿಮಳೆ ಆಗುತ್ತಿದೆ.

ಅತಿ ವೇಗದಲ್ಲಿ ಬೆಳೆವ ದೇಶ ಭಾರತ

ಹೆಮ್ಮೆಯಾಗಬಹುದಲ್ಲವೇ? ಈ ವಿಷಯ ಓದಿದರೆ. ಇಂತಹ ಧೃಡೀಕರಣ ಪತ್ರ ನೀಡಿರುವುದು ವಿಶ್ವಬ್ಯಾಂಕ್. ಭಾರತ ಏಶಿಯಾದಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ಎಂದು ಅದು ಹೇಳಿದೆ. 1992-94ರ ಅವಧಿಯಲ್ಲಿ ಶೇ. 5 ರಷ್ಟು ಮತ್ತು1994-96ರ ಅವಧಿಯಲ್ಲಿ ಶೇ. 7 ರಷ್ಟು ಬೆಳವಣಿಗೆ ಸಾಧಿಸಿರುವ ಭಾರತ ಬೆಳೆಯುವ ಅಂತರಿಕ ಶಕ್ತಿಯನ್ನು ಹೊರಸೂಸುತ್ತಿದೆ ಎಂದು ವಿಶ್ವ ಬ್ಯಾಂಕಿನ ಅಧ್ಯಕ್ಷ ವಿಲಿಯಮ್ಸನ್ ಹೇಳಿದ್ದಾನೆ.

ಇಷ್ಟೆಲ್ಲಾ ಬೆಳವಣಿಗೆ ಕಂಡಿರುವ/ಕಾಣುತ್ತಿರುವ ಭಾರತ ಈಗ ವಿಶ್ವ ಬ್ಯಾಂಕ್ ಮುಂದೆ ಸಾಲಕ್ಕಾಗಿ ಭಿಕ್ಷಾ ಪಾತ್ರೆ ಚಾಚಿದೆ. ಮೂರು ಬಿಲಿಯನ್ ಡಾಲರುಗಳ ಸಾಲವನ್ನು ಭಾರತ ಯಾಚಿಸಿದೆಯಂತೆ.

ಈ ಸಾಲಕ್ಕಾಗಿ ಹಲವು ಷರತ್ತುಗಳನ್ನು ಖಂಡಿತವಾಗಿ ಹೇರಲಿರುವ ವಿಶ್ವಬ್ಯಾಂಕ್ ಭಾರತವನ್ನು ಹೊಗಳಿರುವುದರಲ್ಲಿ ಆಶ್ಚರ್ಯವೇನಿಲ್ಲ. ಯಾಕೆಂದರೆ ಭಾರತದ ಸರ್ಕಾರಗಳು ವಿಶ್ವ ಬ್ಯಾಂಕ್ ಮತ್ತು ಐ.ಎಂ.ಎಫ್.ಗಳಿಗೆ ದೇಶದ ಹಿತಾಸಕ್ತಿಯನ್ನೇ ಮಾರಿಬಿಟ್ಟಿವೆ.

ದೇಶದೊಳಗೆ-ಅದರಲ್ಲೂ ದೇಶದ ಜನ ಸಾಮಾನ್ಯರ ಸಮಸ್ಯೆಗಳು ನೂರ್ಮಡಿಯಾಗಿವೆ. ಬೆಲೆಗಳ ವಿಪರೀತ ಏರಿಕೆ, ಬಡತನ, ನಿರುದ್ಯೋಗ ಎಲ್ಲವೂ ದೇಶದ ಜನತೆಯನ್ನು ಕಾಡತೊಡಗಿವೆ. ದಿನದಿಂದ ದಿನಕ್ಕೆ ಸಮಸ್ಯೆಗಳೂ ಹೆಚ್ಚಾಗುತ್ತಲೇ ಹೋಗುತ್ತಿವೆ. ಹೀಗಿರುವಾಗ ವಿಶ್ವ ಬ್ಯಾಂಕ್‌ಗೆ ಭಾರತದ ಆರ್ಥಿಕ ಅತಿ ವೇಗದಲ್ಲಿ ಬೆಳೆಯುವ ಆರ್ಥಿಕವಾಗಿ ಕಾಣುತ್ತಿದೆ, ಭಾರತವನ್ನು ಅದು ಹೊಗಳುತ್ತದೆ, ಹೇಗಿದೆ ಈ ವಿಪರ್ಯಾಸ?



ಸುಂಕ ಹಗರಣ

ಉದಾರೀಕರಣದ ಆರ್ಥಿಕ ರಫ್ತಿನ ಮೇಲೆ ಅವಲಂಬಿಸಿರುತ್ತದೆ. ರಫ್ತಿಗೆ ನಮ್ಮ ಆರ್ಥಿಕ, ತಂತ್ರಜ್ಞಾನ ಎರಡೂ ಗಟ್ಟಿಮುಟ್ಟಾಗಿರಬೇಕು. ಇವೆರಡೂ ಇಲ್ಲದಿದ್ದಾಗ ರಫ್ತಿನ ಹೆಸರಿನಲ್ಲಿ ಎಲ್ಲಾ ತರಹದ ಹಗರಣಗಳು ನಡೆಯುತ್ತಿರುತ್ತದೆ.

ರಫ್ತುದಾರರಿಗೆ ಪ್ರೋತ್ಸಾಹ ನೀಡಲು ಅನೇಕ ಯೋಜನೆಗಳನ್ನು ಸರ್ಕಾರ ಹಾಕಿಕೊಳ್ಳುತ್ತಿದೆ. ಆದರೆ ರಫ್ತಿನ ಹೆಸರಿನಲ್ಲಿ ಆಗುತ್ತಿರುವ ಮೋಸ ತಡೆಗಟ್ಟುವ ಸಾಮರ್ಥ್ಯ ಸರ್ಕಾರಕ್ಕಿಲ್ಲ.

ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಶೇ. 100ರಷ್ಟು ರಫ್ತು ಮಾಡುವ ಹೆಸರುಳ್ಳ ಘಟಕಗಳು ಸರ್ಕಾರಕ್ಕೆ ಅಪಾರ ಪ್ರಮಾಣದಲ್ಲಿ ಅಬ್ಕಾರಿ ಸುಂಕ ತಪ್ಪಿಸಿರುವುದು ಈಗ ಕಂಡು ಬಂದಿದೆ. ಸುಮಾರು 150 ಕೋಟಿ ರೂಪಾಯಿಗಳಷ್ಟು ಸುಂಕವನ್ನು ಈ ಘಟಕಗಳು ತಪ್ಪಿಸಿವೆಯಂತೆ.

ಕಳೆದ ಎರಡು ತಿಂಗಳುಗಳಲ್ಲಿ ಇಂತಹ 30 ಪೂರ್ಣ ರಫ್ತು ಉದ್ದೇಶಿತ ಘಟಕಗಳು ಸ್ಥಾಪನೆಗೊಂಡು ಅವು ಸುಂಕ ತಪ್ಪಿಸತೊಡಗಿದೆಯಂತೆ.

ಇದು ತನಿಖೆಯಿಂದ ಹೊರಬಂದಿದ್ದು. ಹೊರಬರದೇ ಉಳಿದಿರುವ ಇಂತಹ ಹಗರಣಗಳು ಅದೆಷ್ಟಿವೆಯೋ ಗೊತ್ತಿಲ್ಲ.

ಈರುಳ್ಳಿಯ ಆಮದು

ಕೇಂದ್ರ ಸರ್ಕಾರ 13000 ಟನ್‌ಗಳಷ್ಟು ಈರುಳ್ಳಿ ಆಮದು ಮಾಡಿಕೊಳ್ಳುವ ತೀರ್ಮಾನ ಕೈಗೊಂಡಿದೆ. ನ್ಯಾಶನಲ್ ಅಗ್ರಿಕಲ್ಚರಲ್ ಫೆಡರೇಷನ್(ನಫೇದ್) 10000 ಟನ್ನುಗಳಷ್ಟನ್ನು ಆಮದು ಮಾಡಿಕೊಂಡರೆ ದೆಹಲಿ ಸರ್ಕಾರ 3000 ಟನ್ನುಗಳಷ್ಟು ಆಮದು ಮಾಡಿಕೊಳ್ಳಲಿದೆ.

ಇದು ತಾತ್ಕಾಲಿಕ ಕ್ರಮವಾಗಿ ಸರಿಯಾಗಿರಬಹುದು. ಆದರೆ ಈ ಸಮಸ್ಯೆಗೆ ದೀರ್ಘಕಾಲಿಕ ಪರಿಹಾರ ಬೇಕಾದಲ್ಲಿ ದೇಶದಲ್ಲಿ ಈ ಬೆಳೆಯನ್ನು ಸಾಕಷ್ಟು ಪ್ರಮಾಣದಲ್ಲಿ ಬೆಳೆದು ಸ್ವಾವಲಂಬನೆ ಸಾಧಿಸಬೇಕು.

ರಫ್ತಿಗಾಗಿ ಉದಾರೀಕರಣ ಮಾಡಿ ಈಗ ರಫ್ತು ಬೆಳೆವ ಬದಲು ಹಿಂದಿಗಿಂತ ಕಡಿಮೆಯಾಗಿದೆ. ಈರುಳ್ಳಿಯಂತಹ ಸರಕನ್ನು ಆಮದು ಮಾಡಿಕೊಳ್ಳ ತೊಡಗಿದರೆ ವಿದೇಶಿ ವಿನಿಮಯ ಪೋಲಾಗುತ್ತದೆ. ಸಾಲದ ಬಲೆಯಲ್ಲಿ ಭಾರತ ಸಿಕ್ಕಿಕೊಳ್ಳುತ್ತದೆ. ಕೇಂದ್ರದ ಬಿ.ಜೆ.ಪಿ. ಸರ್ಕಾರಕ್ಕೆ ಇದನ್ನೆಲ್ಲ ಅರಿತುಕೊಳ್ಳುವ ವ್ಯವಧಾನವೇ ಇರಲಿಕ್ಕಿಲ್ಲ. ಶತಾಯ ಗತಾಯ ತನ್ನ ಸರ್ಕಾರ ಉಳಿಸಿಕೊಳ್ಳುವದೇ ಅದರ ಮುಖ್ಯ ಕಾಳಜಿ ಅಲ್ಲವೇ?

ಶ್ರೀಮಂತರ ಮತ್ತು ಬಡವರ ನಡುವಿನ ಅಂತರ ಕಡಿಮೆ ಮಾಡಿ

ಇದನ್ನು ಯಾರು ಹೇಳಿದರು ಗೊತ್ತೇ? ವಿಶ್ವಬ್ಯಾಂಕ್. ಒಳ್ಳೇ ಮಾತನ್ನೇ ಹೇಳಿದೆಯಲ್ಲ ಎನ್ನಬಹುದು ನೀವು. ವಿಶ್ವ ಬ್ಯಾಂಕ್ ಹೇಳಿರುವುದು ಬಡವ ಶ್ರೀಮಂತರ ಜ್ಞಾನದ ಮಟ್ಟದಲ್ಲಿನ ಅಂತರವನ್ನು ಕಡಿಮೆ ಮಾಡಿ ಎಂದು. ಆಹಾರ ಅಥವಾ ಆರ್ಥಿಕ ಅಂತರವನ್ನು ಕಡಿಮೆ ಮಾಡುವುದಲ್ಲ.

ಹಣಕಾಸು, ತಾಂತ್ರಿಕ ಮತ್ತು ವೈದ್ಯಕೀಯ ಜ್ಞಾನ ಹೆಚ್ಚಿಗೆ ಇದ್ದರೆ ಜನರ ಜ್ಞಾನ ಮಟ್ಟ ಹೆಚ್ಚಾಗುತ್ತದೆ ಎಂದು ಅದು ಹೇಳಿದೆ. ಆದ್ದರಿಂದಲೇ ಈ ಜ್ಞಾನದ ಮಟ್ಟವನ್ನು ಹೆಚ್ಚಿಸಬೇಕು ಎಂದು ಅದು ಹೇಳಿದೆ.

ಹೇಗೆ ಜ್ಞಾನದ ಮಟ್ಟವನ್ನು ಹೆಚ್ಚಿಸಬೇಕು ಎಂಬ ಬಗ್ಗೆ ಅವರಲ್ಲಿ ಉಪಾಯವಿರಲಿಕ್ಕಿಲ್ಲ. ಆ ಕಾಳಜಿಯೂ ಇಲ್ಲ ಎಂಬ ಬಗ್ಗೆ ಖಂಡಿತ ಸಂದೇಹ ಬೇಡ. ಯಾಕೆಂದರೆ ಆರ್ಥಿಕ ಮಟ್ಟ ಸುಧಾರಿಸದೆ ಜ್ಞಾನದ ಮಟ್ಟ ಹೆಚ್ಚಿಸುವುದು ಬಹಳ ಕಠಿಣ ಎಂಬುದು ಎಲ್ಲರಿಗೂ ಗೊತ್ತೇ ಇದೆ ಅಲ್ಲವೇ?

ಕರ್ನಾಟಕದಲ್ಲಿ ಕಳೆದವಾರ

ಅಕ್ಟೋಬರ್ 16

- ವಿದ್ಯುತ್ ಮಂಡಲಿ ಇತ್ತೀಚೆಗೆ ಹೆಚ್ಚಿಸಿದ್ದ ವಿದ್ಯುತ್ ದರಗಳಲ್ಲಿ ಮನೆದೀಪ, ಎ.ಐ.ಎಚ್, ಸಣ್ಣ ಕೈಗಾರಿಕೆಗಳಿಗೆ ಸ್ವಲ್ಪ ಮಟ್ಟಿನ ರಿಯಾಯ್ತಿ ನೀಡಲು ಸರ್ಕಾರದ ತೀರ್ಮಾನ - ಆಡಳಿತ ಪಕ್ಷದ ಭಿನ್ನಮತೀಯರ ಒತ್ತಾಯ ಕಾರಣವಂತೆ.
- ಉತ್ತರ ಕರ್ನಾಟಕದಲ್ಲಿ ಅತಿವೃಷ್ಟಿಯ ಅನಾಹುತ ಮುಂದುವರಿಕೆ.
- ವಿಧಾನಸಭೆಯಲ್ಲೇ ಬೆಂಬಲ ಸಾಬೀತುಪಡಿಸುವುದಾಗಿ ಮುಖ್ಯಮಂತ್ರಿಗಳು.

ಅಕ್ಟೋಬರ್ 17

- ಕಲ್ಬುರ್ಗಿಯಲ್ಲಿ ಭೀಮಾ ನದಿಯ ಪ್ರವಾಹ ಸ್ವಲ್ಪ ಮಟ್ಟಿಗೆ ಇಳಿಮುಖ

ಅಕ್ಟೋಬರ್ 18

- ದಳವನ್ನು ಇನ್ನಷ್ಟು ಶಕ್ತಿಯುತವಾಗಿ ಸಂಘಟಿಸುವುದಾಗಿ ದೇವೇಗೌಡರು
- ರಾಜ್ಯ ನೆರೆ ಪರಿಹಾರಕ್ಕೆ 50 ಕೋಟಿ ರೂ. ನೆರವು ನೀಡುವುದಾಗಿ ಹೈದರಾಬಾದಿನಲ್ಲಿ ಪ್ರಧಾನಿ ಪ್ರಕಟಣೆ.

ಅಕ್ಟೋಬರ್ 19

- ಖ್ಯಾತ ಸಾಹಿತಿ ಹಾಗೂ ಚಲನಚಿತ್ರ ನಿರ್ದೇಶಕ ಚದುರಂಗ(ಸುಬ್ರಮಣ್ಯರಾಜೇ ಅರಸು) ನಿಧನ.

ಅಕ್ಟೋಬರ್ 20

- ಇನ್ನೊಬ್ಬ ಖ್ಯಾತ ಕಾದಂಬರಿಕಾರ ಸತ್ಯಕಾಮ(ಅನಂತಕೃಷ್ಣ ಶಹಾಪೂರ) ನಿಧನ.
- ರಾಜ್ಯದಲ್ಲಿ ಅತಿವೃಷ್ಟಿ ಪರಿಹಾರಕ್ಕೆ ಕನಿಷ್ಠ 300 ಕೋಟಿ ರೂ. ಬಿಡುಗಡೆ ಮಾಡಬೇಕು ಎಂದು ಕೇಂದ್ರಕ್ಕೆ ಮುಖ್ಯಮಂತ್ರಿಗಳ ಆಗ್ರಹ.
- ಶಾಸಕಾಂಗ ಪಕ್ಷದ ಸಭೆಯಲ್ಲೇ ವಿಶ್ವಾಸಮತ ಕೋರಬೇಕೆಂಬ ಆಗ್ರಹಕ್ಕೆ ಮುಖ್ಯಮಂತ್ರಿಗಳ ನಕಾರ.

ಅಕ್ಟೋಬರ್ 21

- ಪಟೇಲರು ಅಧಿಕಾರದಲ್ಲಿ ಮುಂದುವರಿಯಲು ಕೆಲವು ವಿರೋಧ ಪಕ್ಷಗಳ ಜೊತೆ ಶಾಮೀಲಾಗಿದ್ದಾರೆ ಎಂದು ದೇವೇಗೌಡರ ಆರೋಪ.
- ಈ ವರ್ಷದ 16 ಸಾವಿರ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಿಸಲು ಉದ್ದೇಶಿಸಲಾಗಿದೆ ಎಂದು ಶಿಕ್ಷಣ ಸಚಿವರು

ಅಕ್ಟೋಬರ್ 22

- ರಾಜ್ಯದಲ್ಲಿ ಸರ್ಕಾರದ ನಾಯಕತ್ವ ಬದಲಾವಣೆಗೆ 50 ಶಾಸಕರ ಆಗ್ರಹ
- ಅಧಿಕಾರ ಉಳಿಸಿಕೊಳ್ಳಲು ಬಿಜೆಪಿ ಬೆಂಬಲ ಯಾಚಿಸಿರುವ ಆರೋಪ ಹುರುಳಿಲ್ಲದ್ದು ಎಂದು ಪಟೇಲ್.

ಬೆಳೆ ಹಾನಿಯಿಂದಾಗಿ ರೈತರಿಗೆ ಪರಿಹಾರ ನೀಡಲು ಆಗ್ರಹ

ದ. ಕನ್ನಡ : ಮಳೆ ವೈಪರೀತ್ಯದಿಂದಾಗಿ ಜಿಲ್ಲೆಯಲ್ಲಿ ಅಪಾರವಾದ ಬೆಳೆ ಹಾನಿಯಾಗಿರುವುದರಿಂದ ರೈತರಿಗೆ ಸರಕಾರ ಕೂಡಲೇ ಸೂಕ್ತ ಪರಿಹಾರವನ್ನು ನೀಡಬೇಕೆಂದು ಪಾವಾರು ಗ್ರಾಮ ರೈತ ಸಮ್ಮೇಳನವು ಆಗ್ರಹಿಸಿದೆ.

ಕರ್ನಾಟಕ ಪ್ರಾಂತ ರೈತ ಸಂಘದ ಈ ಸಮ್ಮೇಳನದಲ್ಲಿ ಈ ಬಗ್ಗೆ ನಿರ್ಣಯವೊಂದನ್ನು ಕೈಗೊಂಡು, ಸರಕಾರವು ರೈತರಿಗೆ ನೀಡಿರುವ ಸಬ್ಸಿಡಿಯನ್ನು ಒಂದೊಂದಾಗಿ ಹಿಂದಕ್ಕೆ ಪಡೆಯುತ್ತಿರುವುದರಿಂದ ಜಿಲ್ಲೆಯ ಜನರ ಮುಖ್ಯ ಆಹಾರವಾದ ಭತ್ತವನ್ನು ಬೆಳೆಯಲು ನಿರುತ್ಸಾಹ ತೋರುತ್ತಿರುವುದರಿಂದ ಅವರಿಗೆ ಹಿಂದಿನ ರೀತಿಯಲ್ಲಿ ಸಬ್ಸಿಡಿಯನ್ನು ಮುಂದುವರೆಸಬೇಕು ಹಾಗೂ ಅವರ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ಒದಗಿಸಬೇಕೆಂದು ಒತ್ತಾಯಿಸಿದೆ.

ಮಂಗಳೂರು ತಾಲ್ಲೂಕು ರೈತ ಸಂಘದ ಪ್ರಧಾನ ಕಾರ್ಯದರ್ಶಿ ರಾಮಚಂದ್ರ ಉಚ್ಚಿಲ್‌ರವರು ಸಮ್ಮೇಳನವನ್ನು ಉದ್ಘಾಟಿಸಿದರು. ಸಮ್ಮೇಳನದ ಅಧ್ಯಕ್ಷತೆ ಯನ್ನು ಪಾವಾರು ಗ್ರಾಮ ಪಂಚಾಯತ್ ಸದಸ್ಯರಾದ ಲಕ್ಷ್ಮಣ ಕೋಟ್ಯಾನ್‌ರವರು ವಹಿಸಿದ್ದರು. ಬಾಬು ಪೂಜಾರಿ, ಶ್ರೀನಿವಾಸ ಆಳ್ವ ಮಾತನಾಡಿದರು.

- ಸರಕಾರಿ ಸ್ಥಳಗಳಲ್ಲಿ ಮನೆ ಕಟ್ಟಿದವರಿಗೆ ಹಕ್ಕು ಪತ್ರ ನೀಡಬೇಕು.
- ಸರಕಾರಿ ಸ್ಥಳಗಳಲ್ಲಿ ಕೃಷಿ ಮಾಡಿದವರ ಭೂಮಿಯನ್ನು ಗಡಿ ಗುರುತಿಸಿ ಸಕ್ರಮಗೊಳಿಸಬೇಕು.
- ಕೃಷಿ ಕಾರ್ಮಿಕರಿಗೆ ಪೆನ್‌ಷನ್ ಯೋಜನೆ ಜ್ಯಾರಿಗೊಳಿಸಬೇಕು.
- ತೋಡಿನಲ್ಲಿ ತುಂಬಿರುವ ಹೊಯ್ಗೆ ಮಣ್ಣನ್ನು ತೆಗೆಸಿ ರೈತರ ಕೃಷಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಬೇಕು.
- ಪಡ್ಡಾಯಿ ಮಾರ್ಗವನ್ನು ಬೊಟ್ಟಿಮಾರ್‌ವರೆಗೆ ಮುಂದುವರೆಸಬೇಕು ಎಂದು ಸಮ್ಮೇಳನವು ನಿರ್ಣಯ ಕೈಗೊಂಡು ಒತ್ತಾಯಿಸಿದೆ.

ವೆಂಕಪ್ಪ ಬಂಗೇರ-ಅಧ್ಯಕ್ಷರು, ಲಕ್ಷ್ಮಣ ಕೋಟ್ಯಾನ್, ಅಬ್ದುಲ್ ರೆಹಮಾನ್, ಹಮೀದ್ ಮಲಾರ್‌ಪದವು-ಉಪಾಧ್ಯಕ್ಷರು, ಬೆನಡಿಕ್ಟ್ ಮೊರೊನ್ಹಾ ಕಾರ್ಯದರ್ಶಿ, ಪಿಯುಸ್ ಡಿ ಸೋಜ, ವಿಶ್ವನಾಥ ಪಾವಾರು, ರಾಮ ಪೂಜಾರಿ ಕಿಲ್ಲೂರು, ಜೊತೆ ಕಾರ್ಯದರ್ಶಿಗಳಾಗಿ ಹಾಗೂ ಉಗ್ಗಪ್ಪ ಪೂಜಾರಿ ಖಜಾಂಚಿಯಾಗಿರುವ 20 ಜನರ ಕಾರ್ಯಕಾರಿ ಸಮಿತಿಯನ್ನು ಆಯ್ಕೆ ಮಾಡಲಾಯಿತು.

ಬೆಳೆ ಹಾನಿ ಮನೆ ಹಾನಿ ಪರಿಹಾರಕ್ಕೆ ಆಗ್ರಹ

ಬಿಜಾಪುರ: ಜಿಲ್ಲೆಯಲ್ಲಿ ಸತತವಾಗಿ ಎರಡು ತಿಂಗಳಿಂದ ಬೀಳುತ್ತಿರುವ ಮಳೆಯಿಂದಾಗಿ ಮುಂಗಾರಿನ ಬೆಳೆಗಳಿಗೆ ಹಾನಿಯಾಗಿದ್ದು ಹಿಂಗಾರು ಬೆಳೆ ಬಿತ್ತಲು ಆಗುತ್ತಿಲ್ಲ. ಹೀಗಾಗಿ ರೈತರು ತೀವ್ರ ಸಂಕಷ್ಟಕ್ಕೊಳಗಾಗಿದ್ದಾರೆ. ಮನೆಗಳು ಕೂಡಾ ಸಾಕಷ್ಟು ಸಂಖ್ಯೆಯಲ್ಲಿ ಕುಸಿದುಬಿದ್ದಿವೆ ಅಲ್ಲದೆ ದನಕರು ಆಸ್ತಿ ಪಾಸ್ತಿ ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ. ಸರಕಾರವು ಕೂಡಲೆ ಸರ್ವೆ ನಡೆಸಿ ತೀವ್ರ ಗತಿಯಲ್ಲಿ ಪರಿಹಾರ ಕಾಮಗಾರಿ ಪ್ರಾರಂಭಿಸಬೇಕು ಹಾಗೂ ಪರಿಹಾರ ಧನ ನೀಡಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘ ಜಿಲ್ಲಾಧ್ಯಕ್ಷ ಭೀಮಸಿ ಕಲಾದಗಿ, ಪ್ರಧಾನ ಕಾರ್ಯದರ್ಶಿ ಅಣ್ಣಾರಾಯ ಈಳಗೇರ ಅವರು ಸರಕಾರಕ್ಕೆ ಆಗ್ರಹಿಸಿದ್ದಾರೆ.

ಅತೀವೃಷ್ಟಿಯಿಂದ ನಷ್ಟ : ಪರಿಹಾರಕ್ಕೆ ಮನವಿ

ದೇವದುರ್ಗ : ತಾಲ್ಲೂಕಿನ ಜಾಲಹಳ್ಳಿ ಗ್ರಾಮದಲ್ಲಿ ಇತ್ತೀಚೆಗೆ ಬಿದ್ದ ಭಾರಿ ಮಳೆಯಿಂದಾಗಿ ನೂರಾರು ಮನೆಗಳು ಹಾನಿಗೊಳಗಾಗಿದ್ದು ಗ್ರಾಮಸ್ಥರು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ ಎಂದಿರುವ ಡಿ.ವೈ.ಎಫ್.ಐ. ಗ್ರಾಮ ಘಟಕವು, ತಹಸೀಲ್ದಾರರಿಗೆ ಮನವಿ ನೀಡಿ ಸಂತ್ರಸ್ತರಿಗೆ ಕೂಡಲೇ ಪರಿಹಾರ ನೀಡುವಂತೆ ಸಿ.ಎಸ್. ನಾಡಗೌಡ ಹಾಗೂ ಎನ್.ಎಸ್. ಘನಾತೆ ನೇತೃತ್ವದ ಡಿ.ವೈ.ಎಫ್.ಐ. ನಿಯೋಗವು ಸರ್ಕಾರವನ್ನು ಒತ್ತಾಯಿಸಿದೆ.

ಚಿಂತಾಮಣಿ ಎ.ಪಿ.ಎಂ.ಸಿ. ಅಧ್ಯಕ್ಷರ ದಿಟ್ಟ ಕ್ರಮಕ್ಕೆ ರೈತ ಸಂಘದ ಸ್ವಾಗತ

ಚಿಂತಾಮಣಿ ಎ.ಪಿ.ಎಂ.ಸಿ. ಮಾರುಕಟ್ಟೆಯಲ್ಲಿ ಅಕ್ಟೋಬರ್ 10, 98 ರಿಂದ ಶೇ. 5 ರಷ್ಟು ಮಾತ್ರ ಕಮೀಷನ್ ಹಣವನ್ನು ರೈತರಿಂದ ಕಮೀಷನ್ ಏಜೆಂಟರು ಪಡೆಯಬೇಕೆಂದು ಎ.ಪಿ.ಎಂ.ಸಿ. ಅಧ್ಯಕ್ಷರ ಸಮ್ಮುಖದಲ್ಲಿ ನಡೆದ ರೈತರ ಕಮೀಷನ್ ಏಜೆಂಟರ ಮತ್ತು ರೈತ ಪ್ರತಿನಿಧಿಗಳ ಸಭೆಯಲ್ಲಿ ತೀರ್ಮಾನಿಸಲಾಯಿತು. ರೈತ ಬಂಧುಗಳು ಈ ತೀರ್ಮಾನದ ಪೂರ್ಣ ಪ್ರಯೋಜನ ಪಡೆದು ಶೇ. 5 ರಷ್ಟು ಮಾತ್ರ ಕಮೀಷನ್ ಹಣ ನೀಡಬೇಕೆಂದು ಮತ್ತು ಈ ಕುರಿತು ಎಲ್ಲಾ ಬಂಧುಗಳಲ್ಲಿ ತಿಳುವಳಿಕೆ ಮೂಡಿಸಬೇಕೆಂದು ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ವಿನಂತಿಸಿದೆ. ಸರ್ಕಾರದ ಕಾನೂನಿನಂತೆ ರೈತರ ಫಸಲನ್ನು ಕೊಂಡು ಕೊಳ್ಳುವ ವ್ಯಾಪಾರಸ್ತರಿಂದ ಕಮೀಷನ್ ಸಂಗ್ರಹ ಮಾಡುವುದರ ಬದಲಿಗೆ ಸುಮಾರು ವರ್ಷಗಳಿಂದ ಅಕ್ರಮವಾಗಿ ರೈತರಿಂದ ಶೇ. 10 ರಷ್ಟು ಕಮೀಷನ್ ಸಂಗ್ರಹ ಮಾಡುತ್ತಾ ಏಜೆಂಟರು ರೈತರ ಶೋಷಣೆಯನ್ನು ನಡೆಸಿದ್ದರು. ಈ ಅನ್ಯಾಯದ ವಿರುದ್ಧ ಹಲವಾರು ಪ್ರತಿಭಟನೆಗಳು ನಡೆದರೂ ಪ್ರಯೋಜನವಾಗಿರಲಿಲ್ಲ. ಇತ್ತೀಚೆಗೆ ಈ ಎಲ್ಲಾ ಅಕ್ರಮಗಳನ್ನು ಸರಿಪಡಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಎ.ಪಿ.ಎಂ.ಸಿ ಕಾಯಿದೆಗೆ ತಿದ್ದುಪಡಿಯನ್ನು ತಂದು ವರ್ತಕರ ಪ್ರತಿರೋಧದ ನಡುವೆಯೂ ಜಾರಿಗೊಳಿಸಲು ಪ್ರಯತ್ನಿಸಿರುವುದನ್ನು ರೈತ ಸಂಘ ಸ್ವಾಗತಿಸಿದೆ.

ಚಿಂತಾಮಣಿಯ ಎಂ.ಪಿ.ಎಂ.ಸಿ. ಅಧ್ಯಕ್ಷರು ದಿಟ್ಟತನದ ರೈತರ ಪರವಾದ ನಿರ್ಧಾರವನ್ನು ಕೈಗೊಂಡು ರೈತರಿಂದ ಕಮೀಷನ್ ಸಂಗ್ರಹ ಮಾಡುವುದನ್ನು ನಿಲ್ಲಿಸಬೇಕೆಂದು, ಇದರ ಪ್ರಥಮ ಹಂತವಾಗಿ ತಕ್ಷಣ ಶೇ.5 ರಷ್ಟು ಕಮೀಷನ್ ಮಾತ್ರ ರೈತರು ಪಾವತಿ ಮಾಡಬೇಕೆಂದು ರೈತರಿಗೆ ತಿಳಿಸಿದರು. ಇದರ ಪರಿಣಾಮವಾಗಿ ಇಂದು ಚಿಂತಾಮಣಿ ಮಾರುಕಟ್ಟೆಯಲ್ಲಿ ರೈತರ ಮತ್ತು ಏಜೆಂಟರ ನಡುವೆ ಬಿಕ್ಕಟ್ಟಿನ ಪರಿಸ್ಥಿತಿ ಉಂಟಾಗಿತ್ತು. ಈ ಹಿನ್ನಲೆಯಲ್ಲಿ ನಡೆದ ಸಭೆಯಲ್ಲಿ ಚರ್ಚೆ ಮಾಡಿ ಅಕ್ಟೋಬರ್ 10, 98 ರಿಂದ ಶೇ.5 ರಂತೆ ಕಮೀಷನ್ ಮಾತ್ರ ಪಡೆಯಬೇಕೆಂದು ತೀರ್ಮಾನವಾಗಿದೆ.

ಈ ರೈತರ ಪರವಾದ ನಿಲುವನ್ನು ಕೈಗೊಂಡ ಎಪಿಎಂಸಿ ಅಧ್ಯಕ್ಷರ ಕ್ರಮವನ್ನು ರೈತ ಸಂಘದ ಜಿಲ್ಲಾ ಸಮಿತಿ ಅಭಿನಂದಿಸಿ ಮುಂದಿನ ದಿನಗಳಲ್ಲಿ ಕಾನೂನಿನಂತೆ ರೈತರಿಂದ ಕಮೀಷನ್ ಸಂಗ್ರಹ ಮಾಡುವ ಪದ್ಧತಿಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಒತ್ತಾಯಿಸಿದೆ.

ಐತಾಳ ಬೆಟ್ಟು ರಸ್ತೆ ಹಾಗೂ ಶೀಘ್ರ ದಾರಿದೀಪ ವ್ಯವಸ್ಥೆಗೊಳಿಸಲು ಒತ್ತಾಯ

ಕೋಟೇಶ್ವರ ಗ್ರಾಮ ರೈತ ಸಂಘದ ಕಛೇರಿಯಲ್ಲಿ ಬಿ.ಕೆ. ದೇವಾಡಿಗರ ಅಧ್ಯಕ್ಷತೆಯಲ್ಲಿ ಜರುಗಿದ ಗ್ರಾಮ ರೈತ ಸಂಘ ಸಮ್ಮೇಳನದಲ್ಲಿ ಐತಾಳ ಬೆಟ್ಟು ರಸ್ತೆಯ ಶೀಘ್ರ ದುರಸ್ತಿ ಹಾಗೂ ದಾರಿದೀಪಕ್ಕಾಗಿ ಒತ್ತಾಯಿಸಿ ನಿರ್ಣಯ ತೆಗೆದುಕೊಳ್ಳಲಾಯಿತು. ಗ್ರಾಮದ ಒಳರಸ್ತೆಗಳು, ದಾರಿದೀಪ ಹಾಗೂ ನೀರಿನ ತೋಡು ರಿಪೇರಿಗಾಗಿ ಸಮ್ಮೇಳನದಲ್ಲಿ ಒತ್ತಾಯಿಸಲಾಯಿತು. ಅಖಿಲ ಭಾರತ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಜರುಗಿದ ಈ ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಅಬ್ರಹಾಂ ಕರ್ಕಡ, ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ಯು. ದಾಸ ಭಂಡಾರಿ ಭಾಗವಹಿಸಿ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು.

ನೂತನ ಸಮಿತಿ ಅಧ್ಯಕ್ಷರಾಗಿ ಬಿ.ಕೆ. ದೇವಾಡಿಗ, ಉಪಾಧ್ಯಕ್ಷರಾಗಿ ನಾರಾಯಣ ಪೂಜಾರಿ ಮತ್ತು ಶೀನ ದೇವಾಡಿಗ, ಕಾರ್ಯದರ್ಶಿಯಾಗಿ ಗೋವಿಂದ ಶೆಟ್ಟಿಗಾರ, ಜೊತೆ ಕಾರ್ಯದರ್ಶಿಯಾಗಿ ಗಣಪ ಹಾಗೂ ಮುತ್ತ, ಕೋಶಾಧಿಕಾರಿಯಾಗಿ ವಾಸು, ಸಮಿತಿ ಸದಸ್ಯರಾಗಿ ಶೇಖರ ಮೊಗವೀರ, ಸುರೇಶ, ಸೂರ್ಯ, ಕುಶಲ ಇವರನ್ನು ಆಯ್ಕೆ ಮಾಡಲಾಯಿತು.

ಗೋಮಾಳ ಭೂಮಿಗಾಗಿ ಒತ್ತಾಯಿಸಿ ರೈತ ಕೃಷಿ ಕೂಲಿಕಾರರ ಧರಣಿ

ದೊಡ್ಡಬಳ್ಳಾಪುರ ತಾಲ್ಲೂಕಿನ ಸಾಸಲು ಹೋಬಳಿಯ ಬೈರಾಪುರ ಮತ್ತು ಸುತ್ತ ಹಳ್ಳಿ ಗ್ರಾಮಗಳಿಗೆ ಸೇರಿದ ಸುಮಾರು 360 ಎಕರೆ ಗೋಮಾಳ ಭೂಮಿಯನ್ನು ಬಡ ರೈತ ಕೃಷಿ ಕೂಲಿಕಾರರು ಹಲವಾರು ವರ್ಷಗಳಿಂದ ಉಳುಮೆ ಮಾಡುತ್ತಿದ್ದಾರೆ. ಆದರೆ ಈಗ ಅರಣ್ಯ ಇಲಾಖೆಯ ಅಧಿಕಾರಿಗಳು ಇದು ಅರಣ್ಯ ಭೂಮಿಯೆಂದು ವಿನಾಕರಣ ರೈತರಿಗೆ ಅಡ್ಡಿಯುಂಟು ಮಾಡುತ್ತಿದ್ದಾರೆ. ಇದನ್ನು ಪ್ರತಿಭಟಿಸಿ ಮೇಲ್ಕಂಡ ಗ್ರಾಮಗಳ ರೈತರು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಅಕ್ಟೋಬರ್ 13 ರಂದು ತಾಲ್ಲೂಕು ಕಛೇರಿ ಮುಂಧೆ ಧರಣಿ ನಡೆಸಿದರು.

ನೆರದಿದ್ದ ರೈತರನ್ನು ಉದ್ದೇಶಿಸಿ ಮಾತನಾಡಿದ ತಹಸಿಲ್ದಾರರು ಸರ್ವೆ ನಂ. 7 ಮತ್ತು 15ರ ಗೋಮಾಳ ಭೂಮಿಯನ್ನು ಅಳತೆ ಮಾಡಿಸುವುದಾಗಿಯೂ, ಬಡ ರೈತರಿಗೆ ವಿತರಿಸಲು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಇದಕ್ಕೆ ಮೊದಲು ಬೇಡಿಕೆಗಳ ಒಂದು ಮನವಿ ಪತ್ರವನ್ನು ನೀಡಲಾಯಿತು. ಹೋರಾಟದ ನೇತೃತ್ವವನ್ನು ರೈತ ಸಂಘದ ತಾಲ್ಲೂಕು ಕಾರ್ಯದರ್ಶಿ ಚಂದ್ರ ತೇಜಸ್ವಿ ಮಾರುತಿ ಕೃಷ್ಣಪ್ಪ, ನಾರಾಯಣಸ್ವಾಮಿ ಮತ್ತು ನಾರಾಯಣಪ್ಪ ಹಾಗೂ ಡಿ.ವೈ.ಎಫ್.ಐ.ನ ಹೇಮಂತ್ ರಾಜ್, ವೆಂಕಟೇಶ್, ರಿಜ್ವಾನ್, ನರಸಿಂಹ ವಹಿಸಿದ್ದರು.

ವಾರಾಹಿ ನೀರಾವರಿ ಯೋಜನೆ ತುರ್ತು ಜ್ಯಾರಿಗೊಳಿಸಲು ಒತ್ತಾಯ

ಕುಂದಾಪುರ : ನೆನೆಗುದಿಗೆ ಬಿದ್ದಿರುವ ವಾರಾಹಿ ನೀರಾವರಿ ಯೋಜನೆಯನ್ನು ಶೀಘ್ರ ಕಾರ್ಯಗತಗೊಳಿಸಲು ಒತ್ತಾಯಿಸಿ ಎ.ಐ.ಕೆ.ಎಸ್. ಕುಂದಾಪುರ ಸಮಿತಿ ಹಮ್ಮಿಕೊಂಡಿರುವ ಹೋರಾಟವನ್ನು ಬೆಂಬಲಿಸಲು ಚೆಳ್ಕೂರು ಗ್ರಾಮ ರೈತ ಸಮ್ಮೇಳನ ತೀರ್ಮಾನಿಸಿದೆ. ಈ ಸಮ್ಮೇಳನದ ಅಧ್ಯಕ್ಷತೆಯನ್ನು ಗೋಪಾಲ ಕುಲಾಲರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಅಬ್ರಹಾಂ ಕರ್ಕಡರು, ತಾಲ್ಲೂಕು ರೈತ ಸಂಘದ ಕಾರ್ಯದರ್ಶಿ ದಾಸು ಭಂಡಾರಿಯವರು, ಮಾತನಾಡಿದರು.

ನೂತನ ಸಮಿತಿ ಅಧ್ಯಕ್ಷ-ಗೋಪಾಲ ಕುಲಾಲ, ಉಪಾಧ್ಯಕ್ಷ-ಎಂ. ಬಾಬು ಮತ್ತು ಆನಂದ ಕಾರ್ಯದರ್ಶಿ, ಪ್ರಭಾಕರ ಜೊತೆ ಕಾರ್ಯದರ್ಶಿಗಳಾಗಿ, ಐ. ಸೂರ ಮತ್ತು ಖಜಾಂಚಿಯಾಗಿ ಶೇಖರ, ಸಮಿತಿಯ ಸದಸ್ಯರಾಗಿ ಬಿ. ರಮೇಶ, ಬಿ. ಮಂಜುನಾಥ, ಉಮೇಶ, ಬಾಬು, ಗೋಪಾಲ, ಬಾಬು ಪೂಜಾರಿ, ಬಸವ ಕುಲಾಲ, ನಾರಾಯಣ, ಬಿ. ಹೆರಿಯ ಪೂಜಾರಿ, ರಾಜು, ಗಣೇಶ ಉಪಾಧ್ಯಾಯ, ಮಂಜುನಾಥ ಇವರನ್ನು ಆರಿಸಲಾಯಿತು.

ಬಿಜಾಪುರ ಲಾರಿ ಹಮಾಲ ಯೂನಿಯನ್ (ಸಿ.ಐ.ಟಿ.ಯು) ಅಪೂರ್ವ ಸಾಧನೆ

ಬಿಜಾಪುರ ಜಿಲ್ಲಾ ಲಾರಿ ಹಮಾಲ ಯೂನಿಯನ್ (ಸಿ.ಐ.ಟಿ.ಯು) ಸ್ಥಾಪನೆಯಾಗಿ ಕಳೆದ ನಾಲ್ಕು ವರ್ಷಗಳಲ್ಲಿ ಅಪೂರ್ವ ಯಶಸ್ಸು ಸಾಧಿಸಿದೆ. ಭೀಮಸಿ ಕಲಾದಗಿ (ರೈತ ಸಂಘದ ಅಧ್ಯಕ್ಷರು) ಮತ್ತು ಮನ್ಸೂ ಸಾಬ ಅವರ ಪ್ರಯತ್ನದಿಂದ ಸ್ಥಾಪನೆಯಾದ ಈ ಯೂನಿಯನ್ ಹೋರಾಡಿ ತಮ್ಮ ಬೇಡಿಕೆಗಳನ್ನು ಪಡೆದುದ್ದಲ್ಲದೆ, ತಮ್ಮ ದುಡಿತದಿಂದ ಗಳಿಸಿದ ಹಣ ಸಂಗ್ರಹಿಸಿ 12 ಎಕ್ರೆ ಭೂಮಿ ಖರೀದಿಸಿ 300 ಜನ ವಾಸಕ್ಕಾಗಿ ಜಾಗ ಪಡೆಯುವುದರಲ್ಲಿ ಯಶಸ್ವಿಯಾಗಿದ್ದಾರೆ. ಗಾಂಧಿ ಜಯಂತಿ ದಿವಸ ಅಕ್ಟೋಬರ್ 2 ರಂದು 300 ಲಾರಿ ಹಮಾಲರು ಕೆಂಪು ಅಂಗಿ ಧರಿಸಿ, ಕೆಂಬಾವುಟ ಹಿಡಿದು ಎನ್.ಕೆ. ಉಪಾಧ್ಯಯ, ಮನ್ಸೂಸಾಬ ಕಲಾದಗಿ, ಯೂನಿಯನ್ ಅಧ್ಯಕ್ಷ ಚಾಂದಸಾಬ ಮೊದಲಾದವರ ಮುಖಂಡತ್ವದಲ್ಲಿ ಊರು ತುಂಬ ಮೆರವಣಿಗೆ ತೆಗೆದು ತಾವು ಖರೀದಿಸಿರುವ ಜಾಗದಲ್ಲಿ ಹಕ್ಕು ಪತ್ರ ವಿತರಣಾ ಕಾರ್ಯಕ್ರಮವನ್ನು ಸಂಭ್ರಮದಿಂದ ನೆರವೇರಿಸಿದರು. ಇದು ಕೆಂಬಾವುಟ ನೇತೃತ್ವದ ಸಿ.ಐ.ಟಿ.ಯು ಕಾರ್ಯಕ್ರಮ ಇದ್ದರೂ ಕೂಡ, ಅಡಿಗಲ್ಲು ಹಾಕಲು ಗ್ರಾಮಾಭಿವೃದ್ಧಿ ರಾಜ್ಯ ಮಂತ್ರಿಗಳಾದ ಎಸ್.ಸಿ. ಮನಗೋಳಿಯವರು ಬಂದು ಕೆಲಸಗಾರರ ಜೊತೆಯಲ್ಲಿ ತಾವು ಯೂನಿಯನ್ ಜಿಂದಾಬಾದ್ ಘೋಷಣೆ ಕೂಗಿ ಸಹಕಾರ ನೀಡಿದರು. ಸ್ಥಳೀಯ ಬಿ.ಜೆ.ಪಿ. ಶಾಸಕರಾದ ಆಶ್ರಯ ಯೋಜನೆಯ ಅಧ್ಯಕ್ಷರಾದ ಬಸನ್‌ಗೌಡ ಪಾಟೀಲರು ತಮ್ಮ ಭಾಷಣದಲ್ಲಿ ಹಮಾಲರ ಸಂಘಟನೆ ಕಮ್ಯುನಿಸ್ಟರ ನೇತೃತ್ವದಲ್ಲಿದ್ದರೂ ಕೂಡ ಅವರು ಉತ್ತಮ ಹೋರಾಟಗಾರರಾಗಿರುವುದರಿಂದ ಆಶ್ರಯ ಯೋಜನೆಯ ಅಡಿಯಲ್ಲಿ ಮನೆ ಕಟ್ಟಲು, ರಸ್ತೆ, ವಿದ್ಯುತ್ ಒದಗಿಸಲು ಎಲ್ಲಾ ಸಹಾಯ ನೀಡುವ ಆಶ್ವಾಸನೆ ಇತ್ತರು. ಅದರಂತೆಯೇ ಲಾರಿ ಮಾಲಕ ಸಂಘದವರೂ, ವ್ಯಾಪಾರೀ ಸಂಘದವರು ಶುಭಕೋರಿ ಮಾತಾಡಿ ಸಮಾರಂಭಕ್ಕೆ ವಿಶೇಷ ಮೆರಗುಂಟು ಮಾಡಿದರು. ಎ.ಐ.ಟಿ.ಯು.ಸಿ.ಯ ಎಲ್.ಕೆ. ಚಂಚಲಕರ ಶುಭ ಕೋರಿದರು. ಪ್ರಾರಂಭದಲ್ಲಿ ಎನ್.ಕೆ. ಉಪಾಧ್ಯಾಯ ಕೆಂಬಾವುಟದ ಧ್ವಜಾರೋಹಣ ಮಾಡಿದರು. ಜಿಲ್ಲಾ ಪರಿಷತ್ ಅಧ್ಯಕ್ಷ, ಬಿ.ಡಿ.ಎ.ಯ ಮಾಜಿ ಮತ್ತು ಹಾಲಿ ಅಧ್ಯಕ್ಷರುಗಳು ಭಾಷಣ ಮಾಡಿ ಯೂನಿಯನ್ ಆಫೀಸಿಗಾಗಿ ಜಾಗ ಕೊಡುವ ವಿಚಾರ ಪ್ರಕಟಿಸಿದರು. 300 ಕೆಂಪು ಅಂಗಿಧಾರಿ ಲಾರಿ ಹಮಾಲರ ಯೂನಿಯನ್ನಿನ ಮೆರವಣಿಗೆ ಮತ್ತು ಭವ್ಯ ಕಾರ್ಯಕ್ರಮ ನೋಡಿ ಎಲ್ಲರೂ ಆನಂದ ಪಟ್ಟು ಸಿ.ಐ.ಟಿ.ಯು ಕಾರ್ಮಿಕರ ಒಂದು ವಿಶಾಲ ವೇದಿಕೆಯಾಗಿ ಬಿಜಾಪುರದಲ್ಲಿ ಸ್ವಂತ ಖರ್ಚಿನಿಂದಲೇ ವಾಸಕ್ಕಾಗಿ ಸ್ಥಳ ಖರೀದಿಸಿ ಚರಿತ್ರಾರ್ಹ ಕೆಲಸ ಮಾಡಿದ್ದನ್ನು ಪ್ರಶಂಸಿಸಿದ್ದಾರೆ. ಸಿ.ಐ.ಟಿ.ಯು ಮುಖಂಡ ವಿ.ಎಂ. ಸೊನ್ನದ, ಯೂನಿಯನ್ ಅಧ್ಯಕ್ಷ ಮನ್ಸೂ ಸಾಬ ಕಲಾದಗಿ ಮತ್ತು ಭೀಮಸಿ ಕಲಾದಗಿ ಈ ಕಾರ್ಯಕ್ರಮದ ಯಶಸ್ಸಿಗೆ ದುಡಿದು ಯಶಸ್ವಿಗೊಳಿಸಿದರು.

ಡಿ.ವೈ.ಎಫ್.ಐ. ಘಟಕ ರಚನೆ

ಸುರಪುರ : ತಾಲ್ಲೂಕಿನ ಎದಲಬಾವಿ ಗ್ರಾಮದ ಯುವಕರು ಸಭೆ ಸೇರಿ ತಮ್ಮ ಗ್ರಾಮದ ನೈಜ ಸಮಸ್ಯೆಗಳ ಪರಿಹಾರಕ್ಕಾಗಿ ಡಿ.ವೈ.ಎಫ್.ಐ. ಸಂಘಟನೆ ಸೇರಿ ಹೋರಾಟದತ್ತ ಧಾವಿಸಲು ಗ್ರಾಮ ಘಟಕ ರಚಿಸಿಕೊಂಡಿದ್ದಾರೆ. ಸಭೆಯಲ್ಲಿ ಮುಖಂಡರಾದ ಮಹಾದೇವ್ ಮಡಿವಾಳ, ಮಲ್ಲಣ್ಣ ಉಮೇದಾರ ಹಾಗೂ ಗ್ರಾಮದ ಹಿರಿಯರು ಉಪಸ್ಥಿತರಿದ್ದರು.

ಪದಾಧಿಕಾರಿಗಳು : ಅಧ್ಯಕ್ಷರು- ಶಂಕರ್ ಆರ್. ಜಾಧವ್, ಉಪಾಧ್ಯಕ್ಷರು - ಹಣಮಂತರಾಯ ಪೋ॥ ಪಾಟೀಲ, ಕಾರ್ಯದರ್ಶಿ - ದಸ್ತಗೀರ ಸಾಬ, ಸಹ ಕಾರ್ಯದರ್ಶಿಗಳು - ಅಮರೇಶ್ ಹಡಪದ, ಖಜಾಂಚಿ - ಭೀಮಣ್ಣ ಸಾಲವಂಡಗಿ



ಕಳೆದ ಸಂಚಿಕೆಯಲ್ಲಿ ಕಲ್ಕತ್ತೆಯಲ್ಲಿ ಅಕ್ಟೋಬರ್ 5 ರಿಂದ 11 ರವರೆಗೆ ನಡೆದ ಸಿಪಿಐ(ಎಂ) ನ ಹದಿನಾರನೇ ಮಹಾಧಿವೇಶನದ ಕಲಾಪಗಳ ಬಗ್ಗೆ ಓದಿರುವಿರಿ. ಈ ಮಹಾಧಿವೇಶನದ ಚಾರಿತ್ರಿಕ ಮಹತ್ವವನ್ನು ಪೊಲಿಟ್‌ಬ್ಯೂರೋ ಸದಸ್ಯರಾದ **ಸೀತಾರಾಂ ಯೆಚೂರಿಯವರು** ಈ ಲೇಖನದಲ್ಲಿ ವಿಶ್ಲೇಷಿಸಿದ್ದಾರೆ.

“ನಾವು ಜನಗಳ ನಿರೀಕ್ಷೆಗಳನ್ನ ಹುಸಿಗೊಳಿಸೆವು”

ಬಿಗಿಮುಷ್ಟಿಯೆತ್ತಿ ಎದ್ದು ನಿಂತು ಅಂತರ್ರಾಷ್ಟ್ರೀಯ ಕಾರ್ಮಿಕ ವರ್ಗದ 'ಇಂಟರ್ ನ್ಯಾಷನಲ್' ಹಾಡಿಗೆ ದನಿಗೂಡಿಸಿದ ಸಿಪಿಐ(ಎಂ)ನ ಹದಿನಾರನೇ ಮಹಾಧಿವೇಶನದ ಪ್ರತಿನಿಧಿಗಳು ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಬಲಿಷ್ಠಗೊಳಿಸಿ ಮುನ್ನಡೆಯುವ, ಆ ಮೂಲಕ ಭಾರತದಲ್ಲಿ ವರ್ಗ ಬಲಾಬಲವನ್ನು ಬದಲಿಸುವ ದೃಢನಿರ್ಧಾರವನ್ನು ಅಭಿವ್ಯಕ್ತಗೊಳಿಸಿದರು. ಈ ಮುನ್ನಡೆ ಸಾಧಿಸುವಲ್ಲಿ ಮಾಡಬೇಕಾದ ಕೇಂದ್ರ ಕೆಲಸವೆಂದರೆ ಕೋಮುವಾದಿ ಶಕ್ತಿಗಳ ದುಷ್ಟ ತಂತ್ರಗಳನ್ನು ತಡೆದು ಪರಿಣಾಮಕಾರಿಯಾಗಿ ಎದುರಿಸಿ ನಿಲ್ಲುವುದು. ಈ ಶಕ್ತಿಗಳು ಆಧುನಿಕ ಭಾರತ ಜಾತ್ಯಾತೀತ - ಪ್ರಜಾಪ್ರಭುತ್ವ ಅಡಿಗಲ್ಲನ್ನು ಬುಡಮೇಲು ಮಾಡುವ ಪ್ರಯತ್ನವನ್ನಷ್ಟೇ ಅಲ್ಲ, ನಾವು ಯಾವ ಶ್ರಮಜೀವಿ ವರ್ಗಗಳ ಬಲದ ಮೇಲೆ ವರ್ಗಶಕ್ತಿಗಳ ಬಲಾಬಲವನ್ನು ಬದಲಿಸ ಬಯಸುತ್ತೇವೋ ಆ ವರ್ಗಗಳ ಐಕ್ಯತೆಯನ್ನೇ ಮುರಿಯಲು ಪ್ರಯತ್ನ ನಡೆಸಿದ್ದಾರೆ. ಅದೇ ರೀತಿ ರಾಷ್ಟ್ರ-ವಿರೋಧಿ ಜನ-ವಿರೋಧಿ ಆರ್ಥಿಕ ನೀತಿಗಳನ್ನು ತೀವ್ರಗೊಳಿಸಿ, ದಶಕಗಳ ಹೋರಾಟಗಳಿಂದ ಗಳಿಸಿದವುಗಳನ್ನು ರಕ್ಷಿಸಲು ಹೋರಾಟ ನಡೆಸದೆಯೂ ಎಡ-ಪ್ರಜಾಪ್ರಭುತ್ವವಾದಿ ಶಕ್ತಿಗಳ ಮುನ್ನಡೆ ಸಾಧ್ಯವಾಗದು. ಈ ಎರಡೂ ಅಂಶಗಳನ್ನು ಮೇಳೈಸಿದ ಹೋರಾಟ ಮಾತ್ರವೇ ಆಳುವ ವರ್ಗಗಳ ಸತತ ಶೋಷಣೆ ಹಾಗೂ ಸಾಮ್ರಾಜ್ಯಶಾಹಿಗೆ ಶರಣಾಗತಿಯಿಂದ ದೇಶವನ್ನು ಮತ್ತು ಜನತೆಯನ್ನು ಮುಕ್ತಗೊಳಿಸುವ ಏಕೈಕ ದಾರಿ.

ಸ್ಪಷ್ಟ ಸಂದೇಶ

ನಮ್ಮ ಸಮಾಜದಲ್ಲಿ ಮತ್ತು ರಾಜಕೀಯದಲ್ಲಿ ನಡೆಯುತ್ತಿರುವ ಆಳವಾದ ಮಂಥನದಿಂದ ನಮ್ಮ ಜನರ ಜೀವನ ಮಟ್ಟ ಸುಧಾರಿಸಿ ನಾವೊಂದು ನ್ಯಾಯಪೂರ್ಣ ಸಮಾಜದತ್ತ ಸಾಗುವಂತಾಗಬೇಕಾದರೆ ಅದು ಎಡ ಶಕ್ತಿಗಳು ಬಹಳಷ್ಟು ಬಲಗೂಡಿಸಿಕೊಂಡು ಇತರ ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಒಂದುಗೂಡಿಸುವ ಸಾಧನವಾಗಿ ಮೂಡಿಬಂದಾಗ ಮಾತ್ರವೇ ಸಾಧ್ಯ. ಈ ದಿಕ್ಕಿನಲ್ಲಿ ಯಾವುದೇ ಕೊರತೆ, ನ್ಯೂನತೆ ಉಂಟಾದರೆ ಅದು ಕೋಮುವಾದಿ ಶಕ್ತಿಗಳಿಗೆ ನೆರವಾಗುತ್ತದೆ - ಭಾರತೀಯ ಜನಗಳ ಅಂಸತೃಪ್ತಿಯನ್ನು ತಮ್ಮ ವಿಚ್ಛಿದ್ರಕಾರಿ, ಪ್ರತಿಗಾಮಿ ರಾಜಕೀಯ ಕಾರ್ಯಕ್ರಮಕ್ಕೆ ಬಳಸಿಕೊಳ್ಳಲು ಅವರಿಗೆ ಅವಕಾಶ ಮಾಡಿಕೊಡುತ್ತದೆ. ಸಿಪಿಐ(ಎಂ) 16ನೇ ಮಹಾಧಿವೇಶನದ ಕಲಾಪಗಳಿಂದ ಈ ಸಂದೇಶ ಸ್ಪಷ್ಟವಾಗಿ ಮೂಡಿಬಂದಿದೆ.

ಈ ಗುರಿಸಾಧನೆಗೆ ಪಕ್ಷದ ಮಹಾಧಿವೇಶನ ಹಲವಾರು ಸಂಘಟನಾ ಮತ್ತು ರಾಜಕೀಯ ಕ್ರಮಗಳನ್ನು ಕೈಗೊಂಡು ಪಕ್ಷವನ್ನು ಬಲಗೊಳಿಸಿ, ಜನಗಳ ಹೋರಾಟಗಳನ್ನು ಮುನ್ನಡೆಸುವ ಬಗ್ಗೆ ನಿರ್ಧರಿಸಿತು. ರಾಷ್ಟ್ರೀಯ ಸಾಮೂಹಿಕ ಸಂಘಟನೆಗಳ ವೇದಿಕೆ ಈ ವರ್ಷ ಡಿಸೆಂಬರ್‌ನಲ್ಲಿ ಅಖಿಲ ಭಾರತ ಕಾರ್ಮಿಕ ವರ್ಗದ ಮುಷ್ಕರ ಹಾಗೂ ಒಂದು ಭಾರತ ಬಂದ್ ಸಾಧ್ಯತೆಯ ಬಗ್ಗೆ ನೀಡಿರುವ ಕರೆಯನ್ನು ಬೆಂಬಲಿಸಬೇಕು ಎಂದು ಪಕ್ಷದ ಮಹಾಧಿವೇಶನ ಎಲ್ಲಾ ದುಡಿಯುವ ಜನಗಳಿಗೆ ಕರೆ ನೀಡಿತು.

ಹೀಗೆ ಜನಗಳ ನಡುವೆ ನಿರಂತರ ಕೆಲಸಗಳ ಮೂಲಕ ವರ್ಗ ಬಲಾಬಲವನ್ನು ಬದಲಿಸುವ ಸಾಧನೆಗೆ ದುಡಿಯುವುದ ರೊಂದಿಗೆ, ಇದನ್ನು ಸಾಧ್ಯವಾಗಿಸಲು ಬಿಜೆಪಿ ಮತ್ತು ಕಾಂಗ್ರೆಸ್ ಎರಡಕ್ಕೂ ಒಂದು ಚುನಾವಣಾ ಪರ್ಯಾಯವಾಗಿ ಎಡ, ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ಶಕ್ತಿಗಳ ಐಕ್ಯತೆಯನ್ನು ಬೆಸೆಯುವ ಪ್ರಕ್ರಿಯೆಯು ನಡೆಯಬೇಕು ಎಂದು ಪಕ್ಷದ ಮಹಾಧಿವೇಶನ ನಿರ್ಧರಿಸಿತು. ಕೋಮುವಾದಿ ಶಕ್ತಿಗಳು ಪ್ರಭುತ್ವ ಶಕ್ತಿಯ ಮೇಲೆ ತಮ್ಮ ಹಿಡಿತವನ್ನು ಬಿಗಿಗೊಳಿಸಲು ಪ್ರಯತ್ನಿಸುತ್ತಿರುವ ಹಿನ್ನೆಲೆಯಲ್ಲಿ ಈ ಕೆಲಸಕ್ಕೆ ಹೆಚ್ಚಿನ ಮಹತ್ವ ಬಂದಿದೆ.

ಅವಿಭಾಜ್ಯ ಹೋರಾಟಗಳು

ಪಕ್ಷದ ಮಹಾಧಿವೇಶನ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟ ಹಾಗೂ ಆರ್ಥಿಕ ಧೋರಣೆಗಳ ವಿರುದ್ಧ ಹೋರಾಟ ಅವಿಭಾಜ್ಯ, ಅವು ಬೇರೆ-ಬೇರೆಯಲ್ಲ ಎಂದು ಒತ್ತಿಹೇಳಿತು. ಈ ಹೋರಾಟಗಳ ಯಶಸ್ಸು ಭಾರತದ ರಾಜಕಾರಣದ ಹಾಗೂ ಸಮಾಜದ ಭವಿಷ್ಯವನ್ನು ನಿರ್ಧರಿಸಲಿದೆ. 16ನೇ ಪಕ್ಷದ ಮಹಾಧಿವೇಶನ ಹೊಸದಾಗಿ ಆರಿಸಲ್ಪಟ್ಟ ಕೇಂದ್ರ ಸಮಿತಿಗೆ ಈ ಗುರಿಸಾಧನೆಗೆ ಸೂಕ್ತವಾದ ಕಾರ್ಯತಂತ್ರಗಳನ್ನು ರೂಪಿಸಬೇಕು ಎಂದು ಹೇಳಿದೆ.

ಈ ಗುರಿಸಾಧನೆಗಾಗಿ ದುಡಿಯುವುದ ರೊಂದಿಗೆ ಪಕ್ಷದ ಮಹಾಧಿವೇಶನ ನಮ್ಮ ಜಾತ್ಯಾತೀತ ಮಿತ್ರರಾಗುವವರಲ್ಲಿ ಕೆಲವರು ಅನುಸರಿಸುತ್ತಿರುವ ವಿನಾಶಕಾರಿ ಆರ್ಥಿಕ ನೀತಿಗಳ ವಿರುದ್ಧ ಸಾಮೂಹಿಕ ಹೋರಾಟ ಗಳನ್ನು ಬಲಗೊಳಿಸುವ ಅಗತ್ಯವನ್ನೂ ಒತ್ತಿ ಹೇಳಿತು. ಇಂತಹ ಒಂದು ವ್ಯತ್ಯಾಸ ಸಂಯುಕ್ತ ರಂಗ ಸರಕಾರದ ಅವಧಿಯಲ್ಲಿ ಗೋಜಲು ಗೊಂಡಿತು ಎಂದು ಮಹಾಧಿವೇಶನ ಆತ್ಮವಿಮರ್ಶೆ ಮಾಡಿಕೊಂಡಿತು. ಇದರಿಂದ ಸಾಮೂಹಿಕ ಆಂದೋಲನ ಗಳಲ್ಲಿ ಉಂಟಾದ ಮಂಪರು ಕೋಮುವಾದಿ ಶಕ್ತಿಗಳಿಗೆ ಲಾಭಕರ ವಾಯಿತು. ಅವು ಜನಗಳ ಅಂಸತೃಪ್ತಿಯ ರಾಜಕೀಯ ದುರಪಯೋಗ ಪಡೆಯುವಂತಾಯಿತು. ಹೀಗೆ ಭಾರತದ ಜಾತ್ಯಾತೀತ ಪ್ರಜಾಪ್ರಭುತ್ವ ನೆಲೆಗಟ್ಟಿಗೆ ಕೋಮುವಾದಿ ಹಲ್ಲೆಗಳಿಂದ ಇನ್ನಷ್ಟು ಕೆಡಕುಂಟಾಗದಂತೆ ತಡೆಯಲು ಜಾತ್ಯಾತೀತ ಮಿತ್ರರನ್ನು ಪಡೆಯುವ ಪ್ರಯತ್ನಗಳೊಂದಿಗೇ ಜನ-ವಿರೋಧಿ ಆರ್ಥಿಕ ಧೋರಣೆಗಳ ವಿರುದ್ಧ ಹೋರಾಟವನ್ನು ತೀವ್ರಗೊಳಿಸ ಬೇಕು.

ಶ್ರೀಮಂತ ಅನುಭವಗಳು

15ನೇ ಮಹಾಧಿವೇಶನದ ನಂತರದ ಮೂರೂವರೆ ವರ್ಷಗಳ ಪಕ್ಷದ ಚಟುವಟಿಕೆಗಳನ್ನು ವಿಮರ್ಶಿಸುವ ಭಾಗವಾಗಿ ಮಹಾಧಿವೇಶನ ಸಂಯುಕ್ತ ರಂಗ ಸರಕಾರವನ್ನು ಸೇರದಿರುವ ಅಥವಾ ಅದಕ್ಕೆ ನೇತೃತ್ವ ನೀಡಬಾರದೆಂಬ ಮೇ 1996ರ ಕೇಂದ್ರ ಸಮಿತಿಯ ನಿರ್ಣಯವನ್ನು ಮತದಾನದ ಮೂಲಕ ಅನುಮೋದಿಸಿತು. ಕರಡು ರಾಜಕೀಯ ನಿರ್ಣಯ ಮತ್ತು ಕರಡು ರಾಜಕೀಯ-ಸಂಘಟನಾ ವರದಿಯ ಮೇಲಿನ ಚರ್ಚೆಗಳು ಪಕ್ಷ ಈ ಅವಧಿಯಲ್ಲಿ ಪಡೆದ ಶ್ರೀಮಂತ ಅನುಭವಗಳನ್ನು ತೋರಿಸಿಕೊಟ್ಟಿತು. ಈ ಅನುಭವಗಳ ವಿನಿಮಯದ ಆಧಾರದಲ್ಲಿ ಸಾಮೂಹಿಕ ಮತ್ತು ವರ್ಗ ಹೋರಾಟಗಳನ್ನು ಬಲ ಪಡಿಸುವ ಮೂಲಕ ಮಾತ್ರವೇ ಸಿಪಿಐ(ಎಂ) ಮುನ್ನಡೆಯಲು ಆ ಮೂಲಕ ಎಡ ಐಕ್ಯತೆಯನ್ನು ಬಲಗೊಳಿಸಲು ಆ ಆಧಾರದ ಮೇಲೆ ಎಡ, ಪ್ರಜಾಸತ್ತಾತ್ಮಕ, ಜಾತ್ಯಾತೀತ ಐಕ್ಯತೆಯನ್ನು ಕಟ್ಟಲು ಸಾಧ್ಯ ಎಂಬ ತೀರ್ಮಾನಕ್ಕೆ ಮಹಾಧಿವೇಶನ ಬಂತು.

ಇನ್ನೊಂದು ನಿರ್ಣಯದ ಮೂಲಕ ಮಹಾಧಿವೇಶನ ಆರ್ಥಿಕ ನೀತಿಗಳ ವಿರುದ್ಧ ಹೋರಾಟಗಳೊಂದಿಗೆ ಸಾಮಾಜಿಕ ದಮನದ(ಮುಖ್ಯವಾಗಿ ಜಾತಿ ದಮನದ) ವಿರುದ್ಧ ಹೋರಾಟವನ್ನು ಬೆಸೆಯಲು ಅವಿಶ್ರಾಂತವಾಗಿ ದುಡಿಯಬೇಕು ಎಂದು ಇಡೀ ಪಕ್ಷಕ್ಕೆ ಕರೆ ನೀಡಿದೆ. ನಮ್ಮ ಸಮಾಜದ ಮೂಲಭೂತ ಪರಿವರ್ತನೆಯ ಹೋರಾಟದಲ್ಲಿ ಸಾಮಾಜಿಕವಾಗಿ ದಮನಕ್ಕೊಳಗಾದ ಜಾತಿಗಳ ವಿಶಾಲ ಜನಸಮೂಹದ ಬೆಂಬಲವನ್ನು ಅಣಿ ನೆರೆಸಲು ಇದೊಂದೇ ದಾರಿ. ಇದಿಲ್ಲದಿದ್ದರೆ ಕೆಲವು ಆಳುವ ವರ್ಗಗಳ ರಾಜಕೀಯ ಪಕ್ಷಗಳು ದಮನಕ್ಕೊಳಗಾದ ಜಾತಿಗಳ ಜನರ ನಡುವಿನ ಉತ್ಕ್ರಾಂತಿಯನ್ನು ಆಯಾಯ ಜಾತಿಯ ಪರಿಮಿತಿಗಳೊಳಗೆ ಸೀಮಿತಗೊಳಿಸಲು ಪ್ರಯತ್ನಿಸುತ್ತವೆ. ಇದರಿಂದ ಈಗಿರುವ ಶೋಷಣಾತ್ಮಕ ವ್ಯವಸ್ಥೆಯ ವಿರುದ್ಧ ಶ್ರಮಜೀವಿಗಳ ಐಕ್ಯತೆ ಒಡೆದು, ನಂತರ ಛಿದ್ರಗೊಳ್ಳುವಂತಾಗುತ್ತದೆ.

ಕೆಂಬಾವುಟ ಸಕ್ರಿಯವಾಗಿರಬೇಕು

ಪಕ್ಷದ ಮಹಾಧಿವೇಶನದಿಂದ ಪ್ರತಿಧ್ವನಿತಗೊಂಡಿರುವ ಸಂದೇಶವೆಂದರೆ ಕೆಂಬಾವುಟ ಕಾರ್ಖಾನೆ ಮಟ್ಟದಲ್ಲಿ ಎಷ್ಟು ಸಕ್ರಿಯವಾಗಿರುತ್ತೋ ಜಾತಿ ದಮನ ಮುಂದುವರೆಯುತ್ತಿರುವ ಗ್ರಾಮಗಳಲ್ಲಿ, ಕೃಷಿ ಕಾರ್ಮಿಕರು ಮತ್ತಿತರ ಜನವಿಭಾಗಗಳ ಹೋರಾಟಗಳಲ್ಲೂ ಅಷ್ಟೇ ಸಕ್ರಿಯವಾಗಿರ ಬೇಕು.

ತಕ್ಷಣದ ಸನ್ನಿವೇಶಕ್ಕೆ ಬಂದರೆ ಬಿಜೆಪಿ ನೇತೃತ್ವದ ಸರಕಾರ ದೇಶದ ಮತ್ತು ಜನಗಳ ಹಿತಾಸಕ್ತಿಗಳಿಗೆ ವಿರುದ್ಧವಾದ ಒಂದು ಅಜೆಂಡಾವನ್ನು ಅನುಸರಿಸುತ್ತಿರುವಾಗ ಪ್ರಸಕ್ತ ಬಿಜೆಪಿ ನೇತೃತ್ವದ ಸರಕಾರ ಕೊನೆಗೂ ಪತನಗೊಂಡಾಗ ಪಕ್ಷ 12ನೇ ಲೋಕಸಭೆಯೊಳಗೆ ಒಂದು ಪರ್ಯಾಯ ಜಾತ್ಯಾತೀತ ಸರಕಾರಕ್ಕೆ ವಿಷಯ-ಆಧಾರಿತ ಬೆಂಬಲ ನೀಡುತ್ತದೆ ಎಂಬ ಕೇಂದ್ರ ಸಮಿತಿಯ ನಿರ್ಣಯವನ್ನು ಮಹಾಧಿವೇಶನ ಅನುಮೋದಿಸಿತು. 12ನೇ ಲೋಕಸಭೆಯ ಲೆಕ್ಕಾಚಾರ ನೋಡಿದಾಗ ಇಂತಹ ಒಂದು ಸರಕಾರ ಕಾಂಗ್ರೆಸ್ ಪಕ್ಷದ ಸಕ್ರಿಯ ಭಾಗವಹಿಸುವಿಕೆಯಿಂದ ಮಾತ್ರ ಅಸ್ತಿತ್ವಕ್ಕೆ ಬರಲು ಸಾಧ್ಯ.

ತಕ್ಷಣದ ಸನ್ನಿವೇಶ-ಎರಡೇ ಆಯ್ಕೆ

ಈಗಿನ ಸನ್ನಿವೇಶದಲ್ಲಿ ದಿನಕಳೆದಂತೆ, ಒಳಗಿನ ಕಚ್ಚಾಟ, ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳ ನಡುವಿನ ಎಳೆದಾಟ ನೋಡಿದರೆ ಬಿಜೆಪಿ ನೇತೃತ್ವದ ಸರಕಾರ ಬೀಳುವ ಸಂಭವವೇ ಜಾಸ್ತಿಯಾಗುತ್ತಿದೆ. ಹೀಗಾದಾಗ ದೇಶದ ಮತ್ತು ಜನರ ಮುಂದಿರುವ ಆಯ್ಕೆ ಎರಡೇ - ಆರು ತಿಂಗಳಾಗುತ್ತಿರುವಂತೆ ಎರಡನೇ ಸಾರ್ವತ್ರಿಕ ಚುನಾವಣೆಯತ್ತ ದೇಶವನ್ನು ನೂಕುವುದು ಅಥವಾ 12 ನೇ ಲೋಕಸಭೆಯೊಳಗೇ ಒಂದು ಪರ್ಯಾಯ ಸರಕಾರದ ಸಾಧ್ಯತೆಯನ್ನು ಪರಿಶೀಲಿಸು ವುದು. ದೇಶವನ್ನು ಇನ್ನೊಂದು ಚುನಾವಣೆಯತ್ತ ತಳ್ಳುವುದು ದೇಶಕ್ಕಾಗಲೀ, ಜನತೆಗಾಗಲಿ ಹಿತಕಾರಿಯಲ್ಲವಾದ್ದರಿಂದ ಪಕ್ಷದ ಮಹಾಧಿವೇಶನ ಒಂದು ಪರ್ಯಾಯ ಜಾತ್ಯಾತೀತ ಸರಕಾರವನ್ನು ಹೊರಗಿನಿಂದ ಬೆಂಬಲಿಸಲು ಹಾಗೂ ವಿಷಯಾಧಾರಿತ ಬೆಂಬಲ ನೀಡಲು ನಿರ್ಧರಿಸಿತು.

ನಮ್ಮೆದುರಿರುವ ತಕ್ಷಣದ ಸನ್ನಿವೇಶವನ್ನು ಎದುರಿಸಲು ರೂಪಿಸಿದ ಈ ಕಾರ್ಯತಂತ್ರವನ್ನು ಬಂಡವಾಳಶಾಹಿ ಪತ್ರಿಕೆಗಳ ಒಂದು ವಿಭಾಗ ಸಿಪಿಐ(ಎಂ)ನ ತಿಪ್ಪರಲಾಗ ಎಂದು ಚಿತ್ರಿಸಿವೆ. ಇಂತಹ ಟೀಕಾಕಾರರು ತಕ್ಷಣದ ಸಂದರ್ಭವನ್ನು ಅರಿಯಲಾರದ ತಮ್ಮ ಅಸಮರ್ಥತೆಯನ್ನು ಈ ಮೂಲಕ ಬಯಲು ಮಾಡಿಕೊಳ್ಳುತ್ತಾ, ನೇರವಾಗಿ ಅಥವಾ ಪರೋಕ್ಷವಾಗಿ ಕೋಮುವಾದಿ ಶಕ್ತಿಗಳ ಮರ್ಜಿಗನು ಸಾರವಾಗಿ ವರ್ತಿಸುತ್ತಿದ್ದಾರೆ. ದೇಶವನ್ನು ಇನ್ನೊಂದು ಚುನಾವಣೆಯತ್ತ ತಳ್ಳುವುದು ಸರಿಯಲ್ಲ ಎಂದು ಎಲ್ಲರೂ ಒಪ್ಪಿಕೊಂಡರೂ ಮಾಧ್ಯಮದ ಈ ವಿಭಾಗಗಳು ಸಿಪಿಐ(ಎಂ) ಈ ಸರಕಾರ ವನ್ನು ಮುಂದುವರೆಯಲು ಬಿಡಬೇಕು ಎಂದು ಸೂಚಿಸುತ್ತಿರುವಂತಿದೆ.

ಇಂತಹ ನಾವು ಕೇಳಿರದ ಸಲಹೆಯನ್ನು ಪಕ್ಷದ ಮಹಾಧಿವೇಶನ ತಿರಸ್ಕರಿಸಿತು. 12ನೇ ಲೋಕಸಭೆಯ ವಾಸ್ತವತೆಯ ಸಂದರ್ಭದಲ್ಲಿ ಕಾಂಗ್ರೆಸ್ ಒಂದು ಪರ್ಯಾಯ ಸರಕಾರ ರಚಿಸಿದರೆ ಅದಕ್ಕೆ ವಿಷಯಾಧಾರಿತ ಬೆಂಬಲ ನೀಡಲು ಪಕ್ಷದ ಮಹಾಧಿವೇಶನ ನಿಸ್ಸಂದಿಗ್ಧವಾಗಿ ನಿರ್ಧರಿಸಿತು.

ಪುಟ 5 ಕ್ಕೆ

ವರ್ಗ ಬಲಾಬಲವನ್ನು ಬದಲಿಸುವುದೇ ನಿಜವಾದ ಉತ್ತರ

- ಎ.ಬಿ. ಬರ್ಧನ್

“ನಾವು ಗಹನವಾಗಿ ಚಿಂತಿಸಬೇಕಾದ, ಉತ್ತರ ಪಡೆಯಬೇಕಾದ ಮೂಲಭೂತ ಪ್ರಶ್ನೆಯಿದು - ಸ್ವಾತಂತ್ರ್ಯ ಪಡೆಯಲು ಕಮ್ಯುನಿಸ್ಟರು ಮಾಡಿದ ಮಹಾನ್ ತ್ಯಾಗಗಳ ನಂತರವೂ, ಅರ್ಧ ಶತಮಾನದ ಕಾಲ ನಮ್ಮೆಲ್ಲಾ ಕಠಿಣ ಪರಿಶ್ರಮ, ಹೋರಾಟಗಳು ಹಾಗೂ ಚಟುವಟಿಕೆಗಳ ನಂತರವೂ ನಾವಿಂದು ಭಾರತದಲ್ಲಿ ಪರ್ಯಾಯವನ್ನು ಒದಗಿಸುತ್ತಿಲ್ಲ ಏಕೆ? ಕಾಂಗ್ರೆಸ್ ಪಕ್ಷದ ಅವನತಿ ಹಾಗೂ ನಾಡಿನಾದ್ಯಂತ ಸಾಮಾಜಿಕ ಅಸಂತೃಪ್ತಿಯ ಲಾಭವನ್ನು ಬಿ.ಜೆ.ಪಿ. ಪಡೆಯುವುದು ಹೇಗೆ ಸಾಧ್ಯವಾಯಿತು? ಪ್ರಾದೇಶಿಕವಾದ, ಕೋಮುವಾದದ ಶಕ್ತಿಗಳು ಇಷ್ಟೊಂದು ಸಕ್ರಿಯವಾಗಿರುವುದು ಹೇಗೆ?” ಎಂದು ನಮ್ಮ 17ನೇ ಮಹಾಧಿವೇಶನದ ಉದ್ಘಾಟನಾ ಅಧಿವೇಶನದಲ್ಲಿ ಕಾಮ್ರೇಡ್ ಸುರ್ಜಿತ್ ನಮ್ಮ ಸಮಾನ ಆತಂಕಗಳನ್ನು ಅಭಿವ್ಯಕ್ತಗೊಳಿಸಿದರು.

ಅವರಿಗೆ ಮೊದಲು ಮಾತನಾಡುತ್ತಾ ನಾನು “ಕಳೆದ ದಶಕದಲ್ಲಿ ಜನಗಳ ಅಸಂತೃಪ್ತಿ ಹಾಗೂ ಕಾಂಗ್ರೆಸ್ಸಿನ ಉದಾರೀಕರಣ ನೀತಿಗಳು, ಮತ್ತು ಅದರ ಇತರ ಪಾಪಗಳಿಂದ ಆದ ಭ್ರಮನಿರಸನವನ್ನು ಬಿ.ಜೆ.ಪಿ. ಕೋಮುವಾದಿ ಹಾಗೂ ಅಗ್ಗದ ಜನಪ್ರಿಯತೆಯ ದಾರಿ ಹಿಡಿದು ಸಿನಿಕ ರೀತಿಯಲ್ಲಿ ದುರುಪಯೋಗ ಪಡಿಸಿ ಕೊಂಡರು. ನಾವು ಕಮ್ಯುನಿಸ್ಟ್ ಆಂದೋಲ ನದಲ್ಲಿ ಇರುವವರು ಹಾಗೂ ಎಡ ಆಂದೋಲನದಲ್ಲಿ ಇರುವವರು ಒಂದು ನೇರ ಪ್ರಶ್ನೆಯನ್ನು ಕೇಳಿಕೊಳ್ಳಬೇಕಾಗಿದೆ - ನಮಗೇಕೆ ಈ ನಿರ್ವಾತವನ್ನು ತುಂಬಲಾಗುತ್ತಿಲ್ಲ. - ವಿಶೇಷವಾಗಿ ಹಿಂದೀ ಭಾಷಿಕ ಪ್ರದೇಶದಲ್ಲಿ ಮತ್ತು ಪಶ್ಚಿಮ ಭಾರತದಲ್ಲಿ” ಎಂದು ಹೇಳಿದ್ದೆ.

ಇದು ಭಾರತದ ಎಲ್ಲಾ ಕಮ್ಯುನಿಸ್ಟರಿಗೂ, ಎಡ ಪಂಥೀಯರಿಗೂ ಸಮಾನ ಆತಂಕದ ವಿಷಯ ಎಂದು ನಾನಿಲ್ಲಿ ಪುನರುಚ್ಚರಿಸುತ್ತೇನೆ. ನಾವು ಜನಗಳ ಮನಸೆಳೆಯುವ ಸಮರದಲ್ಲಿ ತೊಡಗಬೇಕು. ಪಾಳೆಯಗಾರಿ, ಸಂಪ್ರದಾಯಶರಣ ಪ್ರಭಾವಗಳು, ವಿಚಾರಗಳು, ಆಚರಣೆಗಳು ಈಗಲೂ ಕೋಟ್ಯಾಂತರ ಜನಗಳ ಮನದಲ್ಲಿ ಮನೆ ಮಾಡಿವೆ. ಇದಕ್ಕೆ ಕೋಮುವಾದಿ ಮತ್ತು ಜಾತಿವಾದಿ ಶಕ್ತಿಗಳ ವಿರುದ್ಧ ನಿರ್ದಿಷ್ಟ ಸಂಗಾತಿಗಳು ಹಾಗೂ ಜನಸಮೂಹಗಳ ಅನುಭವಗಳ ಆಧಾರದಲ್ಲಿ ಒಂದು ಸೈದ್ಧಾಂತಿಕ, ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಹೋರಾಟ ಅಗತ್ಯ.

ಹೀಗೆ ಮಾಡಿದರೆ ಮಾತ್ರವೇ ಭಾರತ ಎದುರಿಸುತ್ತಿರುವ ಒಂದು ಅತ್ಯಂತ ಗಂಭೀರ ಸನ್ನಿವೇಶವನ್ನು ಎದುರಿಸಿ ಮುನ್ನಡೆಯುವ ಪ್ರಶ್ನೆ ಬರುತ್ತದೆ. ವರ್ಗ ಶಕ್ತಿಗಳ ಬಲಾಬಲವನ್ನು ಬದಲಿಸುವುದೇ ನಿಜವಾದ ಉತ್ತರ. ಇದಕ್ಕಾಗಿ ನಾವು ಎಡ ಐಕ್ಯತೆಯನ್ನು ಮತ್ತು ಎಡ ಹಾಗೂ ಅತ್ಯಂತ ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯತೆಯನ್ನು ಬಲಪಡಿಸಲು ನಾವು ಅತ್ಯಂತ ಹೆಚ್ಚಿನ ಆದ್ಯತೆ ನೀಡಬೇಕು. ಇದು ಸಾಧ್ಯವಾಗಬೇಕಾದರೆ ಆಳುವ ವರ್ಗಗಳ ಧೋರಣೆಗಳ ವಿರುದ್ಧ, ಈಗ ಬಲಪಂಥದ ಕಡೆ ಆಗಿರುವ ವಾಲಿಕೆಯ ವಿರುದ್ಧ ಸಾಮೂಹಿಕ ಹೋರಾಟಗಳನ್ನು, ಸಾಮೂಹಿಕ ಆಂದೋಲನಗಳನ್ನು ಹರಿಯಬಿಡಬೇಕು.

- ಸಿ.ಪಿ.ಐ.ನ ಪ್ರಧಾನ ಕಾರ್ಯದರ್ಶಿ ಎ.ಬಿ. ಬರ್ಧನ್‌ರವರ ಅಭಿನಂದನಾ ಭಾಷಣದಿಂದ (ಸಿ.ಪಿ.ಐ.(ಎಂ)ನ16ನೇ ಮಹಾಧಿವೇಶನದಲ್ಲಿ)

ಪುಟ 4 ರಿಂದ

ಕೋಮುವಾದಿ ಶಕ್ತಿಗಳು ಪ್ರಭುತ್ವ ಅಧಿಕಾರದ ಮೇಲೆ ತಮ್ಮ ಹಿಡಿತವನ್ನು ಭದ್ರಗೊಳಿಸದಂತೆ ತಡೆಯುವ ಅಗತ್ಯ ಬಂದಿರುವುದು ಅವರು ದೇಶದ ಕಾರ್ಯಕ್ರಮವನ್ನೇ ದಾರಿತಪ್ಪಿಸಲು ಅನುಸರಿಸುವ ವಿಧಾನದಿಂದಾಗಿ. ಭಾರತದ ವಿದೇಶಾಂಗ ಮತ್ತು ಪರಮಾಣು ನೀತಿಯನ್ನು ಇದ್ದಕ್ಕಿದ್ದಂತೆ ಮತ್ತು ಸಾರ್ವತ್ರಿಕವಾಗಿ ತಲೆಕೆಳಗಾಗಿಸಿರುವುದು, ಒಂದೆಡೆ ನಮ್ಮ ಆರ್ಥಿಕವನ್ನು ಹೆಚ್ಚೆಚ್ಚು ಒತ್ತೆಯಿಡುತ್ತಾ, ಇನ್ನೊಂದೆಡೆ ಬಡ ಮತ್ತು ದುಡಿಯುವ ಜನಗಳ ಮೇಲೆ ಗಗನಕ್ಕೇರುತ್ತಿರುವ ಬೆಲೆಯೇರಿಕೆ ಮತ್ತು ಹಣದುಬ್ಬರದ ಮೂಲಕ ಅಭೂತಪೂರ್ವ ಹೊರೆಗಳನ್ನು ಹಾಕುವ ಉದಾರೀಕರಣ ಹಾಗೂ ಖಾಸಗೀಕರಣದ ನೀತಿಗಳನ್ನು ಇನ್ನಷ್ಟು ರಭಸದಿಂದ ಅವರು ಅನುಸರಿಸುತ್ತಿರುವುದು, 20 ಕೋಟಿ ಅಲ್ಪಸಂಖ್ಯಾತರ ಮೇಲೆ ವ್ಯವಸ್ಥಿತ ಹಲ್ಲೆಗಳ ಮೂಲಕ ಅವರಲ್ಲಿ ಉದ್ದೇಶಪೂರ್ವಕವಾಗಿ ಅಭದ್ರತೆಯ ಭಾವನೆ ಉಂಟು ಮಾಡುವುದು, ಆ ಮೂಲಕ ಭಾರತದ ವೈವಿಧ್ಯಮಯ ಹಾಗೂ ಬಹುಮುಖೀ ಸಾಮಾಜಿಕ ಹಂದರದ ಸಾಮರಸ್ಯವನ್ನು ಕೆಡಿಸುವುದು, ರಾಜಕೀಯ ನೈತಿಕತೆಯ ಪತನವನ್ನು ಬಿಜೆಪಿ ಸಮರ್ಥನೀಯಗೊಳಿಸುತ್ತಿರುವ ರೀತಿ ಆದೊಂದು ಸ್ವತಂತ್ರ ಭಾರತದ ಹಾಗೂ ನಮ್ಮ ಸ್ವಾತಂತ್ರ್ಯ ಆಂದೋಲನದ ಜಾತ್ಯಾತೀತ ಪ್ರಜಾಪ್ರಭುತ್ವ ನೆಲೆಯನ್ನೇ ಬುಡಮೇಲು ಮಾಡುವ ಒಂದು ಮತೀಯ 'ಹಿಂದೂರಾಷ್ಟ್ರ'ದ ಕೋಮುವಾದಿ ಯೋಜನೆಯನ್ನು ಅನುಸರಿಸುವ ಒಂದು ಭಿನ್ನ ರೀತಿಯ ಪಕ್ಷ ಎಂಬುದನ್ನು ತೋರಿಸಿಕೊಟ್ಟಿದೆ.

ಈ ಪಕ್ಷ ಪ್ರಭುತ್ವ ಅಧಿಕಾರದಲ್ಲಿ ತನ್ನ ಸ್ಥಾನವನ್ನು ನೀತಿಬಾಹಿರ ರೀತಿಯಲ್ಲಿ ಬಳಸಿ ಆಡಳಿತ ಯಂತ್ರದೊಳಗೆ ನುಸುಳಿ, ಸಂಶೋಧನಾ ಸಂಸ್ಥೆಗಳನ್ನು ಆಮೂಲಾಗ್ರವಾಗಿ ಬದಲಿಸುವ, ಸೃಜನಶೀಲತೆಯನ್ನು ಹತ್ತಿಕ್ಕುವ, ಚರಿತ್ರೆಯನ್ನು ತನ್ನ ರಾಜಕೀಯ ಹಿತಾಸಕ್ತಿ ಸಾಧನೆಗೆ ಬಳಸುವ ಪಕ್ಷ. ಇದು ಸತತವಾಗಿ ಭೂತಕಾಲಕ್ಕೆ ಆಶ್ರಯ ನೀಡಿರುವ ಪಕ್ಷ. ಇದರ ಕೈಯಲ್ಲಿ ವರ್ತಮಾನವಾಗಲೀ, ಭವಿಷ್ಯವಾಗಲೀ ಭದ್ರವಾಗಿರುವುದಿಲ್ಲ. ಆದ್ದರಿಂದ ದಶಕಗಳ ಭಾರತೀಯ ಜನತೆ ಹೋರಾಟಗಳ ಮೂಲಕ ಸಾಧಿಸಿದ್ದನ್ನು ರಕ್ಷಿಸಲು, ಜಾತ್ಯಾತೀತ ಪ್ರಜಾಪ್ರಭುತ್ವ ಸಂಸ್ಥೆಗಳನ್ನು, ಒಕ್ಕೂಟ ಸ್ವರೂಪವನ್ನು ಕಾಪಾಡಿಕೊಳ್ಳಲು ಹಾಗೂ ಸಾಮಾಜಿಕ ನ್ಯಾಯಕ್ಕೆ ಪ್ರೋತ್ಸಾಹ ನೀಡಬೇಕಾದರೆ ಕೋಮುವಾದಿ ಶಕ್ತಿಗಳು ಪ್ರಭುತ್ವ ಅಧಿಕಾರದ ಮೇಲೆ ತಮ್ಮ ಹತೋಟಿಯನ್ನು ಕ್ರೋಢೀಕರಿಸಲು ಬಿಡಲು ಸಾಧ್ಯವಿಲ್ಲ.

ಸರ್ವತೋಮುಖಿ ಹೋರಾಟ

ಈ ಕಾರಣಕ್ಕಾಗಿಯೇ 16ನೇ ಮಹಾಧಿವೇಶನ ದೃಢ ಮನಸ್ಸಿನಿಂದ ಸರ್ವತೋಮುಖಿ ಹೋರಾಟವನ್ನು ಬಲಪಡಿಸಲು ನಿರ್ಧರಿಸಿತು. ದೇಶವನ್ನು ಮತ್ತು ಜನಗಳನ್ನು ಕೋಮುವಾದದಿಂದ, ಉದಾರೀಕರಣದ ಆರ್ಥಿಕ ಧೋರಣೆಗಳಿಂದ ರಕ್ಷಿಸಲು ರಾಜಕೀಯ, ಸೈದ್ಧಾಂತಿಕ, ಸಾಂಸ್ಕೃತಿಕ ಹಾಗೂ ಸಂಘಟನಾತ್ಮಕ ಹೋರಾಟಗಳನ್ನು ಬಲಗೊಳಿಸಲು ಮಹಾಧಿವೇಶನ ನಿರ್ಧರಿಸಿತು. ಹೀಗೆ ತಕ್ಷಣದ ಸನ್ನಿವೇಶವನ್ನು ಎದುರಿಸಲು ಅನುಸರಿಸುವ ಕಾರ್ಯತಂತ್ರದಲ್ಲಿ ಎಡ, ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಶಕ್ತಿಗಳ ಐಕ್ಯತೆಯನ್ನು ಬೆಸೆಯುವ ಗುರಿ ಅಡಕವಾಗಿದ್ದು, ತನ್ಮೂಲಕ ಇದರಲ್ಲಿ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬಲಗೊಳಿಸುವ ಮೂಲಕ ವರ್ಗ ಬಲಾಬಲವನ್ನು ಬದಲಿಸುವ ಗುರಿಗೆ ಅಡಕವಾಗಿರಬೇಕು.

ಈ ಗುರಿಗಳನ್ನು ಈಡೇರಿಸುವ ಹೋರಾಟಗಳನ್ನು ಬಲಪಡಿಸುವಲ್ಲಿ ಪಕ್ಷದ ಮಹಾದಿವೇಶನ ಎಡ ಐಕ್ಯತೆಯನ್ನು ಬಲಪಡಿಸುವ, ಮುಖ್ಯವಾಗಿ ಸಿಪಿಐ(ಎಂ) ಮತ್ತು ಸಿಪಿಐ ನಡುವಿನ ಐಕ್ಯತೆಯನ್ನು ಬಲಪಡಿಸುವ ಮಹತ್ವವನ್ನು ಒತ್ತಿ ಹೇಳಿತು. ಇದೇ ಭಾವನೆಗಳನ್ನು ವ್ಯಕ್ತಪಡಿಸಿದ ಸಿಪಿಐನ ಪ್ರಧಾನ ಕಾರ್ಯದರ್ಶಿಯವರು ಭಾಗವಹಿಸಿದ್ದು ಈ ನಿರ್ಧಾರವನ್ನು ಇನ್ನಷ್ಟು ಗಟ್ಟಿಗೊಳಿಸಿತು.

ಮಹಾಧಿವೇಶನ ಕೊನೆಗೊಳ್ಳುತ್ತಿದ್ದಂತೆ ಇಡೀ ಕಲ್ಕತ್ತ ನಗರವೇ ಇದನ್ನೆಲ್ಲಾ ಒಪ್ಪಿಕೊಂಡು ಎದ್ದು ನಿಲ್ಲುವಂತೆ ಕಾಣುತ್ತಿತ್ತು. ಬ್ರಿಗೇಡ್ ಪರೇಡ್ ಗ್ರೌಂಡಿನ ಬೃಹತ್ ರ್‍ಯಾಲಿ ಬಹುಶಃ ಈ ಚಾರಿತ್ರಿಕ ಮೈದಾನದಲ್ಲಿ ನಡೆದ ಅತಿದೊಡ್ಡ ರ್‍ಯಾಲಿಗಳಲ್ಲಿ ಒಂದು. ಈ ಬೃಹತ್ ರ್‍ಯಾಲಿಯಲ್ಲಿ ಭಾಗವಹಿಸಿದವರ ಉತ್ಸಾಹ, ಸಮರಶೀಲತೆ ಒಂದು ಹೊಸ ನಿರ್ಧಾರವನ್ನು, ದೃಢತೆಯನ್ನು ತೋರ್ಪಡಿಸಿತು. ಈ ರ್‍ಯಾಲಿಯಲ್ಲಿ ಜ್ಯೋತಿಬಸುರವರು ಮಾತನಾಡುತ್ತಾ ಸಾರಾಂಶ ರೂಪದಲ್ಲಿ ಹೇಳಿದ ಮಾತಿನಲ್ಲಿ ಈ ಭಾವನೆ ಎದ್ದು ಕಾಣುತ್ತಿತ್ತು - "ಇಡೀದೇಶ ನಮ್ಮತ್ತ ಮತ್ತು ಎಡಪಕ್ಷಗಳತ್ತ ನೋಡುತ್ತಿದೆ. ಅದರ ನಿರೀಕ್ಷೆಗಳನ್ನು ಈಡೇರಿಸಲು ನಾವು ಸರ್ವಪ್ರಯತ್ನ ನಡೆಸುತ್ತೇವೆ" ಎಂದರು ಜ್ಯೋತಿಬಸು. ಹೌದು, ನಾವು ಇಡೀ ದೇಶದ ನಿರೀಕ್ಷೆಯನ್ನು ಈಡೇರಿಸಲು ಸರ್ವಪ್ರಯತ್ನ ನಡೆಸುತ್ತೇವೆ.

ಮೂರನೇ ಪರ್ಯಾಯ ಕೇವಲ ಘೋಷಣೆಯಾಗಬಾರದು

- ಸುರ್ಜಿತ್



ಒಂದು ದಶಕದಿಂದ, ಬಿಜೆಪಿ ಮೇಲೆದ್ದು ಬರಲಾರಂಭಿಸಿದಾಗ ಮತ್ತು ಕಾಂಗ್ರೆಸ್(ಐ)ದ ಅವನತಿ ಆರಂಭವಾದಂದಿನಿಂದ ಸಿಪಿಐ(ಎಂ) ಎಡ, ಪ್ರಜಾಸತ್ತಾತ್ಮಕ ಹಾಗೂ ಜಾತ್ಯಾತೀತ ಶಕ್ತಿಗಳಿರುವ 'ಮೂರನೇ ಪರ್ಯಾಯ'ದ ಘೋಷಣೆ ಕೊಡುತ್ತಿದೆ. ಈ ಪರ್ಯಾಯವನ್ನು ಬೆಸೆಯುವ ಪ್ರಯತ್ನಗಳನ್ನು ಮುಂಬರುವ ದಿನಗಳಲ್ಲಿ ತೀವ್ರಗೊಳಿಸಲಾಗುವುದು. ಹೀಗೆಂದು ಪಕ್ಷದ ಕೇಂದ್ರ ಸಮಿತಿ ಕಛೇರಿಯಲ್ಲಿ ಪತ್ರಿಕಾ ಸಮ್ಮೇಳನವೊಂದನ್ನು ಉದ್ದೇಶಿಸಿ ಮಾತನಾಡುತ್ತಾ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ. ಪಕ್ಷದ 16ನೇ ಮಹಾಧಿವೇಶನ ಮುಗಿದ ನಂತರ ಇದು ದೇಶದ ರಾಜಧಾನಿಯಲ್ಲಿ ಅವರ ಮೊದಲ ಪತ್ರಿಕಾ ಸಮ್ಮೇಳನವಾಗಿತ್ತು.

ಏಕ ಪಕ್ಷ ಪ್ರಾಬಲ್ಯದ ಘಟ್ಟ ಮುಗಿದಿದೆ. ಭಾರತ ಸಮ್ಮಿಶ್ರ ಸರಕಾರಗಳ ಯುಗವನ್ನು ಪ್ರವೇಶಿಸಿದೆ ಎಂದ ಸುರ್ಜಿತ್ ಒಂದೊಮ್ಮೆ ಏಕಪಕ್ಷ ಪರ್ಯಾಯದ ಮಾತನಾಡುತ್ತಿದ್ದ ಬಿಜೆಪಿಯೂ ಮಿತ್ರರನ್ನು ಹುಡುಕಿಕೊಂಡು ಈಗ 18 ಪಕ್ಷಗಳ ಸಮ್ಮಿಶ್ರ ಸರಕಾರವೊಂದನ್ನು ನಡೆಸುತ್ತಿದೆ, ಆದರೆ ತನ್ನ ಮಿತ್ರಪಕ್ಷಗಳ ಮೇಲೆ ಪ್ರಾಬಲ್ಯ ನಡೆಸಿ ತನ್ನದೇ ಅಜೆಂಡಾವನ್ನು ಅನುಸರಿಸುತ್ತಿದೆ. ಇದು ದೇಶದ ಹಿತಾಸಕ್ತಿಗಳಿಗೆ ಹಾನಿಕಾರಕ ಎಂದರು. ಇನ್ನೊಂದೆಡೆ ಕಾಂಗ್ರೆಸ್(ಐ) ಕೂಡಾ ತನ್ನ ಸಾಮೂಹಿಕ ನೆಲೆ ದೊಡ್ಡ ಪ್ರಮಾಣದಲ್ಲಿ ಕಳಚಿಹೋದರೂ ಯಾವುದೇ ಪಾಠ ಕಲಿತಿಲ್ಲವಾದ್ದರಿಂದ ಬಿಜೆಪಿಗೆ ಪರ್ಯಾಯವಾಗಲು ಸಾಧ್ಯವಿಲ್ಲ. ಆದ್ದರಿಂದಲೇ ಮೂರನೇ ಪರ್ಯಾಯ ಕಟ್ಟುವ ಕೆಲಸ ಈಗಲೂ ಕಾರ್ಯಕ್ರಮ ದಲ್ಲಿ ಉಳಿದಿದೆ ಎಂದು ಸುರ್ಜಿತ್ ಒತ್ತಿ ಹೇಳಿದರು.

ಮೇ 1996 ರಲ್ಲಿ ಒಂದು ಕಾಂಗ್ರೆಸ್ಸೇತರ, ಬಿಜೆಪಿಯೇತರ ಸರಕಾರ ಬರುವುದೆಂದು ಯಾರೂ ಊಹಿಸಿರಲಿಲ್ಲ. ಆದರೆ ಎಡ ಶಕ್ತಿಗಳು ಎಡ, ಪ್ರಜಾಸತ್ತಾತ್ಮಕ, ಜಾತ್ಯಾತೀತ ಶಕ್ತಿಗಳನ್ನು ಒಟ್ಟಿಗೆ ತಂದು ಸಂಯುಕ್ತ ರಂಗ ರಚಿಸುವಲ್ಲಿ ಯಶಸ್ವಿಯಾದವು. ಆದರೆ ಸಂಯುಕ್ತ ರಂಗ ಉದಾರೀಕರಣದ ಧೋರಣೆಗಳನ್ನು ಕೈಬಿಡಲಿಲ್ಲ. ಸಾರ್ವಜನಿಕ ವಿತರಣಾ ವ್ಯವಸ್ಥೆಯ ಜಾರಿಯಂತಹ ಕೆಲವು ಜನ-ಪರ ಕ್ರಮ ಗಳನ್ನು ಕೈಗೊಳ್ಳು ವಲ್ಲಿ ಅದು ವಿಫಲ ಗೊಂಡಿತು. ಆದರೂ ಅದರ ಕೆಲವು ಸಾಧನೆಗಳಿವೆ - ಮುಖ್ಯವಾಗಿ ವಿದೇಶಾಂಗ ಧೋರಣೆಯಲ್ಲಿ, ಕೇಂದ್ರ - ರಾಜ್ಯ ಸಂಬಂಧಗಳ ಪುನರ್ರಚನೆ ಇತ್ಯಾದಿಗಳಲ್ಲಿ ಎಂದು ಸುರ್ಜಿತ್ ನೆನಪಿಸಿದರು.

"ಈ ಅನುಭವದಿಂದ ನಾವು ಪಾಠಗಳನ್ನು ಕಲಿಯಬೇಕು" ಎಂದ ಅವರು ಜಾತ್ಯಾತೀತ ಪಕ್ಷಗಳು ಮತ್ತು ಪ್ರಾದೇಶಿಕ ಪಕ್ಷಗಳನ್ನು ಸೆಳೆದು ಮೂರನೇ ಪರ್ಯಾಯವನ್ನು ಮತ್ತೆ ಬೆಸೆಯಲು ಸರ್ವಪ್ರಯತ್ನ ನಡೆಸಲಾಗುವುದು ಎಂದರು. ಪ್ರಾದೇಶಿಕ ಪಕ್ಷಗಳ ದೃಷ್ಟಿಕೋನ ಮೂಲಭೂತವಾಗಿ ಬಿಜೆಪಿಯ ಬಲಿಷ್ಠ ಕೇಂದ್ರಮುಖಿ ಸರ್ವಾಧಿಕಾರಿ ನಿಲುವಿಗೆ ತದ್ವಿರುದ್ಧವಾದದ್ದು. ಆದ್ದರಿಂದ ಅವರನ್ನು ಮೂರನೇ ಪರ್ಯಾಯದತ್ತ ಅಣಿನೆರೆಸುವುದು ಅಗತ್ಯ. "ಮುಂಬರುವ ದಿನಗಳಲ್ಲಿ ಇದು ಎಲ್ಲರನ್ನೂ ಒಟ್ಟುಗೂಡಿಸುವ ಘೋಷಣೆಯಾಗಲಿದೆ" ಎಂದರು ಸುರ್ಜಿತ್. ಇದು ಕೇವಲ ಘೋಷಣೆಯಾಗಬಾರದು, ಈ ಪ್ರಯತ್ನದಲ್ಲಿ ಜನಗಳನ್ನು ಅಣಿನೆರೆಸಲಿಕ್ಕಾಗಿ ಅವರ ಬಳಿಗೆ ಹೋಗುವುದು ಅಗತ್ಯ ಎನ್ನುತ್ತಾ ಅವರು "1996 ರಲ್ಲಿ ಯಾವುದೇ ವೇದಿಕೆಯಿಲ್ಲದೆ ಇದನ್ನು ಸಾಧಿಸಲು ಸಾಧ್ಯವಾಗಿದ್ದರೆ, ಈಗ ಇನ್ನೂ ಹೆಚ್ಚಿನದನ್ನು ನಾವು ಮಾಡಬೇಕು" ಎಂದರು.

ಪ್ರಶ್ನೆಗಳಿಗೆ ಉತ್ತರಿಸುತ್ತಾ ಸುರ್ಜಿತ್ ಪಿ.ಕೆ.ಮಹಂತಾ, ಎಂ.ಕರುಣಾನಿಧಿ, ಮುಲಾಯಂ ಸಿಂಗ್ ಯಾದವ್, ದೇವೇಗೌಡರು ಇತ್ಯಾದಿ ವಿಭಿನ್ನ ಪಕ್ಷಗಳ ಮುಖಂಡರೊಂದಿಗೆ ಮಾತುಕತೆಗಳು ನಡೆಯುತ್ತಿವೆ ಎಂದರು, ಆದರೆ ಮೂಡಿ ಬರುತ್ತಿರುವ ಮೂರನೇ ಪರ್ಯಾಯದ ನಿಖರವಾದ ರೂಪುರೇಶೆಗಳ ವಿವರಕ್ಕೆ ಹೋಗಲು ನಿರಾಕರಿಸಿದರು.

ಹೊಸ ಪೊಲಿಟ್‌ಬ್ಯೂರೋ ರಚನೆಯಲ್ಲಿ ವಿಳಂಬವೇಕೆ?

ಈ ಬಗ್ಗೆ ಪತ್ರಿಕೆಗಳಲ್ಲಿನ ಊಹಾಪೋಹಗಳನ್ನು, ಆಂತರಿಕ ಭಿನ್ನಾಭಿಪ್ರಾಯಗಳಿಂದಾಗಿ ಪೊಲಿಟ್ ಬ್ಯೂರೋವನ್ನು ರಚಿಸಲಿಲ್ಲ ಎಂಬುದನ್ನು ಸುರ್ಜಿತ್ ಬಲವಾಗಿ ನಿರಾಕರಿಸಿದರು. ಭಿನ್ನಾಭಿಪ್ರಾಯಗಳೇ ಇಲ್ಲ, ಅನುಸರಿಸಬೇಕಾದ ಮಾರ್ಗದ ಬಗ್ಗೆ ಸಂಪೂರ್ಣ ಐಕ್ಯತೆಯಿದೆ. ಮಹಾಧಿವೇಶನದ ಚರ್ಚೆಗಳಲ್ಲಿ ಹಲವು ಪ್ರತಿನಿಧಿಗಳು ಕೇಂದ್ರೀಯ ಮುಖಂಡತ್ವದ ಕಾರ್ಯನಿರ್ವಹಣೆಯ ಬಗ್ಗೆ ಟೀಕೆ ಮಾಡಿದರು, ವಿಫಲತೆ, ನ್ಯೂನ್ಯತೆಗಳನ್ನು ಟೀಕಿಸಿದರು. ಈಗಿರುವ ಪೊಲಿಟ್ ಬ್ಯೂರೋ ಸದಸ್ಯರ ಮೇಲೆ ವಿಪರೀತ ಹೊರೆ ಬಿದ್ದಿದೆ. ಕೇಂದ್ರದಲ್ಲಿ ಹೆಚ್ಚಿನ ಸದಸ್ಯರು ಬೇಕಾಗಿದೆ ಎಂದು ಚರ್ಚೆಗಳಲ್ಲಿ ಅಭಿಪ್ರಾಯ ಪಡಲಾಯಿತು. ಹೊಸ ಪೊಲಿಟ್ ಬ್ಯೂರೋ ಸದಸ್ಯರು ಪಕ್ಷದ ಕೇಂದ್ರದಲ್ಲಿರಬೇಕು, ತಮ್ಮ ರಾಜ್ಯಗಳನ್ನು ಬಿಟ್ಟು ಪೊಲಿಟ್‌ಬ್ಯೂರೋ ಕೆಲಸಗಳನ್ನು ನಡೆಸಬೇಕು ಎಂದು ಅಭಿಪ್ರಾಯ ಪಡಲಾಯಿತು. ಆದ್ದರಿಂದ ಈ ತಿಳುವಳಿಕೆಯ ಆಧಾರದಲ್ಲಿ ಹೆಸರುಗಳನ್ನು ಕೊಡಬೇಕು ಎಂದು ರಾಜ್ಯಗಳಿಗೆ ಹೇಳಲಾಗಿದೆ. ಆದ್ದರಿಂದ ಡಿಸೆಂಬರ್‌ನಲ್ಲಿ ನಡೆಯಲಿರುವ ಕೇಂದ್ರ ಸಮಿತಿ ಸಭೆಯಲ್ಲಿ ಹೊಸ ಸದಸ್ಯರಿಗೆ ಜವಾಬ್ದಾರಿ ಕೊಡಲು ನಿರ್ಧರಿಸಲಾಯಿತು ಎಂದು ಸುರ್ಜಿತ್ ಸ್ಪಷ್ಟೀಕರಣ ನೀಡಿದರು.

ಕೇಂದ್ರ ಸಮಿತಿಯಲ್ಲಿ ಮಹಿಳೆಯರು

ಸಿಪಿಐ(ಎಂ) ತನ್ನ ಕೇಂದ್ರ ಸಮಿತಿಯಲ್ಲಿ ಮಹಿಳಾ ಸದಸ್ಯರ ಸಂಖ್ಯೆಯನ್ನು 'ಇಳಿಸಿ' ಅವರನ್ನು ನಿರ್ಲಕ್ಷಿಸಿದೆ ಎಂಬ ದುರುದ್ದೇಶಪೂರಿತ ಅಪಪ್ರಚಾರ ಪತ್ರಿಕೆಗಳಲ್ಲಿ ನಡೆದಿರುವುದರ ಬಗ್ಗೆ ಮುಂದಿಟ್ಟಿರುವ ತರ್ಕಗಳು "ಹಾಸ್ಯಾಸ್ಪದ ತರ್ಕಗಳು" ಎಂದು ಸುರ್ಜಿತ್ ಟೀಕಿಸಿದರು. ಕೇಂದ್ರ ಸಮಿತಿಯಲ್ಲಿ ಮಹಿಳೆಯರ ಸಂಖ್ಯೆಯನ್ನು ಇಳಿಸಲಾಗಿದೆ ಎಂಬುದು ನಿಜವಲ್ಲ. ಹಲವು ಹಿರಿಯ ಮುಖಂಡರು ಆರೋಗ್ಯದ ಕಾರಣದಿಂದ ನಿವೃತ್ತರಾದರು. ಅವರಲ್ಲಿ ಪಶ್ಚಿಮ ಬಂಗಾಳದ ಹಿರಿಯ ಮಹಿಳಾ ಮುಖಂಡರಾದ ಕನಕ್ ಮುಖರ್ಜಿಯವರೂ ಒಬ್ಬರು. ಅವರ ಸ್ಥಾನಕ್ಕೆ ತಕ್ಷಣವೇ ಇನ್ನೊಬ್ಬರನ್ನು ಮಹಾಧಿವೇಶನದಲ್ಲೇ ಪಡೆಯಲಾಗಲಿಲ್ಲ. ಆದ್ದರಿಂದ ಹೊಸ ಕೇಂದ್ರ ಸಮಿತಿಯು ಖಾಲಿ ಸ್ಥಾನಗಳನ್ನು ತುಂಬುವಾಗ ಪಶ್ಚಿಮ ಬಂಗಾಳದಿಂದ ಒಬ್ಬ ಮಹಿಳೆಯನ್ನು ತೆಗೆದುಕೊಳ್ಳಲಾಗುವುದು ಎಂದು ಸುರ್ಜಿತ್ ಮಹಾಧಿವೇಶನದಲ್ಲೇ ಪ್ರಕಟಿಸಿದರು. ಆದ್ದರಿಂದ ಮಹಿಳಾ ಸದಸ್ಯರ ಸಂಖ್ಯೆಯನ್ನು ಉದ್ದೇಶಪೂರ್ವಕವಾಗಿ ಇಳಿಸಲಾಯಿತು ಎಂಬುದು ನಿಜವಲ್ಲ ಎಂದು ಸುರ್ಜಿತ್ ಹೇಳಿದರು.

ಸಿಪಿಐ(ಎಂ)ನಲ್ಲಿ ಮಹಿಳೆಯರ ವಿರುದ್ಧ ಪಕ್ಷಪಾತ ಇಲ್ಲ ಎಂದು ಸುರ್ಜಿತ್ ಹೇಳಿದರು. ಉನ್ನತ ನಾಯಕತ್ವದ ಸ್ಥಾನಗಳಿಗೆ ಸದಸ್ಯರನ್ನು ಆರಿಸುವಾಗ ಪ್ರಧಾನ ಅಳತೆಗೋಲೆಂದರೆ ಇಡೀ ಪಕ್ಷಕ್ಕೆ ರಾಜಕೀಯ ನಾಯಕತ್ವ ನೀಡುವ ಅವರ ಸಾಮರ್ಥ್ಯ. "ಇಲ್ಲಿ ಮಹಿಳೆಯೇ, ಪುರುಷರೋ ಎಂಬುದು ಪ್ರಧಾನವಲ್ಲ" ಎಂದು ಮತ್ತೆ ಮತ್ತೆ ಒತ್ತಿ ಹೇಳಿದ ಅವರು ಅನುಭವ, ಮಾರ್ಕ್ಸ್‌ವಾದ- ಲೆನಿನ್‌ವಾದದ ತಿಳುವಳಿಕೆ ಇತ್ಯಾದಿಗಳನ್ನು ಆಧರಿಸಿದ ಮುಖಂಡರ ಗುಣಮಟ್ಟವೇ ಮುಖ್ಯ ಎಂದರು. ಕೇವಲ ಹೆಂಗಸು, ಗಂಡಸು ಎಂಬ ಆಧಾರದಲ್ಲಿ ಸ್ಥಾನಮಾನಗಳನ್ನು ಕೇಳುವುದು ಸರಿಯಾದದ್ದಲ್ಲ, ಕ್ಯೂಬಾ, ಚೀಣಾದಂತಹ ಸಮಾಜವಾದಿ ದೇಶಗಳಲ್ಲಿ ಮಹಿಳೆಯರ ಸ್ಥಾನಮಾನ ಇಲ್ಲಿಗಿಂತ ಬಹಳ ಮುಂದುವರೆದಿದ್ದರೂ, ಅಲ್ಲೂ ಕಮ್ಯುನಿಸ್ಟ್ ಪಕ್ಷಗಳ ಪೊಲಿಟ್‌ಬ್ಯೂರೋಗಳಲ್ಲಿ ಮಹಿಳೆಯರ ಸಂಖ್ಯೆ ಇಲ್ಲವೇ ಇಲ್ಲ, ಅಥವಾ ಬಹಳ ಕಮ್ಮಿ ಎಂದೂ ಸುರ್ಜಿತ್ ಹೇಳಿದರು.

ಸಿಪಿಐ(ಎಂ) ಮಹಿಳಾ ಮೀಸಲಾತಿ ಮಸೂದೆಗೆ ಬೆಂಬಲ ನೀಡುತ್ತಿದೆಯಲ್ಲಾ ಎಂಬ ಹಲವಾರು ಪ್ರಶ್ನೆಗಳಿಗೆ ಉತ್ತರಿಸುತ್ತಾ ಸುರ್ಜಿತ್ ಪಂಚಾಯತು ಮತ್ತು ಸಂಸತ್ತಿನಲ್ಲಿ ಮೀಸಲಾತಿಯನ್ನು ಪಕ್ಷದ ಉಚ್ಚ ಮುಖಂಡತ್ವದಲ್ಲಿ ಮಹಿಳೆಯ ಹೆಚ್ಚಿನ ಸಂಖ್ಯೆಯೊಂದಿಗೆ ಹೋಲಿಸುವುದು ಸರಿಯಲ್ಲ ಎಂದು ವಿವರಿಸಿದರು. ಪಕ್ಷದ ರಾಜಕೀಯ ಮುಖಂಡತ್ವ ಲಿಂಗದ ಆಧಾರದ ಮೇಲೆ ಇರಲು ಸಾಧ್ಯವಿಲ್ಲ ಎಂದ ಸುರ್ಜಿತ್ ನಾಯಕತ್ವದ ಸ್ಥಾನಗಳಿಗೆ 'ಮಹಿಳೆಯರನ್ನು ಬಿಡಿ, ಸೂಕ್ತ ಪುರುಷರನ್ನು ಪಡೆಯುವುದೂ ಕಷ್ಟದ ಕೆಲಸ' ಎಂದರು.

(ಐಎನ್‌ಎನ್)

ಅಕ್ಟೋಬರ್ 16 ರಂದು ಕಲ್ಕತ್ತೆಯಲ್ಲಿ ಕಂಡುಬಂದ ಹಲವಾರು ಮೆರವಣಿಗೆಗಳಲ್ಲಿ ಒಂದು



ಬ್ರಿಗೇಡ್ ಪರೇಡ್ ಗ್ರೌಂಡಿನ ಬೃಹತ್ ರ್‍ಯಾಲಿಯ ಒಂದು ದೃಶ್ಯ



ಕಾಮ್ರೇಡ್ ದಶರಥದೇಬ್‌ಗೆ ಭಾವಪೂರ್ಣ ಬೀಳ್ಕೊಡುಗೆ

ತ್ರಿಪುರಾದಲ್ಲಿ ಬುಡಕಟ್ಟು ಜನಗಳು ಮತ್ತು ಇತರ ಜನಗಳ ನಡುವಿನ ಜನಾಂಗ ಸಾಮರಸ್ಯದ ಶಿಲ್ಪಿ ದಶರಥ್‌ದೇಬ್ ರವರಿಗೆ ಅಕ್ಟೋಬರ್ 17 ರಂದು ಅಲ್ಲಿಯ ಜನತೆ ಅತ್ಯಂತ ಭಾವಪೂರ್ಣ ಅಂತಿಮ ವಿದಾಯ ನೀಡಿದರು. ಈ ರಾಜ್ಯದ ಇತಿಹಾಸದಲ್ಲಿ ಹಿಂದೆಂದೂ ಯಾರಿಗೂ ಇಂತಹ ಮನಮುಟ್ಟುವ ಬೀಳ್ಕೊಡುಗೆಯನ್ನು ಜನತೆ ನೀಡಿರಲಿಲ್ಲ ಎಂದು ಹೇಳಲಾಗುತ್ತಿದೆ. ದಶರಥ್ ದೇಬ್‌ರವರ ಹಿರಿಯರ ಮನೆಯಿರುವ ಅಂಪುರಾ ಗ್ರಾಮ ತ್ರಿಪುರಾದಲ್ಲಿ ಕಮ್ಯುನಿಸ್ಟ್ ಆಂದೋಲನದ ಕೋಟೆಯೆಂದೂ ಪ್ರಸಿದ್ಧವಾಗಿದೆ. ಇಲ್ಲಿಯೇ ಅವರ ಪ್ರಾರ್ಥಿವ ಶರೀರ ಪೂರ್ಣ ಸರ್ಕಾರಿ ಮರ್ಯಾದೆಗಳೊಂದಿಗೆ ಅಗ್ನಿ ಜ್ವಾಲೆಗಳ ಮಧ್ಯೆ ಮಾಯವಾಯಿತು. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್, ಪೊಲಿಟ್‌ಬ್ಯೂರೋ ಸದಸ್ಯ ಬಿನೋಯ್ ಚೌಧರಿ, ಕೇಂದ್ರ ಸಮಿತಿ ಸದಸ್ಯ ಬಿಮಾನ್ ಬೋಸ್ ಮತ್ತು ಅನಿಲ್ ಬಿಸ್ವಾಸ್, ಅಸ್ಸಾಂ ರಾಜ್ಯ ಕಾರ್ಯದರ್ಶಿ ಹೆಮನ್ ದಾಸ್ ತ್ರಿಪುರಾದಲ್ಲಿ ಕಮ್ಯುನಿಸ್ಟ್ ಆಂದೋಲನದ ಈ ಪ್ರವರ್ತಕನಿಗೆ ಅಂತಿಮ ನಮನ ಸಲ್ಲಿಸಿದರು.

ಇದಕ್ಕೆ ಮೊದಲು ರಾಜಧಾನಿ ಅಗರ್ತಲಾದಿಂದ ಬರುವ 96 ಕಿ.ಮಿ ದಾರಿಯಲ್ಲಿ ಎಲ್ಲೆಲ್ಲೂ ಇಕ್ಕೆಲಗಳಲ್ಲೂ ಜನ ತಮ್ಮ ಪ್ರಿಯ ನೇತಾರನ ಅಂತಿಮ ದರ್ಶನಕ್ಕೆ ಕಾದಿದ್ದರು. ಕೆಲವೆಡೆ ಪಾರ್ಥಿವ ಶರೀರ ಹೊತ್ತ ವಾಹನವನ್ನು ಸ್ವಲ್ಪ ಸಮಯ ನಿಲ್ಲಿಸಿ ಜನ ತಮ್ಮ ಪ್ರೀತಿಯ ಸುರಿಮಳೆಗೈಯಲು ಅವಕಾಶ ನೀಡಬೇಕಾಯಿತು. ಅಗರ್ತಲಾದಿಂದ ಹೊರಡುವಾಗ 54 ವಾಹನಗಳಿದ್ದ ಈ ಅಂತಿಮ ಮೆರವಣಿಗೆಯಲ್ಲಿ ಖೊವೈ ಪಟ್ಟಣ ಸೇರುವ ವೇಳೆಗೆ ನೂರಕ್ಕೂ ಹೆಚ್ಚು ವಾಹನಗಳಿದ್ದವು. ಈ ವೇಳೆಗೆ ಅಲ್ಲಿಯ ವಾತಾವರಣ ಘೋಷಣೆ ಗಳಿಂದ, ಕ್ರಾಂತಿಕಾರಿ ಹಾಡುಗಳಿಂದ ತುಂಬಿಹೋಗಿತ್ತು. ಅಲ್ಲಿಂದ ಮೆರವಣಿಗೆ ಕಾಮ್ರೇಡ್ ದಶರಥ್‌ದೇಬ್‌ರ ಹಿರಿಯರ ಊರು ತಲುಪಿದಾಗ ಸ್ಥಳೀಯ ಮಹಿಳೆಯರ ರೋದನ ಕೇಳಿಬರುತ್ತಿತ್ತು. ಸಂಜೆ 4.30 ರ ವೇಳೆಗೆ ತ್ರಿಪುರಾ ಸ್ಟೇಟ್ ರೈಫಲ್ಸ್‌ನ ಗನ್ ಸೆಲ್ಯೂಟ್‌ಗಳ ಸದ್ದಿನ ನಡುವೆ ಕಾಮ್ರೇಡ್ ದಶರಥ್‌ದೇಬ್‌ರ ಶರೀರ ಬೆಂಕಿಯ ಜ್ವಾಲೆಗಳ ನಡುವೆ ಲೀನವಾಯಿತು. ತ್ರಿಪುರಾದಲ್ಲಿ ಒಂದು ಯುಗ ಅಂತ್ಯಗೊಂಡಿತು.

(ಐಎನ್‌ಎನ್)

ಉಗ್ರಗಾಮಿಗಳ ಗುಂಡಿಗೆ ಇನ್ನೊಬ್ಬ ತ್ರಿಪುರಾ ಮುಖಂಡರ ಬಲಿ

ತ್ರಿಪುರಾದ ವಿರೋಧ ಪಕ್ಷಗಳು ಸಿಪಿಐ(ಎಂ) ಕುಮ್ಮಕ್ಕಿನಿಂದ ರಾಜ್ಯದಲ್ಲಿ ಉಗ್ರಗಾಮಿ ಚಟುವಟಿಕೆಗಳು ನಡೆಯುತ್ತಿವೆಯಾದ್ದರಿಂದ 356ನೇ ಕಲಮನ್ನು ಬಳಸಿ ಎಡರಂಗ ಸರಕಾರವನ್ನು ವಜಾ ಮಾಡಬೇಕು ಎಂದು ಬೊಬ್ಬಿಡುತ್ತಿರುವಾಗಲೇ ಸಿಪಿಐ(ಎಂ)ನ ಇನ್ನೊಬ್ಬ ಮುಖಂಡರು ಉಗ್ರಗಾಮಿಗಳ ಗುಂಡಿಗೆ ಬಲಿಯಾಗಿದ್ದಾರೆ. 67 ವರ್ಷ ವಯಸ್ಸಿನ ಜನಪ್ರಿಯ ಮುಖಂಡ ಮಾಜಿ ಶಾಸಕ ಆನಂದ ಮೋಹನ್ ರೋಜಾರವರನ್ನು ಅಕ್ಟೋಬರ್ 19 ರ ರಾತ್ರಿ ಉಗ್ರಗಾಮಿಗಳು ಮನೆಗೆ ನುಗ್ಗಿ ಗುಂಡಿಟ್ಟು ಕೊಂದರು. ಧಲ್ಯಾ ಜಿಲ್ಲೆಯ ಗಂಡಚೆರ್ರಾ ಸಬ್‌ಡಿವಿಜನ್ ಎಡ-ವಿರೋಧಿ ಶಕ್ತಿಗಳ ಹತೋಟಿಗೆ ಬರದಂತೆ ತಡೆಯುವ ದೀರ್ಘ ಹಾಗೂ ಧೀರ ಹೋರಾಟ ನಡೆಸಿದ ಈ ಮುಖಂಡನನ್ನು ಕೊನೆಗೂ ಬಲಿ ತೆಗೆದುಕೊಂಡರು.

ಇಂತಹ ಸನ್ನಿವೇಶದಲ್ಲಿ ಕಾಂಗ್ರೆಸ್(ಐ) ವಕ್ತಾರ ಅಜಿತ್ ಜೋಗಿಯವರು ಇಡೀ ರಾಜ್ಯವನ್ನು ಗಲಭೆ ಪೀಡಿತ ಪ್ರದೇಶವೆಂದು ಸಾರಬೇಕು ಎಂದು ಒತ್ತಾಯಿಸಿರುವುದನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಬಲವಾಗಿ ಟೀಕಿಸಿದ್ದಾರೆ. ಕೇವಲ ಮುಂಬರುವ ಪಂಚಾಯತ್ ಚುನಾವಣೆಗಳಲ್ಲಿ ಕೆಲವು ಸ್ಥಾನಗಳನ್ನು ಪಡೆಯುವ ಸಂಕುಚಿತ ಸ್ವಾರ್ಥಕ್ಕಾಗಿ ಅವರು ಹೀಗೆ ಹೇಳಿದ್ದಾರೆ ಎಂಬುದು ಅವರ ಮಾತಿನಿಂದಲೇ ಸ್ಪಷ್ಟವಾಗಿದೆ ಎಂದು ಸುರ್ಜಿತ್ ಹೇಳಿದ್ದಾರೆ. ಉಗ್ರಗಾಮಿಗಳ ಹಿಂಸಾಚಾರಗಳಿಗೆ ಸತತವಾಗಿ ಗುರಿಯಾಗಿರುವವರು ಸಿಪಿಐ(ಎಂ) ಮುಖಂಡರು. ಉಗ್ರಗಾಮಿಗಳು ರಾಷ್ಟ್ರೀಯ ಐಕ್ಯತೆಗೆ ಹಾಗೂ ಜನಾಂಗ ಸಾಮರಸ್ಯಕ್ಕೆ ಒಡ್ಡಿರುವ ಅಪಾಯದ ವಿರುದ್ಧ ಹೋರಾಡುವ ಬದಲು ದುರದೃಷ್ಟವಶಾತ್ ಕಾಂಗ್ರೆಸ್ ಕೆಲವು ಪಂಚಾಯತ್ ಸ್ಥಾನಗಳ ಆಸೆಯಿಂದ ರಾಜಕೀಯ ಆಟ ಆಡುತ್ತಿದೆ ಎಂದು ಖೇದ ವ್ಯಕ್ತಪಡಿಸಿದ ಸುರ್ಜಿತ್ ಪರಿಸ್ಥಿತಿಯ ಗಂಭೀರತೆಯನ್ನು ನಿರ್ಲಕ್ಷಿಸಿ ಕಾಂಗ್ರೆಸ್ ಮತ್ತು ಬಿಜೆಪಿ ಕೈಮಿಲಾಯಿಸುತ್ತಿದೆ ಎಂದು ಆಪಾದಿಸಿದರು. ಏಕೆಂದರೆ ಕೇಂದ್ರದಲ್ಲಿ ಬಿಜೆಪಿ ಸರಕಾರ ಬಂದ ಮೇಲೆ ಸೇನೆ ಮತ್ತು ಅರೆಸೇನಾ ತುಕಡಿಗಳ ಸಂಖ್ಯೆ 18 ರಿಂದ 16 ಕ್ಕಿಳಿಯಿತು. ಹಿಂದೆ 3 ಸೇನಾ ತುಕಡಿಗಳು, 11 ಸಿಆರ್‌ಪಿಎಫ್ ತುಕಡಿಗಳು ಹಾಗೂ ನಾಲ್ಕು ಅಸ್ಸಾಂ ರೈಫಲ್ಸ್ ತುಕಡಿಗಳಿದ್ದವು. ಈಗ ಸೇನಾ ತುಕಡಿಗಳ ಸಂಖ್ಯೆಯನ್ನು ಒಂದಕ್ಕೆ ಇಳಿಸಲಾಗಿದೆ. ಎರಡೂವರೆ ಸಿಆರ್‌ಪಿಎಫ್ ತುಕಡಿಗಳನ್ನು ಉಗ್ರಗಾಮಿ-ವಿರೋಧಿ ಕಾರ್ಯಾಚರಣೆ ಗಳಿಗೆ ಬಳಸುತ್ತಿಲ್ಲ. ಆದರೂ ಕಾಂಗ್ರೆಸ್ ವಕ್ತಾರರು ಈ ಬಗ್ಗೆ ಅತಿರಂಜಿತ ಅಂಕೆ-ಸಂಖ್ಯೆಗಳನ್ನು ನೀಡಿ ಬಿಜೆಪಿಯ ರಾಜಕೀಯ ದುರುದ್ದೇಶವನ್ನು ಪರೋಕ್ಷವಾಗಿ ಬೆಂಬಲಿಸುವ ಮಟ್ಟಕ್ಕೆ ಇಳಿದ್ದಾರೆ.

ನವದೆಹಲಿಯಲ್ಲಿ ಕಳೆದ ಶನಿವಾರ ಈರುಳ್ಳಿ ಮತ್ತು ಖಾದ್ಯತೈಲ ಬೆಲೆಯೇರಿಕೆಯ ವಿರುದ್ಧ ನಡೆದ ಮತಪ್ರದರ್ಶನಗಳಲ್ಲಿ ಹೊಸ ಮುಖ್ಯಮಂತ್ರಿ ಸುಷ್ಮಾ ಸ್ವರಾಜ್‌ರವರ ಪ್ರತಿಕೃತಿಯ ದಹನ ಮಾಡಲಾಯಿತು. ಹಣದುಬ್ಬರಕ್ಕೆ ಸರ್ಕಾರದ ನಿರ್ಲಕ್ಷ್ಯವೇ ಕಾರಣ ಎಂದು ಆರೋಪಿಸಲಾಯಿತು. ಬಿಜೆಪಿಯ ಇನ್ನೊಂದು 'ಕೊಡುಗೆ' ಉತ್ತರ ಪ್ರದೇಶದ ಆಗ್ರಾದಲ್ಲಿ ಈರುಳ್ಳಿ ಬೆಲೆ 100 ರೂ. ತಲುಪಿದೆಯಂತೆ. ಕೊಳೆತ ಈರುಳ್ಳಿಗೂ 60 ರೂ.!



ಅರಸಿನ ಮಕ್ಕಿ ಬೀಡಿ ಕಾರ್ಮಿಕರ ಸಮಾವೇಶ

ಬೆಳ್ತಂಗಡಿ ತಾಲೂಕು ಅರಸಿನಮಕ್ಕಿಯಲ್ಲಿ ಸಿಐಟಿಯ ನೇತೃತ್ವದ ತಾಲೂಕು ಬೀಡಿ ಕೆಲಸಗಾರರ ಸಂಘ ಅರಸಿನಮಕ್ಕಿ ವಲಯದ ಸರ್ವ ಸಮಾವೇಶ ಇತ್ತೀಚೆಗೆ ನಡೆಯಿತು.

ಕಾರ್ಮಿಕರು ಅರಸಿನಮಕ್ಕಿ ಸೇತುವೆ ಬಳಿ ಸೇರಿ ಅರಸಿನಮಕ್ಕಿ ಪೇಟೆಯಲ್ಲಿ ತಮ್ಮ ಬೇಡಿಕೆ ಹಾಗೂ ಒಗ್ಗಟ್ಟು ಅನಿವಾರ್ಯತೆ ಬಗ್ಗೆ ಘೋಷಣೆ ಕೂಗುತ್ತ ಮೆರವಣಿಗೆ ನಡೆಸಿದರು. ಇದಕ್ಕೆ ಮೊದಲು ಕಾಯರ್ತಡ್ಕ, ಕಳೆಂಜ ಶಿಬರಾಜೆ ಕೊಕ್ಕಡ ಮೊದಲಾದ ಕಡೆಯಿಂದ ಕಾರ್ಮಿಕರು ಕಾಲ್ನಡಿಗೆಯ ಮೆರವಣಿಗೆ ಮೂಲಕ ಅರಸಿನಮಕ್ಕಿಗೆ ಬಂದರು. ಸಾವಿರಾರು ಕಾರ್ಮಿಕರ ಕೆಂಬಾವುಟ ಮೆರವಣಿಗೆ ಅರಸಿನಮಕ್ಕಿ ಚರಿತ್ರೆಯಲ್ಲಿ ಪ್ರಥಮವಾಗಿತ್ತು. ಅಧ್ಯಕ್ಷತೆಯನ್ನು ತಾಲೂಕು ರೈತ ಸಂಘದ ಕಾರ್ಯದರ್ಶಿ ಹರಿದಾಸ ವಹಿಸಿದ್ದರು. ಜಿಲ್ಲಾ ಬೀಡಿ ಕಾರ್ಮಿಕ ಸಂಘದ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಜೊತೆ ಕಾರ್ಯದರ್ಶಿ ಸುಕುಮಾರ್, ಬಂಟ್ವಾಳ ಬೀಡಿ ಕೆಲಸಗಾ[...] ಸಂಘದ ಕಾರ್ಯದರ್ಶಿ ಸಂಜೀವ ಬಂಗೇರ, ತಾಲೂಕು ಬೀಡಿ ಕೆಲಸಗಾರರ ಸಂಘದ ಅಧ್ಯಕ್ಷ, ನ್ಯಾಯವಾದಿ ಬಿ.ಎಂ.ಭಟ್ ಮೊದಲಾದವರು ಕಾರ್ಮಿಕರ ಸಂಘಟನೆಯ ಅನಿವಾರ್ಯತೆ ಬಗ್ಗೆ ವಿವರಿಸಿದರು. ನಿಡ[...] ಪಂಚಾಯತ್‌ನ ಸದಸ್ಯರೂ, ಕಾರ್ಮಿಕ ಮುಖಂಡರೂ ಆದ ಚಂದ್ರ ಶೇಖರ ಗೌಡ [...] ಕಳೆಂದ, ಅರಸಿನಮಕ್ಕಿ ಕಾರ್ಮಿಕ ಮುಖಂಡ[...] ಸುಂದರ ಗೌಡ, ದೇವಕಿ, ಅವರು ಸ್ಥಳೀಯ ಪ್ರದೇಶಗಳಲ್ಲಿ ಬೀಡಿ ಯೂನಿಯನ್ ಕಟ್ಟಿ[...] ಕಾರ್ಮಿಕರಿಗೆ ಆದ ಪ್ರಯೋಜನಗಳ ಬಗ್ಗೆ ವಿವರ ನೀಡಿದರು. ವೇದಿಕೆಯಲ್ಲಿ ತಾಲೂಕು ಸಿಪಿಐ(ಎಂ) ಪಕ್ಷದ ಕಾರ್ಯದರ್ಶಿ ನ್ಯಾಯವಾದಿ ಶಿವಕುಮಾರ್, ಶಹಿದಾ ಬೇಗಂ ಲ್ಯಾಲ, ಸರೋಜಿನಿ, ಶೈಲಜಾ ಮೊದಲಾದವರು ಮಾತನಾಡಿದರು. ಬೂಡದಮಕ್ಕಿ ಕಿರು ನೀರಾವರಿ ಯೋಜನೆ ಕೆಲಸ ತ್ವರಿತವಾಗಿ ನಡೆಸಲು, ಅರಣ್ಯ ಇಲಾಖೆ ಬಡ ರೈತರನ್ನು ಒಕ್ಕಲೆಬ್ಬಿಸುವ ಕ್ರಮದ ವಿರುದ್ಧ, ಅಕ್ರಮ-ಸಕ್ರಮದಡಿ ಕೂಡಲೇ ಹಕ್ಕು ಪತ್ರ ನೀಡುವ ಬಗ್ಗೆ ಹಾಗೂ ಕಾರ್ಮಿಕರ ಇತರ ಬೇಡಿಕೆಗಳ ಈಡೇರಿಕೆ ಗಳಿಗಾಗಿ ಸರಕಾರವನ್ನು ಒತ್ತಾಯಿಸುವ ನಿರ್ಣಯ ಕೈಗೊಳ್ಳಲಾಯಿತು.

ಕರ್ನಾಟಕ ಪ್ರಾಂತ ರೈತ ಸಂಘದ ಹೋರಾಟ ಫಲ ಉಚಿತ ಮನೆ ನಿವೇಶನ ಹಕ್ಕು ಪತ್ರ

ದ.ಕನ್ನಡ: ಬೆಳ್ತಂಗಡಿ ತಾಲೂಕು ಲ್ಯಾಲ ಗ್ರಾಮದ ಕಕ್ಕೆನ ಕ್ರಾಂತಿ ನಗರ ಮತ್ತು ಆದರ್ಶ ನಗರದ ಬಡ ನಿರ್ಗತಿಕ ಜನರು ಸುಮಾರು 20 ವರ್ಷಗಳಿಂದ ವಾಸಿಸಿಕೊಂಡು ಬರುತ್ತಿರುವ ಮನೆಯಡಿ ಸ್ಥಳದ ಹಕ್ಕು ಪತ್ರ ನೀಡದಿರುವುದರ ವಿರುದ್ಧ ಕಳೆದ ನಾಲ್ಕು ವರ್ಷಗಳಿಂದ ಅವಿರತ ಹೋರಾಟ ನಡೆಸಿದ ಬೆಳ್ತಂಗಡಿ ತಾಲೂಕು ರೈತ ಸಂಘ ಜಯಗಳಿಸಿದೆ.

ಸುಮಾರು 93 ಮನೆಗಳಿಗೆ ಇದುವರೆಗೆ ಯಾವುದೇ ಯೋಜನೆಯಡಿ ಹಕ್ಕು ಪತ್ರ ನೀಡದೆ, ಇದೀಗ ತಲಾ 750 ರೂ. ಗಳಂತೆ ಸ್ಥಳ ಮೌಲ್ಯಕಟ್ಟಿ ಹಕ್ಕು ಪತ್ರ ಕೊಡುತ್ತೇವೆ ಎಂದು ತಿಳಿಸಿದ ರೆವಿನ್ಯೂ ಇಲಾಖೆ ವಿರುದ್ಧ ಪ್ರತಿಭಟಿಸಿದ ರೈತ ಸಂಘ ಕೊನೆಗೆ ಶಾಸಕರು, ಅಧಿಕಾರಿಗಳು ಹಾಗೂ ರೈತ ಸಂಘದ ಮುಖಂಡರ ಜೊತೆ ಸಮಾಲೋಚನೆ ನಡೆದು ಸದರಿ ಸ್ಥಳಗಳನ್ನು ತಾಲೂಕು ಪಂಚಾಯ್ತಿಗೆ ಹಸ್ತಾಂತರಿಸಿ ಬಡ ಜನರಿಗೆ ಉಚಿತ ಹಕ್ಕು ಪತ್ರ ನೀಡಲು ಕ್ರಮಕೈಗೊಳ್ಳಲು ಅಧಿಕಾರಿವರ್ಗ ಒಪ್ಪಿಕೊಂಡಿತಲ್ಲದೆ, ಅಕ್ಟೋಬರಲ್ಲಿ ಸದರಿ ಹಕ್ಕು ಪತ್ರ ಒದಗಿಸುವುದಾಗಿಯೂ ಅಧಿಕಾರಿಗಳು ಒಪ್ಪಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ತಾಲೂಕು ರೈತ ಸಂಘದ ಮುಖಂಡರಾದ ಸಿಪಿಐ(ಎಂ) ತಾಲೂಕು ಕಾರ್ಯದರ್ಶಿ ನ್ಯಾಯವಾದಿ ಶಿವಕುಮಾರ್, ನ್ಯಾಯವಾದಿ ಬಿ.ಎಂ.ಭಟ್, ರೈತ ಸಂಘದ ಕಾರ್ಯದರ್ಶಿ ಹರಿದಾಸ, ಅಧ್ಯಕ್ಷ ರುಕ್ಮಯ ಬಂಡಾರಿ, ಎಲ್. ಮಂಜುನಾಥ ಮೊದಲಾದವರು ಉಪಸ್ಥಿತರಿದ್ದು ಅಧಿಕಾರಿಗಳೊಡನೆ ಮಾತುಕತೆ ನಡೆಸಿದ್ದರು.

ಸಿಪಿಐ(ಎಂ) ಅಧ್ಯಯನ ಶಿಬಿರ

ವಿಜಾಪುರದಲ್ಲಿ ಸೆ. 17 - 18 ರಂದು ಎರಡು ದಿನಗಳ ಅಧ್ಯಯನ ಶಿಬಿರ ನಡೆಯಿತು. ಪ್ರಾಸ್ತಾವಿಕವಾಗಿ ಮಾತನಾಡಿದ ಭೀಮಸಿ ಕಲಾದಗಿಯವರು ಪಕ್ಷದ ಕಾರ್ಯಕರ್ತರಿಗೆ ಅಧ್ಯಯನ ಶಿಬಿರದ ಮಹತ್ವದ ಬಗ್ಗೆ ವಿವರಿಸಿದರು. ಸಿಪಿಐ(ಎಂ)ನ ರಾಜ್ಯ ಸಮಿತಿ ಸದಸ್ಯರಾದ ಎನ್.ಕೆ. ಉಪಾಧ್ಯಾಯರು ಮಾತನಾಡಿ ವಿಜಾಪುರದಲ್ಲಿ ಕಮ್ಯುನಿಸ್ಟ್ ಪಕ್ಷದ ಹುಟ್ಟು ಹಾಗೂ ಬೆಳವಣಿಗೆ ವಿಷಯವಾಗಿ ಮಾತನಾಡಿದರು. ಸಿಪಿಎಂ ರಾಜ್ಯ ಸಮಿತಿ ಸದಸ್ಯರಾದ ಯು. ಬಸವರಾಜ ಅವರು ಪಕ್ಷದ ಕಾರ್ಯಕ್ರಮ ಹಾಗೂ ದೇಶದ ಪ್ರಸ್ತುತ ರಾಜಕೀಯ ಪರಿಸ್ಥಿತಿ ಬಗ್ಗೆ ಮಾತನಾಡಿ ಹಣದುಬ್ಬರ ಹಾಗೂ ಬೆಲೆ ಏರಿಕೆಗೆ ಕಾರಣವಾಗಿರುವ ಬಿಜೆಪಿಯ ಆಡಳಿತದ ನೀತಿಯ ಬಗ್ಗೆ ವಿವರಿಸಿದರು.

ರಾಜ್ಯ ಸಮಿತಿ ಸದಸ್ಯರಾದ ಸಿ.ಆರ್.ಭಟ್ ಮಾತನಾಡಿ ಕೋಮುವಾದ, ಜಾತಿವಾದ ಹಾಗೂ ಬಿಜೆಪಿ ಈ ವಿಷಯವಾಗಿ ಮಾತನಾಡುತ್ತಾ ದೇಶದ ಸ್ವಾತಂತ್ರ್ಯಕ್ಕಾಗಿ ಎಂದೆಂದೂ ಹೋರಾಡದ ಆರ್.ಎಸ್.ಎಸ್., ಹಿಂದು ಮಹಾಸಭಾಗಳು ಬಿಜೆಪಿಯ ಮುಖವಾಡ ಧರಿಸಿ ನಾಥುರಾಂ ಗೋಡ್ಸೆಯಂಥ ಮತಾಂಧರನ್ನು ವೈಭವೀಕರಿಸುತ್ತಾ ಆಳವಾದ ಕೋಮು ವಿಷಯವನ್ನು ಹರಡುತ್ತಿರುವ ಬಗ್ಗೆ ಹೇಳುತ್ತಾ ದೇಶದ ಸಮಗ್ರತೆಗೆ ಗಂಡಾಂತರಕಾರಿಯಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಅಧ್ಯಕ್ಷತೆಯನ್ನು ಅಣ್ಣಾರಾಯ ಈಳಗೇರ ವಹಿಸಿದ್ದರು. ಜಿಲ್ಲಾ ಮುಖಂಡರಾದ ಸುರೇಖಾ ರಜಪೂತ, ವಿ.ಎಂ. ಸೊನ್ನದ, ಡಿ.ಎಂ.ಖಲಾಸಿ, ಸಿದ್ದಣ್ಣಾ ಐರೋಡಗಿ ಅವರಲ್ಲದೇ ಜಿಲ್ಲೆಯ 50 ಜನ ಕಾರ್ಯಕರ್ತರು ಶಿಬಿರದಲ್ಲಿ ಭಾಗವಹಿಸಿದ್ದರು.

ಕಾಳಸಂತೆಕೋರರ ಸರ್ಕಾರ!

ದಾವಣಗೆರೆ: ಸಿಪಿಐ(ಎಂ) ಜಿಲ್ಲಾ ಸಮಿತಿ ನೇತೃತ್ವದಲ್ಲಿ ನಗರ ಸಭೆ ಮುಂಭಾಗದಲ್ಲಿ ಬೆಲೆ ಏರಿಕೆ ವಿರುದ್ಧ ಧರಣಿ ಸತ್ಯಾಗ್ರಹ ನಡೆಯಿತು. ಕಳೆದ ಆರು ತಿಂಗಳಿನಿಂದ ಅಧಿಕಾರದಲ್ಲಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಸಂಪೂರ್ಣ ಬಡಜನರ ವಿರೋಧಿ ಯಾಗಿದ್ದು ಕೇವಲ ಶ್ರೀಮಂತರನ್ನು ಬೆಂಬಲಿಸುವ, ಕಳ್ಳದಸ್ತಾನುದಾರರ ಮತ್ತು ಕಾಳಸಂತೆಕೋರರ ಪರವಹಿಸುವ ಸರ್ಕಾರವಾಗಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದ ಸ್ವಾಮಿ ಕೇಂದ್ರ ಸರ್ಕಾರದ ನೀತಿಯನ್ನು ಖಂಡಿಸಿದರು.

ಧರಣಿಕಾರರನ್ನುದ್ದೇಶಿಸಿ ಬ್ಯಾಂಕ್ ನೌಕರರ ಎಂ. ಆರ್.ಹೀರೇ ಮಠ, ವಿಮಾ ನೌಕರರ ಸಂಘಟನೆಯ ಡಿ.ಯಾಕೂಬ್, ಕಿರ್ಲೋಸ್ಕರ ಕೆಲಸಗಾರರ ಸಂಘದ ಕಾರ್ಯದರ್ಶಿ ಸಿ.ಎಂ. ಜಯಾನಂದ, ಕೆ. ಎಲ್ ಭಟ್, ಮಹಾಂತೇಶ್, ಎ.ಎಸ್.ಮೂರ್ತಿ ಮಾತನಾಡಿ ಅಂಚೆ, ದೂರವಾಣಿ, ರೈಲ್ವೆ ಮತ್ತು ಪೆಟ್ರೋಲ್ ದರಗಳ ಏರಿಕೆಯನ್ನು ಖಂಡಿಸಿದರು.

ಅಂಗನವಾಡಿ ನೌಕರರ ಅಧ್ಯಯನ ಶಿಬಿರ

ಉತ್ತರಕನ್ನಡ : ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (ಸಿ.ಐ.ಟಿ.ಯು.)ದ ಉತ್ತರ ಕನ್ನಡ ಜಿಲ್ಲಾ ಮಟ್ಟದ 2 ದಿನಗಳ ಅಧ್ಯಯನ ಶಿಬಿರವು ಮುರ್ಡೇಶ್ವರದಲ್ಲಿ ನಡೆಯಿತ್ತು. ಉದ್ಘಾಟನೆಯನ್ನು ಮಾವಳ್ಳಿ ಗ್ರಾಮದ ಪಂಚಾಯತ್ ಅಧ್ಯಕ್ಷ ಗೋಪಾಲ ಭೋರಿ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಭಟ್ಕಳ ಸಿ.ಡಿ.ಪಿ.ಓ. ಕೃಷ್ಣರಾವ್ ಮಾತನಾಡಿ ಅಂಗನವಾಡಿ ನೌಕರರು ಅತೀ ಹೆಚ್ಚು ಕಷ್ಟಗಳನ್ನು ಎದುರಿಸುತ್ತಿದ್ದು ತಮ್ಮ ಬೇಡಿಕೆ ಈಡೇರಿಕೆಗಾಗಿ ಇನ್ನಷ್ಟು ಬಲಿಷ್ಟ ಸಂಘಟಿತ ಹೋರಾಟ ಮಾಡಬೇಕೆಂದರು. ಮಹಿಳೆಯರನ್ನು ಉದಾರೀಕರಣದ ಪ್ರಕ್ರಿಯೆ ನೇರವಾಗಿ ಬಾಧಿಸುತ್ತಿದೆ, ಅಂಗನವಾಡಿ ನೌಕರರು ಕಡಿಮೆ ಗೌರವಧನ ಪಡೆದು ಬೆಲೆ ಏರಿಕೆಯ ಇಂದಿನ ಸ್ಥಿತಿಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವವರು. ಒಂದೆಡೆ ಸಂಘಟಿತ ಹೋರಾಟ ನಡೆಯುತ್ತಿದ್ದರೂ ಆಳುವವರು ಅತ್ತ ಕಣ್ಣು ಹಾಯಿಸದಿರುವುದು ಖಂಡನಾರ್ಹ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಾಗರತ್ನ ಪಡಿಯರ್ ವಹಿಸಿದ್ದರು. ಸುಭಾಷ್ ಕೊಪ್ಪಿಕರ್, ಸವಿತಾ ತನ್ಮಡಿ ಉಪಸ್ಥಿತರಿದ್ದರು. ಶ್ರೀದೇವಿ ಭಟ್ ಸ್ವಾಗತಿಸಿ ಯಮುನಾ ಗಾಂವ್ಕಾರ್ ಕಾರ್ಯಕ್ರಮ ನಿರ್ವಹಿಸಿದರೆ ಗೀತಾ ಪಿ. ನಾಯ್ಕ ವಂದಿಸಿದರು.

ಅಂಜುಮಾನ್ ಒಪ್ಪಂದಕ್ಕೆ ಸ್ವಾಗತ

ಸಿಂಧಗಿಯ ಅಂಜುಮಾನ್ ಸಂಸ್ಥೆಯ ಆಡಳಿತ ಮಂಡಳಿ ರದ್ದಾಗಬೇಕು, ಅಲ್ಲಿ ನಡೆದ ಅವ್ಯವಹಾರದ ತನಿಖೆಯಾಗಬೇಕು ಎಂದು ಆಗ್ರಹಿಸಿ ಅಂಜುಮಾನ್ ಹೋರಾಟ ಸಮಿತಿ ನಡೆಸುತ್ತಿದ್ದ ಹೋರಾಟವನ್ನು ಹಿಂದಕ್ಕೆ ತೆಗೆದುಕೊಂಡು ರಾಜಿಯಾಗಿದ್ದನ್ನು ಕರ್ನಾಟಕ ಪ್ರಾಂತ ರೈತ ಸಂಘವು ಸ್ವಾಗತಿಸಿದೆ. ಈ ಬಗ್ಗೆ ಸ್ಥಳೀಯ ಶಾಸಕರು, ಜಿಲ್ಲೆಯ ಉಸ್ತುವಾರಿ ಸಚಿವ ಎಂ.ಸಿ.ಮನಗೂಳಿಯವರಿಗೆ ಹಲವು ಬಾರಿ ಮನವಿ ಮಾಡಿಕೊಂಡು ಮಧ್ಯಪ್ರವೇಶಿಸಿ ಎರಡು ಗುಂಪುಗಳಿಗೆ ರಾಜಿ ಮಾಡಿಕೊ[...] ಪ್ರಾಂತ ರೈತ ಸಂಘ ಆಗ್ರಹಿಸಿತ್ತು. ಆದರೆ ಸಚಿವರು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ನಡೆದುಕೊಂಡಿದ್ದು ಖೇದಕರ ವಿಷಯ. ಆದರೆ ಅಂಜುಮಾನ್ ಸಂಸ್ಥೆಯ ಎರಡು ಗುಂಪುಗಳು ರಾಜಿಯಾಗಿ ನಡೆದ ತಪ್ಪುಗಳನ್ನು ಸರಿಪಡಿಸಲು ಒಪ್ಪಿಕೊಂಡಿದ್ದು ಸ್ವಾಗತಾರ್ಹವಾಗಿದೆ ಎಂದು ರೈತ ಸಂಘ ಹೇಳಿಕೆ ನೀಡಿದೆ.

ಸರಕಾರಿ ಆಸ್ಪತ್ರೆಯಲ್ಲಿಯ ಅವ್ಯವಸ್ಥೆ ಸರಿಪಡಿಸಲು ಆಗ್ರಹ

ವಿಜಾಪುರ ಜಿಲ್ಲಾ ಸರಕಾರಿ ಆಸ್ಪತ್ರೆಯಲ್ಲಿ ಸಿವಿಲ್ ಸರ್ಜನ್ ಇರ[...] ಅವ್ಯಾಹತವಾಗಿ ಸಾರ್ವಜನಿಕರ ಸುಲಿಗೆ ನಡೆದಿದೆ. ಅಲ್ಲದೆ ರೋಗಿಗಳಿಗೆ ಸಮರ್ಪ[...] ಚಿಕಿತ್ಸೆ ನೀಡಲಾಗುತ್ತಿಲ್ಲ. ಆಸ್ಪತ್ರೆಯ[...] ಗುಳಿಗೆ, ಔಷಧಗಳನ್ನು ಕೊಡದೆ ಹೊರಗಿನ ಔಷಧಂಗಡಿಗಳಿಂದ ತರಲು ಚೀಟಿ ಬರೆದುಕೊಡುತ್ತಾರೆ. ಸರಕಾರವು ಈ ಬಗ್ಗೆ ತೀವ್ರವಾದ ಕ್ರಮ ಕೈಗೊಂಡು ನಡೆಯುತ್ತಿರುವ ಅವ್ಯವಹಾರ ತಡೆಗಟ್ಟಬೇಕು ಹಾಗೂ ಸಮರ್ಥ ವೈದ್ಯಾಧಿಕಾರಿಗಳನ್ನು ನಿಯಮಿಸಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘವು ಆಗ್ರಹಿಸಿದೆ.

ಬೆಲೆ ಏರಿಕೆ ವಿರುದ್ಧ ಸಿಪಿಐ(ಎಂ) ಪ್ರತಿಭಟನೆ

ಮೈಸೂರು: ಸಿಪಿಐ(ಎಂ) ಜಿಲ್ಲಾ ಸಮಿತಿ ನೇತೃತ್ವದಲ್ಲಿ ಇತ್ತೀಚೆಗೆ ಕೇಂದ್ರ ಸರ್ಕಾರ ಅಗತ್ಯವಸ್ತುಗಳ ಬೆಲೆ ಏರಿಸಿರುವುದರ ಹಾಗೂ ಕೋಮುವಾದದ ವಿರುದ್ಧ ಪ್ರತಿಭಟನಾ ರ್‍ಯಾಲಿ ನಡೆಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಎಂ.ಎನ್.ಉಗ್ರಪ್ಪ ಮತ್ತು ಮೋಹನ್ ಕುಮಾರ್ ಮಾತನಾಡಿ ಬಿಜೆಪಿಯ ಗಂಡಾಂತರಕಾರಿ ನೀತಿಯನ್ನು ವಿವರಿಸಿ ಮುಂದಿನ ದಿನಗಳಲ್ಲಿ ವ್ಯಾಪಕ ಪ್ರತಿಭಟನೆ ನಡೆಸಬೇಕಾದ ಆವಶ್ಯಕತೆ ವಿವರಿಸಿದರು.

ಜರ್ಮನ್ ಚುನಾವಣೆಯಲ್ಲಿ ಸೋಶಲಿಸ್ಟರಿಗೆ ಜಯ

ಜರ್ಮನಿಯ ಕೇಂದ್ರೀಯ ಪಾರ್ಲಿಮೆಂಟಿಗೆ ನಡೆದ ಚುನಾವಣೆಯಲ್ಲಿ ಸೋಶಿಯಲ್ ಡೆಮಾಕ್ರಾಟಿಕ್ ಪಕ್ಷ ಮತ್ತು ಗ್ರೀನ್ ಪಾರ್ಟಿ ಎಂಬ ಪರಿಸರವಾದಿ ಪಕ್ಷದ ಕೂಟಕ್ಕೆ ನಿಚ್ಚಳ ಬಹುಮತ ಸಿಕ್ಕಿದೆ. ಇದರಿಂದ 16 ವರ್ಷಗಳ ನಂತರ ಬಲ-ಮಧ್ಯ ಪಂಥೀಯ ಸರ್ಕಾರ ಇಳಿಯುತ್ತಿದೆ. ಜನ ಎಡ-ಮಧ್ಯ ಪಂಥೀಯ ರಾಜಕೀಯ ಕೂಟದತ್ತ ಒಲವು ತೋರಿಸಿದ್ದಾರೆ. ಇದರಿಂದ ಪಶ್ಚಿಮ ಯುರೋಪಿನಲ್ಲಿ ಕಳೆದ ಒಂದು ದಶಕದಿಂದ ಬೀಸುತ್ತಿದ್ದ ಬಲ-ಮಧ್ಯ ಪಂಥೀಯ ರಾಜಕೀಯ ಗಾಳಿ ಪೂರ್ಣವಾಗಿ ಮಾಯ ವಾದಂತಾಗಿದೆ. ಪಶ್ಚಿಮ ಯುರೋಪಿನ ಯುರೋಪಿಯನ್ ಒಕ್ಕೂಟದ 13 ದೇಶಗಳಲ್ಲಿ 11 ದೇಶಗಳಲ್ಲಿ ಎಡ-ಮಧ್ಯ ಪಂಥೀಯ ಸರ್ಕಾರಗಳು ಅಧಿಕಾರಕ್ಕೆ ಬಂದಂತಾಗಿದೆ. ಇದು ಒಂದು ಸ್ಪಷ್ಟ ರಾಜಕೀಯ ಟ್ರೆಂಡ್ ಎನ್ನುವಷ್ಟು ಸ್ಪಷ್ಟವಾಗಿದೆ. ಇದರ ಜೊತೆಗೆ ಇನ್ನೊಂದು ಶುಭ ಸಮಾಚಾರವೆಂದರೆ ಸಮಾಜವಾದಿ ಪೂರ್ವ ಜರ್ಮನಿಯ ಕಮ್ಯುನಿಸ್ಟ್ ಪಕ್ಷದ ಈಗಿನ ರೂಪವಾದ ಪಿ.ಡಿ.ಎಸ್. ಪಕ್ಷ ಶೇಕಡಾ 5 ಕ್ಕಿಂತ ಹೆಚ್ಚು ಮತಗಳಿಸುವ ಮೂಲಕ, ಜರ್ಮನ್ ಕೇಂದ್ರೀಯ ಪಾರ್ಲಿಮೆಂಟು ಪ್ರವೇಶಿಸಿದೆ. ಜರ್ಮನಿಯ ಚುನಾವಣಾ ವ್ಯವಸ್ಥೆಯ ಪ್ರಕಾರ ಪ್ರತಿ ಪಕ್ಷ ಗಳಿಸಿದ ಮತಗಳಿಕೆಯ ಅನುಪಾತಕ್ಕೆ ಸರಿಯಾಗಿ ಸೀಟುಗಳು ದೊರಕುತ್ತವೆ. ಆದರೆ ಶೇಕಡಾ 5 ಕನಿಷ್ಟ ಮತಗಳಿಕೆ ಆ ಪಕ್ಷಕ್ಕಿರಬೇಕು.

ಸೋವಿಯೆತ್ ಮತ್ತು ಪೂರ್ವ ಯುರೋಪಿನಲ್ಲಿ ಸಮಾಜವಾದಕ್ಕಾದ ಹಿನ್ನಡೆಯ ಹಿನ್ನೆಲೆಯಲ್ಲಿ ಯುರೋಪು ಬಲಪಂಥದತ್ತ ಹೆಚ್ಚೆಚ್ಚು ವಾಲಿದಂತೆ ಮೊದಲ ನೋಟಕ್ಕೆ ಕಂಡರೂ, ಈಗ ಯುರೋಪು ಎಡ ಪಂಥದತ್ತ ವಾಲುತ್ತಿದೆ. ಎಲ್ಲೆಡೆ ಯುರೋಪಿಯನ್ ಒಕ್ಕೂಟದ ಶರತ್ತುಗಳ ಹೆಸರಲ್ಲಿ ಪೂರ್ವ ಯುರೋಪಿನ ಸಮಾಜವಾದದ 'ಬೆದರಿಕೆ' ಮತ್ತು ಕಾರ್ಮಿಕ ವರ್ಗದ ಅವಿರತ ಹೋರಾಟಗಳಿಂದ ಗಳಿಸಿದ ಎಲ್ಲಾ ಸವಲತ್ತುಗಳನ್ನು ಬಂಡವಾಳಶಾಹಿ ಹಿಂತೆಗೆದುಕೊಳ್ಳುತ್ತಿದೆ. ವೈದ್ಯಕೀಯ ವ್ಯವಸ್ಥೆ, ಸಾಮಾಜಿಕ ಭದ್ರತೆ, ನಿರುದ್ಯೋಗದ ವಿರುದ್ಧ ಭದ್ರತೆ, ಮತ್ತಿತರ ಸಮಾಜ ಕಲ್ಯಾಣ ಕ್ರಮಗಳನ್ನು ಕಡಿತಗೊಳಿಸಲಾಗುತ್ತಿದೆ. ಇದರ ವಿರುದ್ಧ ಜನ ಸಿಡಿದೆದ್ದು, ಬಲಪಂಥೀಯ ಸರಕಾರಗಳನ್ನು ಕಿತ್ತೊಗೆದು ಎಡ- ಮಧ್ಯ ಪಂಥೀಯ ಸರ್ಕಾರಗಳನ್ನು ಅಧಿಕಾರಕ್ಕೆ ತರುತ್ತಿದ್ದಾರೆ.

ಸಮಾಜವಾದದ ಹಿನ್ನಡೆಯಿಂದ ನನ್ನನ್ನು ಹಿಡಿಯುವವರಿಲ್ಲ ಎಂದು ಬೀಗುತ್ತಿದ್ದ ಜಾಗತಿಕ ಬಂಡವಾಳಶಾಹಿ ದರ್ಪಕ್ಕೆ ಕಡಿವಾಣ ಹಾಕಿದಂತಾಗಿದೆ. ಅಭಿವೃದ್ಧ ಜಿ-7ನ ಯುರೋಪಿಯನ್ ಸದಸ್ಯರು ಮತ್ತು ಯುರೋಪಿನ ಅತ್ಯಂತ ಅಭಿವೃದ್ಧ ದೇಶಗಳಾದ ಜರ್ಮನಿ, ಫ್ರಾನ್ಸ್, ಬ್ರಿಟನ್, ಇಟಲಿಗಳಲ್ಲಿ ಎಡ-ಮಧ್ಯ ಪಂಥೀಯ ಕೂಟಗಳು ಅಧಿಕಾರಕ್ಕೆ ಬಂದಿವೆ ಎಂದು ಇಲ್ಲಿ ಗಮನಿಸಬಹುದು. ಇಟಲಿ, ಫ್ರಾನ್ಸ್ ಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳು ಸರಕಾರ ಗಳಲ್ಲಿ ಭಾಗವಹಿಸುತ್ತಿವೆ ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಸಿಪಿಐ(ಎಂ) ಸ್ವಾಗತ

ಬಿಜೆಪಿ ನಾಯಕತ್ವದ ಕೇಂದ್ರ ಸಚಿವ ವಾಳಪ್ಪಾಡಿ ರಾಮಮೂರ್ತಿಯವರು ಕೊಡಗು ಪ್ರತ್ಯೇಕತೆಯನ್ನು ಬೆಂಬಲಿಸಿ ಬರೆದ ಪತ್ರವನ್ನು ಆಕ್ಷೇಪಿಸಿ ಗೊತ್ತುವಳಿ ಅಂಗೀಕರಿಸಿರುವ ಕರ್ನಾಟಕ ಸರ್ಕಾರದ ಕ್ರಮವನ್ನು ಸಿಪಿಐ(ಎಂ) ಕೊಡಗು ಜಿಲ್ಲಾ ಸಮಿತಿ ಸ್ವಾಗತಿಸಿದೆ. ಈ ಪತ್ರದ ಬಗ್ಗೆ ಬಿಜೆಪಿ ಚಕಾರವೆತ್ತದಿರುವುದು ಆ ಪಕ್ಷದ ಇಬ್ಬಂದಿತನವನ್ನು ಸ್ಪಷ್ಟಪಡಿಸುತ್ತದೆ ಎಂದಿರುವ ಜಿಲ್ಲಾಸಮಿತಿ ಕೊಡಗಿಗೆ ಉಪಯುಕ್ತವಲ್ಲ ಎಂಬ ಕಾರಣದಿಂದ ಹಾರಂಗಿ ಜಲ ವಿದ್ಯುತ್ ಯೋಜನೆಯನ್ನು ವಿರೋಧಿಸುತ್ತಿರುವ ಕೆ.ಆರ್.ಎಂ.ಎಂ.ನ ಸಂಚಾಲಕರ ಹೇಳಿಕೆ ಸಂಕುಚಿತವಾದವೆಂದು ಸಿಪಿಐ(ಎಂ) ಖಂಡಿಸಿದೆ.

ಇಂಥಹ ಯೋಜನೆಗಳನ್ನು ರೂಪಿಸುವಾಗ ಪ್ರದೇಶದ ಸಮಗ್ರ ಅಭಿವೃದ್ಧಿಯೇ ಮುಖ್ಯವಾಗುತ್ತದೆ. ಈ ಯೋಜನೆಯನ್ನು ಬಹುರಾಷ್ಟ್ರೀಯ ಕಂಪೆನಿಗಳಿಗೆ ಕೊಡಬಾರದು ಮತ್ತು ಕೊಡಗಿನ ವಿದ್ಯುತ್ ಸಮಸ್ಯೆಯನ್ನು ಬಗೆಹರಿಸಲು ಅನುಕೂಲವಾಗುವಂತೆ ರೂಪಿಸಬೇಕೆಂದು ಸಿಪಿಐ(ಎಂ) ಜಿಲ್ಲಾ ಸಮಿತಿ ಆಗ್ರಹಿಸಿದೆ.

ರಸ್ತೆ ದುರಸ್ಥಿಗೆ ಒತ್ತಾಯಿಸಿ ರಸ್ತೆಯಲ್ಲಿ ನಾಟಿ!

ಮದ್ದೂರು ತಾಲೂಕಿನ ಬಸ್ ಸೌಲಭ್ಯದ ಅಸಮರ್ಪಕತೆ ಹಾಗೂ ಗ್ರಾಮಂತರ ರಸ್ತೆಗಳ ಅವ್ಯವಸ್ಥೆ ವಿರೋಧಿಸಿ ಸಾಮೂಹಿಕ ಸಂಘಟನೆಗಳ ವೇದಿಕೆಯು ಬೆಂಗಳೂರು-ಮೈಸೂರು ಹೆದ್ದಾರಿ ರಸ್ತೆ ತಡೆ ಹಾಗೂ ಶಿವಪುರ ಕೊಪ್ಪ ರಸ್ತೆಯಲ್ಲಿ ನಾಟಿ ನೆಡುವ ಪ್ರತಿಭಟನಾ ಚಳುವಳಿಯನ್ನು ನಡೆಸಿತು. ಸಾಮೂಹಿಕ ಸಂಘಟನೆಗಳ ವೇದಿಕೆ ಸಂಚಾಲಕ ದೇಶಹಳ್ಳಿ ಆರ್. ಮೋಹನ್ ಕುಮಾರ್ ಅವರ ನೇತೃತ್ವದಲ್ಲಿ ಜರುಗಿದ ಪ್ರತಿಭಟನಾ ಕಾರ್ಯಕ್ರಮದಲ್ಲಿ ಮದ್ದೂರು ತಾಲ್ಲೂಕಿನ ಹಲವು ಸಂಘಟನೆಗಳ ಕಾರ್ಯಕರ್ತರು ಮೈಸೂರು ಬೆಂಗಳೂರು ಹೆದ್ದಾರಿಯಲ್ಲಿ 15 ನಿಮಿಷಗಳಿಗೂ ಹೆಚ್ಚುಕಾಲ ರಸ್ತೆ ತಡೆ ನಡೆಸಿದರು.

ನಾಟಿ ಕಾರ್ಯಕ್ರಮ:- ತಾಲ್ಲೂಕಿನ ಗ್ರಾಮಾಂತರ ರಸ್ತೆಗಳ ಅವ್ಯವಸ್ಥೆ ವಿರೋಧಿಸಿ ಶಿವಪುರ ಕೊಪ್ಪ ರಸ್ತೆಯಲ್ಲಿ ವೇದಿಕೆಯ ಕಾರ್ಯಕರ್ತರು ಭತ್ತದ ಪೈರುಗಳನ್ನು ನಾಟಿ ಮಾಡುವ ಮೂಲಕ ವಿನೂತನವಾಗಿ ಪ್ರತಿಭಟನೆ ವ್ಯಕ್ತ ಪಡಿಸಿದರು.

ಪ್ರತಿಭಟನಾ ನಿರತರನ್ನು ಉದ್ದೇಶಿಸಿ ವೇದಿಕೆಯ ಸಂಚಾಲಕ ದೇಶಹಳ್ಳಿ ಆರ್. ಮೋಹನ್ ಕುಮಾರ್, ರೈತಸಂಘದ ವಿ. ಅಶೋಕ್, ಸುನಂದಾ ಜಯರಾಂ, ಡಿ.ವೈ.ಎಫ್.ಐ. ಜಿಲ್ಲಾ ಸಂಚಾಲಕ ಪುಟ್ಟಮಾದಯ್ಯ, ಮಾತನಾಡಿ ಮದ್ದೂರು ತಾಲ್ಲೂಕು ಪತ್ರಕರ್ತರ ಸಂಘದಿಂದ ನಾಳೇನಹಳ್ಳಿ ಮಹದೇವ, ಡಾ|| ಮೀನಾಕ್ಷಿದೇವಿ, ಗುರುಬಸವಯ್ಯ, ಡಿ.ವೈ.ಎಫ್.ಐ. ನಿಂದ ಧನಂಜಯ್ಯ, ಸಿದ್ದೇಗೌಡ, ಪ್ರಕಾಶ, ಎಸ್.ಎಫ್.ಐ. ನಿಂದ ರಂಗರಾಜು, ಬಿ.ಜೆ.ವಿ.ಎಸ್. ನಿಂದ ನಾರಾಯಣ್, ಸಿ.ಐ.ಟಿ.ಯು ನಿಂದ ಶಂಕರಯ್ಯ, ಅಂಗನವಾಡಿ ನೌಕರರ ಸಂಘದಿಂದ ಗುರುಲಿಂಗಸ್ವಾಮಿ ರೈತ ಸಂಘದ ಶಂಕರಯ್ಯ, ಡಿ.ಎಸ್.ಎಸ್. ನಿಂದ ನಗರಗಲವಾಡಿ ರಾಮಯ್ಯ, ಆಟೋ ಚಾಲಕರ ಸಂಘದ ಕೃಷ್ಣ ಹಾಗೂ ಎಲ್.ಐ.ಸಿ. ಸಂಘದ ಪದಾಧಿಕಾರಿಗಳು ಸೇರಿದಂತೆ ಬಹುತೇಕ ಕಾರ್ಯಕರ್ತರುಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಶ್ರದ್ಧಾಂಜಲಿ

ಇತ್ತೀಚೆಗೆ ನಿಧನರಾದ ದಕ್ಷಿಣ ಕನ್ನಡದ ಅಳಪೆ ಶಾಖೆಯ ಸಿ.ಪಿ.ಐ.(ಎಂ) ಕಾರ್ಯದರ್ಶಿ ಕಾಮ್ರೇಡ್ ಕೆ. ಮಾರಪ್ಪರ ನಿಧನಕ್ಕೆ ಅಳಪೆ ಶಾಖೆಯು ಸಭೆ ಸೇರಿ ಶ್ರದ್ಧಾಂಜಲಿ ಸಲ್ಲಿಸಿದೆ.

76 ವಯಸ್ಸಿನ ಕೆ. ಮಾರಪ್ಪನವರು ಜಿಲ್ಲೆಯ ಕಮ್ಯುನಿಸ್ಟ್ ಚಳುವಳಿಯ ಆರಂಭದಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಅವರು ಒಬ್ಬ ನೇಯ್ಗೆ ಕಾರ್ಮಿಕರಾಗಿದ್ದು, ನೇಯ್ಗೆ ಕಾರ್ಮಿಕರು ಹಾಗೂ ಬೀಡಿ ಕಾರ್ಮಿಕರನ್ನು ಸಂಘಟಿಸುವಲ್ಲಿ ಅಪಾರ ಶ್ರಮ ವಹಿಸಿದ್ದಾರೆಂದು ಅಳಪೆ ಸಿ.ಪಿ.ಐ.(ಎಂ) ಶಾಖೆಯು ತನ್ನ ಶ್ರದ್ಧಾಂಜಲಿಯಲ್ಲಿ ಸ್ಮರಿಸಿದೆ.

ಲೋಕಸಂಚಾರ

ಶರತ್ ಚಂದ್ರ

ಅಮಾರ್ತ್ಯ ಸೆನ್, ಐರಿಷ್ ನಾಯಕರಿಗೆ ನೊಬೆಲ್ ಬಹುಮಾನ

ಈ ವರ್ಷದ ನೊಬಲ್ ಬಹುಮಾನವನ್ನು ಭಾರತೀಯ ಅರ್ಥಶಾಸ್ತ್ರಜ್ಞ ಪ್ರೊ|| ಅಮಾರ್ತ್ಯ ಸೆನ್ ಅವರಿಗೆ ಹಾಗೂ ಐರ್ಲೆಂಡಿನ ಜನಾಂಗೀಯ ಧಾರ್ಮಿಕ ಸಮಸ್ಯೆ ಪರಿಹರಿಸುವತ್ತ ಗಮನಾರ್ಹ ಕೊಡುಗೆ ನೀಡಿದ ರಾಜಕೀಯ ನಾಯಕರಿಗೆ ಶಾಂತಿ ಪ್ರಶಸ್ತಿ ನೀಡುವ ಮೂಲಕ ವಿಶ್ವದ ಗಮನ ಸೆಳೆದಿದೆ. ಮೂರು ದಶಕಗಳ ಕಾಲ ಹಾರ್ವರ್ಡ್ ಹಾಗೂ ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡಿದ್ದರೂ, ಭಾರತೀಯ ನಾಗರೀಕತ್ವ ಉಳಿಸಿಕೊಂಡಿರುವ ಪ್ರೊ|| ಅಮಾರ್ತ್ಯ ಸೆನ್ ನೊಬೆಲ್ ಪ್ರಶಸ್ತಿ ಗಳಿಸಿರುವ ಭಾರತೀಯರಲ್ಲಿ ಆರನೇ ಯವರು. ಅರ್ಥಶಾಸ್ತ್ರಕ್ಕೆ ನೊಬೆಲ್ ಪ್ರಶಸ್ತಿ ಗಳಿಸಿದ ಮೊದಲ ಭಾರತೀಯ ಮಾತ್ರವಲ್ಲ, ಮೊದಲ ಏಶ್ಯನ್ ಸಹ. 'ಬರಗಾಲದ ಬಡತನದ ಹಿಂದಿರುವ ಆರ್ಥಿಕ ಪ್ರಕ್ರಿಯೆಗಳನ್ನು ಅರ್ಥೈಸಿ ಕೊಳ್ಳುವ ನಿಟ್ಟಿನಲ್ಲಿ 'ಕಲ್ಯಾಣ ಅರ್ಥಶಾಸ್ತ್ರ'ಕ್ಕೆ ಪ್ರೊ|| ಸೆನ್‌ರವರ ಕೊಡುಗೆಗಾಗಿ ಈ ಪ್ರಶಸ್ತಿ ನೀಡಲಾಗಿದೆ ಎಂದು 'ರಾಯಲ್ ಅಕಾಡೆಮಿ ಆಫ್ ಸೈನ್ಸ್' ಹೇಳಿದೆ. ನೊಬೆಲ್ ಪ್ರಶಸ್ತಿಯ ಮೌಲ್ಯ ಸುಮಾರು ಹತ್ತು ಲಕ್ಷ ಡಾಲರುಗಳು.

ನೊಬೆಲ್ ಶಾಂತಿ ಪ್ರಶಸ್ತಿ ಅತ್ಯಂತ 'ರಾಜಕೀಯ'ವಾದ ಪ್ರಶಸ್ತಿ. ಈ ಬಾರಿ ಐರ್ಲೆಂಡಿನ ಬಹುಸಂಖ್ಯಾತ ಕ್ಯಾಥೋಲಿಕ್ ಜನಬೆಂಬಲ ಪಡೆದ ಸೋಶಿಯಲ್ ಡೆಮೊಕ್ರಾಟಿಕ್ ಮತ್ತು ಲೇಬರ್ ಪಾರ್ಟಿಯ ನಾಯಕ ಜಾನ್ ಹ್ಯೂಮ್ ಮತ್ತು ಉತ್ತರ ಐರ್ಲೆಂಡಿನ ಪ್ರೊಟೆಸ್ಟಂಟ್ ಜನರ ಬೆಂಬಲ ಪಡೆದ ಆಲ್‌ಸ್ಟರ್ ಯೂನಿಯನ್ ಪಕ್ಷದ ನಾಯಕ ಡೇವಿಡ್ ಟ್ರಿಂಬ್ಲೆಯವರಿಗೆ ಶಾಂತಿ ಪ್ರಶಸ್ತಿ ಕೊಡಲಾಗಿದೆ. ಐರ್ಲೆಂಡ್ ಶಾಂತಿ ಬಗ್ಗೆ ಕೆಲಸ ಮಾಡಿರುವವರಿಗೆ ಈ ವರ್ಷದ ಪ್ರಶಸ್ತಿ ಕೊಡಲಾಗುತ್ತದೆ ಎಂದು ವ್ಯಾಪಕವಾಗಿ ನಿರೀಕ್ಷಿಸಲಾಗಿದ್ದರೂ, ಈ ಇಬ್ಬರು ನಾಯಕರ ಹೆಸರು ಸ್ವಲ್ಪ ಆಶ್ಚರ್ಯ ತಂದಿದೆ. ಐರಿಷ್ ಪ್ರಧಾನಿ, ಬ್ರಿಟಿಶ್ ಪ್ರಧಾನಿ, ಶಾಂತಿ ಮಾತುಕತೆಗೆ ನಾಂದಿ ಹಾಕಿದ ಅಮೇರಿಕನ್ ಸೆನೆಟರ್ ಇವರಲ್ಲಿ ಒಬ್ಬರಿಗೆ ಬರಬಹುದು ಎಂದು ನಿರೀಕ್ಷೆ ಇತ್ತು. ಧಾರ್ಮಿಕ ಜನಾಂಗೀಯ ಕಲಹ ಕೊನೆಗಾಣಿಸಿ ಶಾಂತಿಯತ್ತ ಹೋಗುವ ಬಗ್ಗೆ ಈ ಎರಡೂ ಧರ್ಮಗಳ ಜನರ ನಾಯಕರು ತೋರಿಸಿದ ರಾಜಕೀಯ ಧೈರ್ಯ ಪ್ರಶಂಸನೀಯ ಎಂದು ನೊಬೆಲ್ ಸಮಿತಿ ತಿಳಿಸಿದೆ. ಐರ್ಲೆಂಡಿನ ಶಾಂತಿ ಪ್ರಕ್ರಿಯೆಗೆ ಈ ಪ್ರಶಸ್ತಿ ಕುಮ್ಮಕ್ಕು ಕೊಡುವುದು ಎನ್ನಲಾಗಿದೆ. ಐರ್ಲೆಂಡಿನಲ್ಲಿ ಈ ಶಾಂತಿ ಪ್ರಶಸ್ತಿಗೆ ಮೆಚ್ಚುಗೆ, ಬೆಂಬಲ ಸಿಕ್ಕಿದೆ. ಐರಿಷ್ ರಿಪಬ್ಲಿಕನ್ ಆರ್ಮಿಯ ರಾಜಕೀಯ ವಿಭಾಗದ ಪ್ರತಿನಿಧಿ ಗ್ಯಾರಿ ಆಡಮ್ಸ್ ಸಹ ಇದನ್ನು ಸ್ವಾಗತಿಸಿದ್ದಾರೆ.

ಪಾಕಿಸ್ತಾನದಲ್ಲಿ ಬಿಕ್ಕಟ್ಟು - ಸೇನಾ ಮುಖ್ಯಸ್ಥರ ರಾಜೀನಾಮೆ

ಪಾಕಿಸ್ತಾನ ಅಣ್ವಸ್ತ್ರ ಸ್ಫೋಟ ನಂತರದ ದಿಗ್ಬಂಧನದ ನಂತರ ಎದುರಿಸುತ್ತಿರುವ ರಾಜಕೀಯ-ಆರ್ಥಿಕ ಬಿಕ್ಕಟ್ಟಿನಿಂದ ಜನರ ಗಮನ ಸೆಳೆಯಲು ಪ್ರಧಾನಿ ನವಾಜ್ ಶರೀಫ್ ಬೇರೆ ಬೇರೆ ವಿಧಾನ ಅನುಸರಿಸುತ್ತಿದ್ದಾರೆ. 15ನೇ ಸಂವಿಧಾನ ತಿದ್ದುಪಡಿ ಮೂಲಕ ಇಸ್ಲಾಮಿಕ್ ಕಾನೂನಿಗೆ ಪ್ರಶ್ನಾತೀತ ದರ್ಜೆ ಕೊಡುವ ಹೆಸರಿನಲ್ಲಿ, ತಿದ್ದುಪಡಿಯ ಪ್ರಕಾರ ಈಗ ಯಾವುದೆ ಸಂವಿಧಾನ ಬಾಹಿರ ಕೆಲಸವನ್ನು ಸರ್ಕಾರ ಮಾಡಿದರೂ, ಕೋರ್ಟುಗಳು ಕೇಳುವಂತಿಲ್ಲ.

ಇದಲ್ಲದೆ ಪ್ರಧಾನಿ ಶರೀಫ್, ದೇಶದ ಸೇನಾ ನಾಯಕರ ಜೊತೆ ಘರ್ಷಣೆಗೆ ಇಳಿದಿದ್ದು ಆ ದೇಶದ ಸೇನಾ ಮುಖ್ಯಸ್ಥ ಜನರಲ್ ಕರಾಮತ್ ರಾಜೀನಾಮೆ ನೀಡುವುದರಲ್ಲಿ ಪರ್ಯಾವಸಾನವಾಗಿದೆ. ಆಮೇಲೆ ಸೇನಾ ಮುಖಂಡನ ನೇಮಕಾತಿಯಲ್ಲಿ ಪ್ರಧಾನಿ ಶರೀಫರ ನೀತಿಯಿಂದ ಇನ್ನಿಬ್ಬರು ಹಿರಿಯ ಸೇನಾ ಮುಖಂಡರು ರಾಜಿನಾಮೆ ನೀಡಿದ್ದಾರೆ.

ಬ್ರೆಜಿಲ್‌ನಿಂದ ಬಂಡವಾಳ ಪಲಾಯನ

ಜಪಾನ್, ದ.ಕೊರಿಯಾ, ದಕ್ಷಿಣ ಪೂರ್ವ ಏಶ್ಯಾ, ರಶ್ಯಾಗಳ ನಂತರ ಬ್ರೆಜಿಲ್‌ನ ಸರದಿ. ಬ್ರೆಜಿಲ್‌ನಿಂದ ಅಪಾಯಕಾರಿ ಪ್ರಮಾಣದಲ್ಲಿ ಬಂಡವಾಳ ಪಲಾಯನ ಆರಂಭವಾಗಿದೆ. ಒಂದೇ ವಾರದಲ್ಲಿ ವಿದೇಶಿ ವಿನಿಮಯ ಮಾರುಕಟ್ಟೆ ಬ್ರೆಜಿಲ್ 43.9 ಕೋಟಿ ಡಾಲರುಗಳನ್ನು ಕಳೆದುಕೊಂಡಿದೆ. ವಿದೇಶಿ ವಿನಿಮಯ ಮಾರುಕಟ್ಟೆಯ ಮೂಲಕ ಆಗಸ್ಟ್‌ನಿಂದ ಈ ವರೆಗೆ ಮೂರು ತಿಂಗಳಲ್ಲಿ ಬ್ರೆಜಿಲ್‌ನಿಂದ 30 ಶತಕೋಟಿ ಡಾಲರುಗಳಷ್ಟು ಬಂಡವಾಳ 'ಪಲಾಯನ' ಮಾಡಿದೆ ಎನ್ನಲಾಗಿದೆ.

ಚೀನಾ-ತೈವಾನ್ ಮಾತುಕತೆ ಆರಂಭ

'ಒಂದು ದೇಶ-ಎರಡು ವ್ಯವಸ್ಥೆ' ನೀತಿಯ ಮೇರೆಗೆ ಹಾಂಗ್‌ಕಾಂಗ್ ಹಸ್ತಾಂತರವನ್ನು ಸಫಲವಾಗಿ ಸಾಧಿಸಿದ ಚೀನಾ, ತೈವಾನ್ ಜೊತೆಗೆ ಮಾತುಕತೆ ಆರಂಭಿಸಿದೆ. ತೈವಾನ್‌ನ ವಿದೇಶಿ ಸಂಬಂಧಗಳ ಸಂಘಟನೆಯ ಮುಖ್ಯಸ್ಥ ಹಾಗೂ ಆಳುವ ಕೊಮಿಂಟಾಂಗ್ ಪಕ್ಷದ ಪ್ರಮುಖ ನಾಯಕ ವಾಂಗ್ ದಾವ್‌ಹಾನ್‌ರ ನಾಯಕತ್ವದ 11 ಜನ ಸದಸ್ಯರ ಶಿಷ್ಟ ಮಂಡಳಿ ಚೀಣಾಕ್ಕೆ 5 ದಿನಗಳ ಭೇಟಿ ನೀಡಿತ್ತು. ಆ ಭೇಟಿಯ ಭಾಗವಾಗಿ ಈ ಶಿಷ್ಟ ಮಂಡಳಿ ಚೀನಾದ ಉಪಪ್ರಧಾನಿ, ಮತ್ತು ಅಧ್ಯಕ್ಷರನ್ನು ಭೇಟಿ ಮಾಡಿತ್ತು. ಈ ಭೇಟಿಯ ಫಲವಾಗಿ ನಿರ್ದಿಷ್ಟ ಪ್ರಗತಿ ಏನೂ ಆಗದಿದ್ದರೂ, ಮಾತುಕತೆ ಆರಂಭವಾಗಿದ್ದೆ ಆಕಸ್ಮಿಕ ಎನ್ನಬಹುದು. ಚೀನಾದಲ್ಲಿ ಹೆಚ್ಚುತ್ತಿರುವ ಬಂಡವಾಳ ಹೂಡುವ ಅವಕಾಶಗಳು, ತೈವಾನ್ ಎದುರಿಸುತ್ತಿರುವ ಅಂತರ್ರಾಷ್ಟ್ರೀಯ ಏಕಾಂಗಿತನ (ಜಗತ್ತಿನಲ್ಲಿ ಕೇವಲ 30 ದೇಶಗಳು ತೈವಾನ್ ಪ್ರತ್ಯೇಕ ದೇಶ ಎಂದು ಮಾನ್ಯತೆ ನೀಡಿವೆ) ತೈವಾನ್‌ನಲ್ಲಿ ಜನಮನವನ್ನು ಚೀನಾದ ಜೊತೆಗೆ ಮಾತುಕತೆಗೆ ತಯಾರು ಮಾಡಿದೆ. ತೈವಾನ್‌ನ ಕೆಲವು ವಿರೋಧ ಪಕ್ಷಗಳು ಪುನರ್ಮಿಲನಕ್ಕೆ ಕಟ್ಟಾ ವಿರೋಧಿಯಾದರೂ, ಆ ಬಗ್ಗೆ ತೈವಾನ್‌ನಲ್ಲಿ ಆಸಕ್ತಿ ಆರಂಭವಾಗಿದೆ.

ಕೊಲಂಬಿಯಾದಲ್ಲಿ ಸಾವಿರಾರು ನರ್ಸುಗಳ ಪ್ರತಿಭಟನೆ

ಸರ್ಕಾರಿ, ಸಾಮಾಜಿಕ ಸೇವೆಗಳಲ್ಲಿ ಕಡಿತ ಮಾಡುವ ಸರಕಾರದ ಯೋಜನೆಯ ವಿರುದ್ಧ ಹತ್ತು ಸಾವಿರಕ್ಕೂ ಹೆಚ್ಚು ನರ್ಸುಗಳು ದಕ್ಷಿಣ ಅಮೇರಿಕಾದ ಕೊಲಂಬಿಯಾದ ಬೀದಿಗಳಿದು ಪ್ರತಿಭಟನೆ ನಡೆಸಿದರು.

ಸಿಂಗಾಪುರ್‌ನಲ್ಲಿ ಅಪೆಕ್ ಸಭೆಯ ಸ್ಥಳದಲ್ಲಿ ತೀವ್ರ ಪ್ರತಿಭಟನೆ

ಏಶ್ಯಾ-ಪೆಸಿಫಿಕ್ ದೇಶಗಳ ಆರ್ಥಿಕ ಕೂಟ APECನ ಸಭೆ ಇತ್ತೀಚೆಗೆ ಸಿಂಗಾಪುರ್‌ನಲ್ಲಿ ಸೇರಿತ್ತು. ದಕ್ಷಿಣ ಪೂರ್ವ ಏಶ್ಯಾ ದೇಶಗಳ ಬಿಕ್ಕಟ್ಟಿನಲ್ಲಿ ಅಪೆಕ್ ಏನೂ ಸಹಾಯಕ್ಕೆ ಬಾರದಿದಕ್ಕೆ ರೋಷಗೊಂಡವರು ಆ ಸ್ಥಳದಲ್ಲಿ ಭಾರೀ ಪ್ರತಿಭಟನೆ ನಡೆಸಿದರು. 'APEC ನಿಷ್ಪ್ರಯೋಜಕ' ಎಂದು ಕೂಗುತ್ತಾ ನೆರೆದಿದ್ದ ಪ್ರತಿಭಟನಕಾರರು ಕಸ ತುಂಬಿದ ಪ್ಲಾಸ್ಟಿಕ್ ಬ್ಯಾಗ್‌ಗಳನ್ನು ಪ್ರದರ್ಶಿಸಿದರು.

ಐ.ಎಂ.ಎಫ್., ವಿಶ್ವಬ್ಯಾಂಕ್‌ಗಳಿಗೆ ಒಲ್ಲದ ಮನಸ್ಸಿನಿಂದ ಅಮೇರಿಕಾ ವಂತಿಗೆ

ಐ.ಎಂ.ಎಫ್. ಮತ್ತು ವಿಶ್ವಸಂಸ್ಥೆಗೆ ಅಮೇರಿಕಾದ ವಂತಿಗೆಯನ್ನು ತಡೆಹಿಡಿದಿದ್ದ ರಿಪಬ್ಲಿಕನ್ ಪಕ್ಷದ ಫ್ಯಾಸಿಸ್ಟ್ ಗ್ಯಾಂಗ್ ಅದನ್ನು ಕೊಡಲು ನಿರ್ಧರಿಸಿದೆಯಂತೆ - ಆದರೆ ಶರತ್ತಗಳೊಂದಿಗೆ. ಐ.ಎಂ.ಎಫ್.ಗೆ 18 ಶತಕೋಟಿ ಡಾಲರು ಜೊತೆಗೆ ಹೊಸ ಶರತ್ತುಗಳೆಂದರೆ ಬಿಕ್ಕಟ್ಟಿಗೊಳಗಾದ ದೇಶಗಳಿಂದ ಹೆಚ್ಚಿನ ಬಡ್ಡಿದರ ವಸೂಲಿ, ಸಾಲ ಮರುಪಾವತಿ ಅವಧಿ ಕಡಿಮೆ ಮಾಡುವುದು ಇತ್ಯಾದಿ. ಅದೇ ರೀತಿ ವಿಶ್ವಸಂಸ್ಥೆಯ ವಂತಿಕೆಯ ನಿರ್ಧಾರ ಸಹ ವಿವಾದಾಸ್ಪದವಾಗಿದೆ. ವಿಶ್ವಸಂಸ್ಥೆಯ ವಂತಿಗೆಯ 1.6 ಶತಕೋಟಿ ಡಾಲರು ಬಾಕಿ ಇಟ್ಟಿರುವ ಅಮೇರಿಕಾ ಸದ್ಯಕ್ಕೆ 34.7 ಕೋಟಿ ಡಾಲರು ಕೊಡಲು ನಿರ್ಧರಿಸಿದೆ. ಈ ಕನಿಷ್ಟ ವಂತಿಗೆ ಕೊಡದಿದ್ದರೆ ಅಮೇರಿಕಾ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯಲ್ಲಿ ತನ್ನ ಮತದಾನದ ಹಕ್ಕನ್ನು ಕಳೆದುಕೊಳ್ಳುತ್ತದೆ. ವಿಶ್ವಸಂಸ್ಥೆ ಮಹಾಕಾರ್ಯದರ್ಶಿ ಅಮೇರಿಕಾದ ಈ ನಿರ್ಣಯದ ಬಗ್ಗೆ ಕೋಪ ವ್ಯಕ್ತಪಡಿಸಿದ್ದಾರೆ ಎನ್ನಲಾಗಿದೆ.

ವಿಶ್ವಸಂಸ್ಥೆಯಲ್ಲಿ ಪುನಃ ಒಬ್ಬಂಟಿಗನಾದ ಅಮೇರಿಕ

ಕ್ಯೂಬಾವನ್ನು ಒಬ್ಬಂಟಿಗನಾಗಿಸಲು ಪ್ರಯತ್ನಿಸುತ್ತಿರುವ ಅಮೇರಿಕಾ ತಾನೇ ಒಬ್ಬಂಟಿಗನಾಗುವ ಪರಿಸ್ಥಿತಿಯನ್ನು ಪದೇ ಪದೇ ವಿಶ್ವಸಂಸ್ಥೆಯಲ್ಲಿ ಎದುರಿಸುತ್ತಿದೆ. ಇನ್ನೊಂದು ಬಾರಿ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ ಭಾರಿ ಬಹುಮತದಿಂದ ಕ್ಯೂಬಾದ ಮೇಲೆ ಅಮೇರಿಕನ್ ದಿಗ್ಬಂಧನವನ್ನು ಖಂಡಿಸುವ ನಿರ್ಣಯ ತೆಗೆದುಕೊಂಡಿದೆ. ಈ ಬಾರಿ ನಿರ್ಣಯದ ವಿರುದ್ಧ ಮತ ನೀಡಿರುವುದು ಅಮೇರಿಕ ಮತ್ತು ಅದರ ಬಾಲಂಗೋಚಿ ಇಸ್ರೇಲ್ ನಂತದ್ದು. 6 ದೇಶಗಳು ಮತದಾನದಲ್ಲಿ ಭಾಗವಹಿಸಲಿಲ್ಲ. ಕ್ಯೂಬಾದ ಪರವಾದ ನಿರ್ಣಯಕ್ಕೆ ಈ ಬಾರಿ ಸಿಕ್ಕಿರುವ ಬೆಂಬಲ ಅತ್ಯಧಿಕ.

ಮಾರ್ಕ್ಸ್‌ವಾದದ ಕೈದೀವಿಗೆಗೆ ಕಲ್ಬುರ್ಗಿಯಲ್ಲಿ ನಮನ



ಮಾರ್ಕ್ಸ್‌ವಾದದ ಕೈದೀವಿಗೆಯಾಗಿದ್ದ ಕಾಂ॥ ಪಿ.ರಾಮಚಂದ್ರರಾವ್ ಅವರ ನಿಧನದ ಸುದ್ದಿ ಬೆಳಕು ಹರಿಯುವ ಮುನ್ನವೇ ಕಲ್ಬುರ್ಗಿಯ ಸಂಗಾತಿಗಳ ಮನೆ ಮನೆಗೆ ಮುಟ್ಟಿ ಎಲ್ಲರನ್ನೂ ಶೋಕದಲ್ಲಿ ಮುಳುಗಿಸಿತು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಛೇರಿ ಹಸನ್‌ಖಾನ್ ಕಟ್ಟಡದಲ್ಲಿ ಪಕ್ಷದ ಸಂಗಾತಿಗಳು, ಸಾಂಸ್ಕೃತಿಕ ಕಾರ್ಯಕರ್ತರು, ದಿನಗೂಲಿಗಳು, ಕಾರ್ಮಿಕರು, ಕೃಷಿ ಕೂಲಿಕಾರರು, ಮಹಿಳೆಯರು, ಸಾಹಿತಿಗಳು, ಪತ್ರಕರ್ತರು ಗುಂಪುಗಟ್ಟಿ ಬಂದರು. ಕಾಂ॥ ಪಿ. ರಾಮಚಂದ್ರರಾವ್ ಅವರ ಪ್ರೀತಿಯ ವಿಸ್ತಾರ ಯಾವೆಲ್ಲಾ ಕ್ಷೇತ್ರಗಳಿಗೆ ಚಾಚಿಕೊಂಡಿತ್ತು ಎಂಬುದಕ್ಕೆ ಇದು ಸೂಚಕವಾಗಿತ್ತು.

ಹಸನ್‌ಖಾನ್ ಭವನ ಸದಾ ಚಟುವಟಿಕೆಯ ಕೇಂದ್ರ. ಒಂದಿಲ್ಲೊಂದು ಸಭೆ, ಚರ್ಚೆಗಳ ಗದ್ದಲ ಇರಬೇಕು. ಆದರೆ ಆ ದಿನ ಮಾತ್ರ ನೂರಾರು ಜನರು ಸಾಲ, ಸಾಲಾಗಿ ಬರುತ್ತಲೇ ಇದ್ದರೂ ಸಹಾ ಅವರು ಮಾತು ಕಳೆದುಕೊಂಡಿದ್ದರು.

ಪಿ. ರಾಮಚಂದ್ರರಾವ್ ಅವರನ್ನು ನೆನಪಿಸಿಕೊಂಡು ಮಾತು ಕೊಡಲು ಹೋದವರೂ ಸಹಾ ಕಣ್ಣೀರು ಉಕ್ಕಿ ಮಾತುಗಳನ್ನು ಪೂರ್ಣಗೊಳಿಸಲಾರದೇ ಹೋದರು. ಕೆಲವೇ ದಿನಗಳ ಹಿಂದೆ ತಮ್ಮೊಂದಿಗಿದ್ದ ತಮ್ಮೆಲ್ಲರನ್ನೂ ಪ್ರೀತಿಸುತ್ತಿದ್ದ ಹಿರಿಯ ಸಂಗಾತಿಯ ನಿಧನ ಮಾತು ಪೂರ್ಣಗೊಳ್ಳಲು ಬಿಡಲಿಲ್ಲ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಮಾರುತಿ ಮಾನ್ಪಡೆ, ಅವರು 22 ರಂದು ಪಕ್ಷಕ್ಕೆ ವಾಹನ ಖರೀದಿಸಲು ಪಕ್ಷದ ಹಿತೈಷಿಗಳ ಬಳಿ ಹಣ ಸಂಗ್ರಹಿಸಲು ಇಲ್ಲಿಗೆ ಬರುವುದಾಗಿ ತಿಳಿಸಿದ್ದರು. ದೆಹಲಿಯಿಂದ ನೇರವಾಗಿ ಇಲ್ಲಿಗೆ ಬರಬೇಕಾದ ಸಂಗಾತಿ ಎಲ್ಲಿ ಹೋದರು ಎಂದು ಮಾತು ಮುಗಿಸದೇ ನಿಂತರು. ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಕೆ. ನೀಲಾ ಮಹಿಳಾ ಸಂಘಟನೆ ಬೆಳಸಲು ಅವರು ನೀಡುತ್ತಿದ್ದ ಪ್ರೋತ್ಸಾಹವನ್ನು ಸ್ಮರಿಸಿದರು. ಅವರ ಎಲ್ಲಾ ಕೊಡುಗೆ ತಿಳಿಸಲು ಅವರೂ ಸಹಾ ಮಾತು ಮುಗಿಸಲಾಗಲಿಲ್ಲ. ಸದಾ ನಮ್ಮನ್ನು ಗುರುತಿಸಿ ಬಳಿಗೆ ಬಂದು ಹೆಗಲ ಮೇಲೆ ಕೈಹಾಕಿ ಪ್ರೀತಿಯಿಂದ ಮಾತನಾಡಿಸುತ್ತಿದ್ದ ಸಂಗಾತಿ ಪಿ.ಆರ್. ಅವರ ರೀತಿಯಿಂದಾಗಿಯೇ ನಮ್ಮಲ್ಲಿ ಧೈರ್ಯ ಉಕ್ಕುತ್ತಿತ್ತು ಎಂದ ಅವರೂ ಬಿಕ್ಕಿದರು.

ಸಂತಾಪ ಸಭೆ ಮುಗಿದರೂ ಸಹಾ ಬರುತ್ತಿದ್ದ ಸಂಗಾತಿಗಳ ಸಾಲು ನಿಲ್ಲಲಿಲ್ಲ. ಜಿಲ್ಲೆಯಾದ್ಯಂತ ಹಲವು ಕಡೆ ಹಲವು ಸಂಘಟನೆಗಳು ಸಂತಾಪ ಸಭೆ ನಡೆಸಿದ ಸುದ್ದಿಗಳು ಇನ್ನೂ ಬರುತ್ತಲೆ ಇವೆ.

ಸಾಂಸ್ಕೃತಿಕ ಮಾರ್ಗದರ್ಶಿ

ಕರ್ನಾಟಕ ಎದುರಿಸಿದ ಎಲ್ಲಾ ಸಾಂಸ್ಕೃತಿಕ ಸವಾಲುಗಳಿಗೆ ಪಿ. ರಾಮಚಂದ್ರರಾವ್ ಅವರು ಸಮರ್ಥ ಮಾರ್ಗದರ್ಶನ ಮಾಡುವುದರ ಮೂಲಕ ಪರಿಹಾರ ಒದಗಿಸಿದ್ದರು ಎಂದು ನಾಟಕಕಾರ ಪ್ರೊ. ಆರ್.ಕೆ.ಹುಡುಗಿ ಅವರು ಅಭಿಪ್ರಾಯಪಟ್ಟರು.

'ಸಮುದಾಯ' ರಂಗತಂಡ ಪಿ. ರಾಮಚಂದ್ರರಾವ್ ಅವರ ಸ್ಮರಣಾರ್ಥ ಏರ್ಪಡಿಸಿದ್ದ 'ಪಿ.ಆರ್. ನಮನ' ಸಾಂಸ್ಕೃತಿಕ ಅಧ್ಯಯನ ಶಿಬಿರವನ್ನು ಉದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಕಲೆಗಾಗಿ ಕಲೆ ಅಲ್ಲ ಎಂದು ಬಲವಾಗಿ ನಂಬಿದ್ದ ಪಿ. ರಾಮಚಂದ್ರರಾವ್ ಅವರು ಜನಪರ ರಂಗತಂಡ ಕುಡಿಯೊಡೆಯಲು ಕಾರಣರಾದರು. ಕಲೆ ಜನಸಮೂಹದ ಒಳಿತಿಗಾಗಿ ದುಡಿಯಬೇಕು ಎಂದು ಅವರು ನಂಬಿದ್ದರು.

ಕರ್ನಾಟಕದಲ್ಲಿ ಹಲವು ದಶಕಗಳ ಕಾಲ ಈ ಕಲಾನಂಬಿಕೆ ಜೀವಂತವಾಗಿರುವಂತೆ ನೋಡಿಕೊಂಡರು. ಮಾರ್ಗದರ್ಶನ ನೀಡಿದರು. ಅವರ ಅಗಲಿಕೆಯಿಂದ ಒಬ್ಬ ಉತ್ತಮ ಮಾರ್ಗದರ್ಶಿಯನ್ನು, ಒಬ್ಬ ಉತ್ತಮ ಮಿತ್ರನನ್ನು ರಂಗಭೂಮಿ ಕಳೆದುಕೊಂಡಿದೆ ಎಂದು ಅವರು ಶೋಕಿಸಿದರು.

ಕಲೆಯಿಂದ ಸಮಾಜ ಬದಲಾವಣೆ ಸಾಧ್ಯವಿಲ್ಲದಿರಬಹುದು. ಆದರೆ ಕಲೆ ಸಮಾಜದ ಬದಲಾವಣೆಯ ನಿಟ್ಟಿನಲ್ಲಿ ವೇಗವರ್ಧಕವಾಗಿ ಕಾರ್ಯ ನಿರ್ವಹಿಸುತ್ತದೆ ಎಂದು ನಂಬಿದ್ದ ರಾಮಚಂದ್ರರಾವ್ ಅವರ ಹೆಜ್ಜೆಗಳಲ್ಲಿ ಇಂದಿನ ರಂಗಕರ್ಮಿಗಳು ಸಾಗಬೇಕು ಎಂದರು.

ಎಸ್.ಬಿ. ಸಜ್ಜನ್ ಅವರು ಮಾತನಾಡಿ ಕಲೆಯ ಬಗ್ಗೆ ಸಮರ್ಥವಾಗಿ ಮಾತನಾಡುತ್ತಿದ್ದ, ಪರಿಷ್ಕರಣವಾದವನ್ನು ಎದುರಿಸಿದ, ಹಲವು ವಿಭಾಗಗಳಲ್ಲಿ ಜನ ಚಳುವಳಿಯನ್ನು ಬೆಳೆಸಿದ ರಾಮಚಂದ್ರ ರಾಯರ ನಿಧನದಿಂದಾಗಿ ಸಾಕಷ್ಟು ನಷ್ಟ ಉಂಟಾಗಿದೆ, ಜನಪರ ನಂಬಿಕೆಗಳ ಮೇಲೆ ದಾಳಿ ನಡೆಯುತ್ತಿರುವ ಈ ದಿನಗಳಲ್ಲಿ ಇವರ ಅಗತ್ಯ ಹೆಚ್ಚಾಗಿತ್ತು ಎಂದರು.

ಸಮುದಾಯದ ಕಾರ್ಯದರ್ಶಿ ಶಂಕ್ರಯ್ಯಾ ಘಂಟಿ, ಡಾ॥ ಕಾಶಿನಾಥ್ ಅಂಬಲಗೆ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪತ್ರಕರ್ತ ಜಿ.ಎನ್. ಮೋಹನ್ ಅವರು ಪಿ.ಆರ್. ಅವರ ಸಾಂಸ್ಕೃತಿಕ ಕಾಳಜಿಯನ್ನು ವಿವರಿಸಿದರಲ್ಲದೆ ಕೋಮುವಾದ ಹಾಗೂ ಉದಾರೀಕರಣದ ಅಬ್ಬರದ ಈ ದಿನಗಳಲ್ಲಿ ಪಿ.ಆರ್. ಅವರು ನಮ್ಮೊಂದಿಗಿರಬೇಕಾಗಿತ್ತು ಎಂದು ಸ್ಮರಿಸಿದರಲ್ಲದೆ 'ಸಾಂಸ್ಕೃತಿಕ ಸವಾಲುಗಳು' ಕುರಿತು ಉಪನ್ಯಾಸ ನೀಡಿದರು.

ಧಾರವಾಡದಲ್ಲಿ ಶ್ರದ್ಧಾಂಜಲಿ: ಸರಳಜೀವಿ, ಉನ್ನತ ಚಿಂತಕ

ಧಾರವಾಡ: ಸೆ. 26ರಂದು ಹುಬ್ಬಳ್ಳಿ ಧಾರವಾಡದ ವಿವಿಧ ಸಾಮೂಹಿಕ ಸಂಘಟನೆಗಳ ಆಶ್ರಯದಲ್ಲಿ ಧಾರವಾಡದ ವಿದ್ಯಾವರ್ಧಕ ಸಂಘದ ಸಭಾಂಗಣದಲ್ಲಿ ಪ್ರೀತಿಯ ಮಾಸ್ಟ್ರ- ಕಾ.ಪಿ.ರಾಮಚಂದ್ರ ರಾವ್ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಲಾಯಿತು. ಕ.ವಿ.ವಿ.ಯ ನಿವೃತ್ತ ಪ್ರಾಧ್ಯಾಪಕರೂ, ಕರ್ನಾಟಕ ಸಮಾಜ ವಿಜ್ಞಾನ ಕೇಂದ್ರದ ಗೌರವ ನಿರ್ದೇಶಕರೂ ಆದ ಡಾ: ವಿ.ಎನ್.ದೇಶಪಾಂಡೆ ಶ್ರದ್ಧಾಂಜಲಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಪಿ.ಆರ್.ರವರ ಸರಳ ಜೀವನ ಹಾಗೂ ಉನ್ನತ ಚಿಂತನ ವಿಧಾನವನ್ನು ಸ್ಮರಿಸಿಕೊಂಡರು. 1980 ದಶಕದಲ್ಲಿ ಕಾರ್ಲ್‌ಮಾರ್ಕ್ಸ್‌ರ ಶತಮಾನ ಆಚರಣೆಯ ಸಂದರ್ಭ ಧಾರವಾಡದಲ್ಲಿ ಕರ್ನಾಟಕ ಸಮಾಜ ವಿಜ್ಞಾನ ಕೇಂದ್ರವನ್ನು ಸ್ಥಾಪಿಸುವಲ್ಲಿ ಪಿ.ಆರ್. ಅವರ ಪ್ರೇರಣೆ ಹಾಗೂ ಮಾರ್ಗದರ್ಶನವನ್ನು ನೆನಪಿಸಿದರು. ಪಿ.ಆರ್. ಒಬ್ಬ ವ್ಯಕ್ತಿ ಮಾತ್ರ ಅಲ್ಲ, ನಮ್ಮ ರಾಜ್ಯದ ರೈತ- ಕಾರ್ಮಿಕರ ಮತ್ತು ಕಮ್ಯುನಿಸ್ಟ್ ಆಂದೋಲನಗಳನ್ನು ಪ್ರತಿನಿಧಿಸುವ ಮಹಾ ಚೇತನ ಎಂದು ಅವರ ಆದರ್ಶಗಳನ್ನು ನಾವು ಉಳಿಸಿ ಬೆಳೆಸಬೇಕೆಂದು ಕರೆನೀಡಿದರು.

ವಿಮಾ ನೌಕರರ ಮುಖಂಡರಾದ ಎಂ.ಕೆ.ದೇಶಪಾಂಡೆ ಪಿ.ಆರ್. ಅವರು ಮಾರ್ಕ್ಸ್‌ವಾದದೊಂದಿಗೆ ವಿಜ್ಞಾನ ಖಗೋಳಶಾಸ್ತ್ರ, ತತ್ವಜ್ಞಾನ ಭಾಷಾ ಶಾಸ್ತ್ರ, ಕಲೆ ಸಾಹಿತ್ಯ ಮುಂತಾದವುಗಳಲ್ಲಿಯೂ ತಜ್ಞರಾಗಿದ್ದರೆಂದೂ ತಿಳಿಸಿದರು.

ಪಿ.ಆರ್. ಶಾಸಕರಾಗಿ ಬಿ.ಡಿ. ಕಾರ್ಮಿಕರ ಮತ್ತು ಹಂಚಿನ ಕಾರ್ಖಾನೆಯ ಕಾರ್ಮಿಕರ ಸಂಘಟಕರಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ನಂತರ ಇಡೀ ರಾಜ್ಯದಲ್ಲಿ ಅಪೂರ್ವ ಸೇವೆ ಸಲ್ಲಿಸಿರುವುದನ್ನು ಸಿಐಟಿಯು ಮುಖಂಡರಾದ ಎಂ.ಬಿ.ಕಟ್ಟಿ ಸ್ಮರಿಸಿದರು. ಅವರು ವಿದ್ಯಾರ್ಥಿ ಯುವಜನರ ಪ್ರಾಣ ಮಿತ್ರರಾಗಿದ್ದರು ಎಂದ ಎಸ್.ಎಫ್.ಐ. ಧುರೀಣರಾದ ಅಬ್ದುಲ್ ರಜಾಕ್ ಮುಲ್ಲಾ "ಸಂಗಾತಿಗಳು ಬಿದ್ದ ಮರಗಳಲ್ಲ, ಬಿತ್ತಿದ ಬೀಜಗಳು" ಎಂದು ಪಿ.ಆರ್ ಹೇಳುತ್ತಿದ್ದುದನ್ನು ನೆನಪಿಸಿಕೊಟ್ಟರು.

ಯುವಜನರ (ಡಿ.ವೈ.ಎಫ್.ಐ.) ಮುಖಂಡರಾದ ರವೀಂದ್ರ, ಕುಮಾರ್ ಹೊನವಾಡ ಈ ಸಂದರ್ಭದಲ್ಲಿ ಮಾತನಾಡುತ್ತ ಪಿ.ಆರ್. ಅವರ ಬಹುಮುಖ ಪ್ರತಿಭೆಗಳನ್ನು ನೆನಪಿಸಿಕೊಂಡರು ಮತ್ತು ರಾಜ್ಯ ಜನಕಲಾ ಮಂಡಳಿ (ಇಪ್ಟಾ) ಯ ಸಂಚಾಲಕರೂ ಸಿಪಿಐ ಧುರೀಣರೂ ಆದ ಸಿದ್ದನಗೌಡ ಪಾಟಿಲ ಪಿ.ಆರ್ ಅವರು 1980ರ ದಶಕದಲ್ಲಿ ಧಾರವಾಡ ಜಿಲ್ಲೆಯ ನರಗುಂದ ನವಲಗುಂದ ರೈತರ ಹೋರಾಟದಲ್ಲಿ ನಿರ್ವಹಿಸಿದ ಮಹತ್ವದ ಪಾತ್ರವನ್ನು ನೆನಪಿಸಿಕೊಟ್ಟರು.

ರಾಜ್ಯ ಭಾರತ ಜ್ಞಾನ ವಿಜ್ಞಾನ ಸಮಿತಿಯ ಶ್ರೀಧರ ಮೂರ್ತಿ ಪಿ.ಆರ್ ಮಾಸ್ಟ್ರ ಮಾತ್ರ ಆಗಿರಲಿಲ್ಲ, ಅವರು ನಿರಂತರವಾಗಿ ವಿದ್ಯಾರ್ಥಿಯೂ ಆಗಿದ್ದರು, ಯಾವುದೇ ಸಭೆ ಸಮಾವೇಶಗಳಲ್ಲಿ ಪಿ.ಆರ್. ಪ್ರಾರಂಭದಿಂದ ಕೊನೆಯವರೆಗೆ ತದೇಕಚಿತ್ತದಿಂದ ಹಾಜರಾಗುತ್ತಿದ್ದರು ಎಂದರು.

ರಾಜ್ಯ ಸಮತಾ (ಮಹಿಳಾ) ಸಂಘಟನೆಯ ಧುರೀಣೆಯಾದ ಸೌಭಾಗ್ಯ ಪಿ.ಆರ್.ಅವರ ಸ್ನೇಹ ಹಾಗೂ ಸಹೃದಯತೆಯನ್ನು ಮತ್ತು ಮಹಿಳಾ ಸಂಘಟನೆಗೆ ಪಿ.ಆರ್. ಅವರ ಅಪೂರ್ವ ಕೊಡುಗೆಯನ್ನು ಕೃತಜ್ಞತೆ ಯಿಂದ ಸ್ಮರಿಸಿದರು.

ಕೊನೆಯಲ್ಲಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಸಮಿತಿಯ ಸದಸ್ಯರೂ, ಧಾರವಾಡ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮಂಡಳಿಯ ಸದಸ್ಯರೂ ಆದ ಸಿ.ಆರ್.ಭಟ್, ಪಿ.ಆರ್.ಒಬ್ಬ "ಆದರ್ಶ ಕಮ್ಯುನಿಸ್ಟ್" ಆಗಿದ್ದರೆಂದೂ, ಕಮ್ಯುನಿಸ್ಟ್ ಸದಸ್ಯನಾಗಿ ಪ್ರವೇಶಿಸುವಾಗ ಮಾಡಿದ ಪ್ರತಿಜ್ಞೆಗೆ ಅನುಗುಣವಾಗಿ ಖಾಸಗಿ ಹಿತಾಸಕ್ತಿಗಳಿಗಿಂತ ದುಡಿಯುವ ವರ್ಗದ, ಜನಕೋಟಿಯ ಮತ್ತು ಸಮಾಜದ ಹಿತಾಸಕ್ತಿಗಳಿಗೇ ಅವರು ತಮ್ಮ ಜೀವನವಿಡೀ ಹೆಚ್ಚು ಆದ್ಯತೆ ಕೊಟ್ಟಿರುವರೆಂದೂ ಕೊಂಡಾಡಿದರು.

ಮುಂದಿನ ದಿನಗಳಲ್ಲಿ ದೇಶದಲ್ಲಿ ಸಾಮ್ರಾಜ್ಯಶಾಹಿಗಳ ಹಾಗೂ ಫ್ಯಾಸಿಸ್ಟ್ ಕೋಮುವಾದಿಗಳ ಆಕ್ರಮಣವನ್ನು ಹಿಮ್ಮೆಟ್ಟಿಸಲು ಸೈದ್ಧಾಂತಿಕ ಹೋರಾಟ ನಡೆಸಲು ಸಮುದಾಯದಂತಹ ಸಾಂಸ್ಕೃತಿಕ ಸಂಘಟನೆಗಳಿಗೆ ಪಿ.ಆರ್ ಅವರ ಅನುಭವಗಳು ಹಾಗೂ ಚಿಂತನೆಗಳು ತುಂಬಾ ಸಮರ್ಪಕವಾಗಿವೆ ಎಂದರು.

ನಂತರ ಪಿ.ಆರ್ ಅವರಿಗೆ ಶ್ರದ್ಧಾಂಜಲಿ ಸೂಚಿಸುವ ಮತ್ತು ಅವರ ಕುಟುಂಬದವರಿಗೆ ಸಂತಾಪ ಸೂಚಿಸುವ ಒಂದು ಠರಾವನ್ನು ಅಂಗೀಕರಿಸಲಾಯಿತು. ಸಮುದಾಯದ ಕಾರ್ಯದರ್ಶಿ ಬಿ.ಐ.ಇಳಿಗೇರ, ಕಾರ್ಯಕ್ರಮ ನಿರ್ವಹಿಸಿದರು. ಸಿಐಟಿಯು ವಿನ ಧುರೀಣರಾದ ಡಿ.ಜಿ. ಗೊಂದಕರ ವಂದಿಸಿದರು. ಯುವಜನ ಮುಖಂಡರೂ ಕಲಾವಿದರೂ ಆದ ಮಹೇಶ ಪತ್ತಾರ ಶ್ರದ್ಧಾಂಜಲಿ ಸಭೆಯ ಬ್ಯಾನರ್ ಮತ್ತು ಪಿ.ಆರ್. ಅವರ ಭಾವಚಿತ್ರವನ್ನು ಹೃದಯಸ್ಪರ್ಶಿಯಾಗಿ ಬಿಡಿಸಿಕೊಟ್ಟು ಸಹಕರಿಸಿದರು. ಸಭೆಯಲ್ಲಿ ವಿವಿಧ ಸಂಘಟನೆಗಳಿಂದ ಕಾರ್ಮಿಕರು, ರೈತರು, ನೌಕರರು, ಮಹಿಳೆಯರು, ಕಲಾವಿದರು, ವಿದ್ಯಾರ್ಥಿಗಳು, ಯುವಜನರು ಭಾಗವಹಿಸಿದ್ದರು.

ಅಣಕ
ಶರತ್‌ಚಂದ್ರ

ಸ್ಕೂಲಲ್ಲೂ ಸಂಸ್ಕೃತ ಬೇಕು.....

ನಮ್ಮ ಕಛೇರಿಗೆ ಒಂದು ಪತ್ರ ಬಂದಿದೆ. ಒಂದು ಕಾಲೇಜಿನ ಕೆಲವು ವಿದ್ಯಾರ್ಥಿಗಳು ಕೇಂದ್ರ ಶಿಕ್ಷಣ ಮಂತ್ರಿ ಡಾ॥ ಮು.ಮ. ಜೋಶಿಯವರಿಗೆ ಬರೆದ ಪತ್ರ. ಯಥಾವತ್ತಾಗಿ ಪ್ರಕಟಿಸುತ್ತಿದ್ದೇವೆ. .... ಎನ್ನುವಲ್ಲಿ ಕೆಲವು ಶಬ್ದಗಳನ್ನು ನಮ್ಮ ಸಂಗಾತಿ ಕಂಪೋಸ್ ಮಾಡಲು ನಿರಾಕರಿಸಿದ್ದರಿಂದ ಬಿಡಲಾಗಿದೆ. ಆದರೆ ಅದು ಸೆನ್ಸಾರ್ ಅಲ್ಲ ಎಂದು ಗಮನಿಸಬೇಕು.

ಮಾನ್ಯ ಜೋಶಿ ಮೇಸ್ಟ್ರೇ,

ನೀವು ರಾಜ್ಯ ಶಿಕ್ಷಣ ಮಂತ್ರಿಗಳ ಸಭೆ ಕರೆದು ನಮ್ಮ ದೇಶದ ಶಿಕ್ಷಣದಲ್ಲಿ ಭಾರಿ ಬದಲಾವಣೆ ಮಾಡಬೇಕು ಅಂತಿದ್ದೀರಿ. ಆದರೆ ಅದಕ್ಕೆ ವಿರೋಧ ಬಂದು ಕೈ ಬಿಟ್ಟಿದ್ದೀರಿ ಎಂದು ಪತ್ರಿಕೆಯಲ್ಲಿ ಓದಿ ಖೇದವಾಯಿತು. ನಿಮ್ಮ ಎಲ್ಲಾ ಸಲಹೆಗಳು ನಮಗೆ ಅರ್ಥವಾಗಲಿಲ್ಲ. ಆದರೆ ನಿಮ್ಮ ಒಂದು ಸಲಹೆ ಮಾತ್ರ ನಮಗೆ ಇಷ್ಟವಾಯಿತು. ಅದಕ್ಕೆ ಬೆಂಬಲ ಸೂಚಿಸಿ ಈ ಪತ್ರ.

ನಿಮಗೆ ಗೊತ್ತಿದೆ. ನೀವು ಕಾಲೇಜು ಮೇಸ್ಟ್ರು ತಾನೇ! ಸ್ಕೂಲು ಕಾಲೇಜುಗಳಲ್ಲಿ ಇಂಗ್ಲೀಷು. ಬೇರೆ ಮಾತನಾಡಿದರೆ ಬೆಂಡು. ಮನೆಯಲ್ಲಿ ಕನ್ನಡ. ಇನ್ನು ಸಂಸ್ಕೃತ ಮಾತನಾಡುವುದು ಎಲ್ಲಿ? ಬೀದಿಯಲ್ಲಿ ಮಾತ್ರ. ಮನೆಯಲ್ಲಿ ಸಂಸ್ಕೃತ ಮಾತನಾಡಲು ಹೋದರೆ ಬೆಂಡು. ಆದ್ದರಿಂದ ಸ್ಕೂಲು ಕಾಲೇಜುಗಳಲ್ಲಿ ಸಂಸ್ಕೃತ ಮಾತನಾಡ... ಕಲಿಸಬೇಕು ಎಂಬ ನಿಮ್ಮ ಸಲಹೆ ಸರಿ.

ನೀವು, ನಿಮ್ಮ ಪಕ್ಷದವರಿಗೆ, ಸ... ಪರಿವಾರದವರಿಗೆ ಮಾತ್ರ ಪಬ್ಲಿಕ್ಕಾಗಿ ಸಂ... ಮಾತನಾಡುವ ಧೈರ್ಯ ಇದೆ. ಸಾ... ರಿತಾಂಬರ್, ಉಮಾ ಭಾರತಿ, ಅಶೋ... ಸಿಂಘಾಲ್, ವಿನಯ ಕಟಿಯಾರ್ ಪಬ್ಲಿ... ಸಂಸ್ಕೃತ ಮಾತನಾಡಿದ್ದು ಕೇಳಿ ನಮಗೆ ... ಆಗಿತ್ತು. ಹಾಗೆ ನಮಗೆ ಪಬ್ಲಿಕ್ಕಾಗಿ ಬ... ಮನೆಯಲ್ಲಿ ಮಾತನಾಡಿದರೂ ಅಮ್ಮ ... ಹಾಕುವುದಿಲ್ಲ.

ನಮ್ಮ ಬೆಂಬಲ ನಿಮಗಿದೆ. ಸ್ಕೂ... ಕಾಲೇಜುಗಳಲ್ಲಿ, ಮನೆಗಳಲ್ಲೂ ಸಂ... ಮಾತನಾಡಲು ಬಿಡಬೇಕು. ಅ... ವಿರೋಧಿಸುವ .... ಮಕ್ಕಳನ್ನೆಲ್ಲಾ ಒದ್ದು ಒಳಗೆ ಹಾಕಬೇ... (ಈಗಲೇ ಸಂಸ್ಕೃತ ಬರೆಯ... ಆರಂಭಿಸಿದ್ದೇವೆ ನೋಡಿ)

ಸಂಸ್ಕೃತ ನಮಗೆ ಸ್ಕೂಲ್ ಕಾಲೇ... ಗಳಲ್ಲಿ ಬೇಕು. ಅದನ್ನು ವಿರೋಧಿ... .... ಮಕ್ಕಳನ್ನೆಲ್ಲಾ ಮಟ್ಟ ... ಅದನ್ನು ತನ್ನಿ. ನಾವು ನಿಮ್ಮೊಂದಿಗಿದ್ದ... ಈ .... ಮಕ್ಕಳನ್ನೆಲ್ಲಾ ನ... ನೋಡ್ಕೊಂತೀವಿ.

ಸರಸ್ವತಿ ಕಾಲೇಜು ಪಡ್ಡೆ ಹುಡು...

"ಮಾಸ್ಟ್ರು ನೆಮ್ಮದಿಯಿಂದ ನಿದ್ದೆ ಮಾಡಿದ ದಿನ..."

"ನೋಡೋ ನಾನು ಈ ದಿನ ರಾತ್ರಿ ನೆಮ್ಮದಿಯಿಂದ ನಿದ್ದೆ ಮಾಡ್ತೇನೆ".. ನನ್ನ ಕೈಯಲ್ಲಿ ಎರಡು ಸಾವಿರ ರೂಪಾಯಿಗಳನ್ನು ಇಟ್ಟು ಕಾಂ॥ ಪಿ.ಆರ್. ಕಳೆದ ವರ್ಷ ಹೇಳಿದ ಮಾತಿದು.


ನಾನೊಬ್ಬ ಹಾಡುಗಾರ ಎಂದು ಗೊತ್ತಾದ ದಿನಗಳಿಂದಲೇ ನನ್ನನ್ನು ಅತ್ಯಂತ ಪ್ರೀತಿಯಿಂದ ಪ್ರೋತ್ಸಾಹಿಸುತ್ತಿದ್ದ ಮಾಸ್ಟ್ರು, ನನ್ನಲ್ಲಿರುವ ಎಲ್ಲಾ ಹಾಡುಗಳನ್ನು ಮುದ್ರಣ ಮಾಡಿ 'ಪುಸ್ತಕ ರೂಪದಲ್ಲಿ' ಹೊರ ತರಲು ನಾನು ಭೇಟಿಯಾದಾಗಲೆಲ್ಲಾ ಹೇಳುತ್ತಿದ್ದರು. ಅದಕ್ಕಾಗಿ ಏನಾದರೂ ಸಹಾಯ ಮಾಡೋಣವೆಂದು ಸಿಕ್ಕಾಗಲೆಲ್ಲಾ ಹೇಳುತ್ತಿದ್ದರು. ಅದು ಕೈಗೂಡಲು ಸುಮಾರು ಎರಡು ವರ್ಷ ಬೇಕಾಯಿತು.

ಸುಮಾರು ಒಂದೂವರೆ ವರ್ಷದ ಕೆಳಗೆ ನಾನು ಬೆಂಗಳೂರಿಗೆ ಬಂದಿದ್ದೆ. ಅಂದು ಬೆಳಗ್ಗೆ ಕಾಂ॥ ಪಿ.ಆರ್. ಪಕ್ಷದ ಕಛೇರಿಗೆ ಬಂದವರೆ... 'ಏ, ಬಾರೋ ಇಲ್ಲಿ' ಎಂದು ಕರೆದು ನನ್ನ ಕೈಲಿ ಎರಡು ಸಾವಿರ ರೂಪಾಯಿಗಳನ್ನು ಇಟ್ಟರು ನಂತರ..... ನನ್ನ ಎರಡು ಭುಜಗಳ ಮೇಲೆ ಕೈ ಹಾಕಿ ಹೇಳಿದರು - 'ನೋಡೋ ನಾನು ಈ ರಾತ್ರಿ ನೆಮ್ಮದಿಯಿಂದ ನಿದ್ದೆ ಮಾಡ್ತೇನೆ' ನಿನ್ನ ಹಾಡಿನ ಪುಸ್ತಕ ಕೂಡಲೇ ಪ್ರಿಂಟ್ ಮಾಡಿಸು, ಎಲ್ಲಾ ಜಿಲ್ಲೆಗಳಿಗೂ ಕಳಿಸೋಣ... ನೋಡು ಮುಂದಿ... ದಿನಗಳಲ್ಲಿ ಒಂದು ಹಾಡಿನ ತಂಡಕ್ಕೆ ನಿ... ಯಾವ್ಯಾವ ಇನ್‌ಸ್ಟ್ರುಮೆಂಟ್ಸ್ ಬೇಕೋ... ಒಂದೊಂದೆ ತೆಗೆದುಕೊಳ್ಳೋಣ ಎಂದು ಆ ... ಕಾಂ॥ ಪಿ.ಆರ್. ನನ್ನನ್ನು ಹ... ದುಂಬಿಸಿದಾಗ ನನ್ನ ಕಣ್ಣಲ್ಲಿ ಸ್ಫೂರ್ತಿ... ಹನಿ ಹೊರ ಬಂದಿದ್ದವು. ಹಾಡಿನ ಪು... ಮುದ್ರಣ. ತಡವಾದಾಗಲೂ ನ... ಬೈದು.... ಕೊನೆಗೂ ಎಸ್.ಎಫ್.... ಹಾಗೂ ಚಿಂತನ ಪ್ರಕಾಶನದ ಸಹಾ... ದಿಂದ ಪಕ್ಷದ 16ನೇ ರಾಜ್ಯ ಸಮ್ಮೇಳ... ಕೋಲಾರದಲ್ಲಿ ನಡೆದಾಗ 'ಗೆಲು... ನಮ್ಮದು' 'ಹೋರಾಟದ ಹಾಡುಗಳ' ಪುಸ್ತಕವನ್ನು ಹೊರತರಲಾಯ್ತು.

ಆದರೆ...... ದುಡಿಯುವ ಜನತೆ... ವಿಮೋಚನೆಗಾಗಿ ಹಗಲಿರು... ದುಡಿಯುತ್ತಿದ್ದ ಹಿರಿ ಚೇತನ ಆ ... ಆಶಯಗಳನ್ನು ಸಾಕಾರಗೊಳಿಸ... ಸ್ಫೂರ್ತಿಯೊಂದಿಗೆ ದೂರದ ದೆಹ... ತೆರಳಿದ್ದ ಕಾಂ॥ ಪಿ.ಆರ್. ಕೊನೆ... ಸೆಪ್ಟಂಬರ್ 18ರ ರಾತ್ರಿ ಸಂಪೂರ್ಣ... ನೆಮ್ಮದಿಯೊಂದಿಗೆಯೇ ನಮ್ಮಿಂದ... ಬಂದರು... ಯುವ ಜನಾಂಗಕ್ಕೆ ಸ... ದಾರಿ ದೀಪವಾಗಿದ್ದ ಮಾಸ್ಟ್ರಿಗೆ ಅಂತಿ... ನಮನಗಳು..

- ಕೆ. ಮಹಾಂತೇ...

ವಾರದ ವ್ಯಂಗ್ಯ ಚಿತ್ರ
ಎಕನಾಮಿಕ್ಸ್ ಟೈಮ್ಸ್‌ನಲ್ಲಿ ಸಲು...



Reg. No. 17015/64 KRNM/BGS-405 MAG (2) PRB DECR 319-79/79 AIKYARANGA WEEKLY

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡ ರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India (Marxist), Karnataka State Committee. Editor: G.N. NAGARAJ